ಮಾರ್ಚ್
2026

ಸಂಪುಟ 41
ಸಂಚಿಕೆ 3

# ಪ್ರಸಾದ

## ಮಾಸಿಕ



ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು




ಮೈಸೂರಿನ ಜೆಎಸ್ಎಸ್ ಆಸ್ಪತ್ರೆಯಲ್ಲಿ ಕ್ಯಾತ್‌ಲ್ಯಾಬ್, ಅತ್ಯಾಧುನಿಕ ಎಐ ಆಧಾರಿತ ಸಿಟಿ ಸ್ಕ್ಯಾನರ್, ಉನ್ನತಿಕರಿಸಿದ ಎಂಆರ್‌ಐ, ನರಶಸ್ತ್ರಚಿಕಿತ್ಸಾ ಸೂಕ್ಷ್ಮದರ್ಶಕಯಂತ್ರ ಹಾಗೂ ತಾಯಿ ಎದೆಹಾಲಿನ ಬ್ಯಾಂಕ್‌ಗಳ ಉದ್ಘಾಟನೆಯು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನೆರವೇರಿತು. ಡಾ. ಸಿ.ಪಿ. ಮಧು, ಡಾ. ಬಿ. ಸುರೇಶ್, ಶ್ರೀಮತಿ ನಾಗಲಕ್ಷ್ಮೀ ಚೌಧರಿ, ಡಾ. ಶರಣಪ್ರಕಾಶ ಆರ್. ಪಾಟೀಲ, ಶ್ರೀ ಪಿ.ಎಂ. ನರೇಂದ್ರಸ್ವಾಮಿ, ಶ್ರೀ ಟಿ.ಎಸ್. ಶ್ರೀವತ್ಸ, ಪ್ರೊ. ಎಸ್.ಪಿ. ಮಂಜುನಾಥ್, ಡಾ. ಹೆಚ್. ಬಸವನಗೌಡಪ್ಪನವರುಗಳಿದ್ದಾರೆ (29 ಮಾರ್ಚ್ 2026)

# ಪ್ರಸಾದ

**ಸಂಪುಟ 41 : ಸಂಚಿಕೆ 3** **ಮಾರ್ಚ್ 2026**

**ಡಾ. ಎಂ.ಎನ್. ನಂದೀಶ್ ಹಂಚೆ**
ಸಂಪಾದಕರು

**ಜೆಎಸ್‌ಎಸ್ ಮಹಾವಿದ್ಯಾಪೀಠ**
ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ
ಮೈಸೂರು 570 004
ದೂರವಾಣಿ : 0821–2548212, Extn. 49



**ಸಂಸ್ಥಾಪಕರು**

ಶ್ರೀಮನ್ಮಹಾರಾಜ ರಾಜಗುರುತಿಲಕ

**ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು**

**ಅಧ್ಯಕ್ಷರು**

**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು**

**ಸಂಪಾದಕ ಸಲಹಾ ಸಮಿತಿ**

ಡಾ. ಶ್ರೀ ಶರತ್‌ಚಂದ್ರ ಸ್ವಾಮಿಗಳು
ಡಾ. ಸಿ.ಜಿ. ಬೆಟಸೂರಮಠ
ಶ್ರೀ ಎಸ್.ಪಿ. ಮಂಜುನಾಥ್
ಡಾ. ಎನ್.ಎಸ್. ತಾರಾನಾಥ
ಡಾ. ಬಿ.ವಿ. ವಸಂತಕುಮಾರ್
ಡಾ. ವೈ.ಸಿ. ಭಾನುಮತಿ
ಪ್ರೊ. ಮೊರಬದ ಮಲ್ಲಿಕಾರ್ಜುನ

**ಸಂಪಾದಕ ಸಮಿತಿ**

ಡಾ. ಎಂ.ಎನ್. ನಂದೀಶ್ ಹಂಚೆ (ಸಂಪಾದಕರು)
ಶ್ರೀ ಆರ್.ಎಸ್. ಪೂರ್ಣಾನಂದ
ಶ್ರೀ ಕುಮಾರಸ್ವಾಮಿ ವಿರಕ್ತಮಠ

---

ಸಾಹಿತ್ಯ, ಸಂಸ್ಕೃತಿ, ಕಲೆ, ಧರ್ಮ, ವಿಜ್ಞಾನ, ಶಿಕ್ಷಣ, ಆರೋಗ್ಯ ಮುಂತಾದ ವಿಷಯಗಳ ಬಗ್ಗೆ ವಿಚಾರಪೂರ್ಣ ಲೇಖನಗಳಿಗೆ ಸ್ವಾಗತವಿದೆ. ಬರಹಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರವು

---

ಮುಖಪುಟ ಚಿತ್ರ

ಮೈಸೂರು ಶ್ರೀ ಸುತ್ತೂರು ಮಠಕ್ಕೆ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರಾದ ಗೌ.ನ್ಯಾ. ಶ್ರೀ ವಿ. ರಾಮಸುಬ್ರಮಣಿಯನ್‌ರವರು ಧರ್ಮಪತ್ನಿ ಸಮೇತರಾಗಿ ಭೇಟಿ ನೀಡಿದ ಸಂದರ್ಭದಲ್ಲಿ ಪರಮಪೂಜ್ಯ ಜಗದ್ಗುರುಗಳವರು ಸನ್ಮಾನಿಸಿ ಗೌರವಿಸಿದರು (14 ಮಾರ್ಚ್ 2026)

**ದಶವಾರ್ಷಿಕ ಚಂದಾ : 500/- * ಬಿಡಿ ಪ್ರತಿ : 10/-**

# ಪರಿವಿಡಿ


ಗುರುವಾಣಿ 5

ಸಂಪಾದಕೀಯ 7

ಓಂ–ಉದ್ಗೀಥ 9
ಶ್ರೀ ಸಿದ್ಧೇಶ್ವರ ಸ್ವಾಮಿಗಳು
(ಪ್ರವಚನಸಾರ)

ಆಶ್ರಯ ನೀಡಿದ ಶ್ರೀಮಠ 14
ಡಾ. ಜಿ.ಎಸ್. ಶಿವರುದ್ರಪ್ಪ

ಶಬರಶಂಕರ ವಿಲಾಸ ಟೀಕು : ದ್ವಿತೀಯಾಶ್ವಾಸ 18
ಸಿದ್ಧಾಂತಿ ಶಿವಶಂಕರ ಶಾಸ್ತ್ರಿಗಳು
(ವೀರಶೈವ ಟೀಕು ಸಾಹಿತ್ಯ ಸರಣಿ)

ಕಡಕೋಳ ಮಡಿವಾಳಪ್ಪನ ತಾತ್ತ್ವಿಕ ನಿಲುವು
ವೆಂಕಟೇಶ ಕೆ. ಜನಾದ್ರಿ

ಶರಣರ ದೃಷ್ಟಿಯಲ್ಲಿ ಮಹಿಳೆ – ಒಂದು ಅವಲೋಕನ 30
ಎಚ್.ಎಸ್. ಸಿದ್ಧಗಂಗಪ್ಪ

ಕೇತಹಳ್ಳಿ ಗ್ರಾಮದೇವತೆ 37
ಕೆ.ಎಸ್. ಮಹದೇವಪ್ರಸಾದ್

ಏಕೋಭಾವದ ಅನುಭಾವಿಗಳ ಸಂಘದಿಂದ ಪರಮಸುಖ 41
ಸ.ರಾ. ಸುಳಕೂಡೆ

ವಾರ್ತಾವಿಹಾರ 50
ಕುಮಾರಸ್ವಾಮಿ ವಿರಕ್ತಮಠ

## ಕೆನೆ ಸಾಧ್ಯವಾದ ಬಳಿಕ ಹಾಲಿನ ಹಂಗೇತಕಯ್ಯ!

ಕೆಳದಿಯರೊಡನಾಡಿ
ಕಾಮ ಕಲಾ ಪ್ರೌಢಿಮೆಯನರಿದು
ಪ್ರಾಣಕಾಂತನ ಒಲಿಸಿ
ಸುರತ ಸಂಯೋಗದೊಳಿಪ್ಪ ಕಾಮಿನಿಗೆ
ಮತ್ತೆ ಕೆಳದಿಯರ ಒಡತಣ ವಿನೋದಕ್ಕೆ
ಮನವೆಳಸುವುದೇ ಅಯ್ಯ?

ಶರಣ ಸಂಭಾಷಣೆಯಿಂದ
ಪುರಾತನರ ವಚನದ ಪರಮಾಮೃತವ ದಣಿಯಲುಂಡು
ಆ ವಚನದ ಹೆಜ್ಜೆವಿಡಿದು ಹೋಗಿ
ತ್ರಿವಿಧ ಲಿಂಗದ ಆದ್ಯಂತಮಂ ಅರಿದು
ಆ ಲಿಂಗಂಗಳಂ ಅರಿವಿಡಿದಾಚರಿಸಿ,

ಷಡಂಗ ಷಡ್ವಿಧ ಲಿಂಗಂಗಳಿಗೆ ಮಾತೃಸ್ಥಾನವಾದ
ನಿಷ್ಕಳ ಬ್ರಹ್ಮವೆನಿಪಾ ಸಿದ್ಧಲಿಂಗ ಪ್ರಭುವಂ ಕಂಡು
ಆ ಸಿದ್ಧಲಿಂಗ ಪ್ರಭುವಂ
ಹೃದಯ-ತ್ರಿಪುಟಿ-ಸುಷುಮ್ನೆಯೆಂಬ
ಮೂರು ಸಿಂಹಾಸನದ ಮೇಲೆ
ಗುರು-ಲಿಂಗ-ಜಂಗಮವೆನಿಸಿ
ಮೂರ್ತಿಗೊಳಿಸಿಕೊಂಡು

ತುಂಬಿ (=ದುಂಬಿ) ತುಳುಕದ
ಮಂದಮಾರುತ ಮೈಸೋಂಕದ
ಭಾನುವಿನ ಕಿರಣಕ್ಕೆ ಬಳಲದ
ಚಂದ್ರೋದಯಕ್ಕೆ ಅಂದವಾಗದ
ಜನರ ಕಣ್ಮನಕ್ಕೆ ಅಗೋಚರವಾದ
ಜಾಜಿ-ಸಂಪಗೆ-ಇರವಂತಿಗೆ-ಮಲ್ಲಿಗೆ-ಕೆಂದಾವರೆ-ಸೇವಂತಿಗೆ ಎಂಬ
ಭಾವಪುಷ್ಪಂಗಳಲ್ಲಿ ಪೂಜೆಯಂ ಮಾಡಿ
ಬೀಗಿ ಬೆಳೆವುತ್ತಿಪ್ಪ ಶರಣಂಗೆ
ಮತ್ತೆ ಅನುಭಾವದ ಸುಖ ಸವಿದೋರುವುದೇ ಅಯ್ಯ!?
ಕೆನೆ ಸಾಧ್ಯವಾದ ಬಳಿಕ ಹಾಲಿನ ಹಂಗೇತಕಯ್ಯ
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ!

– ಘನಲಿಂಗಿದೇವರು

# ಗುರುವಾಣಿ

ಅಂಕೋಲಂ ನಿಜಬೀಜ ಸಂತತಿರಯಸ್ಕಾಂತೋಪಲಂ ಸೂಚಿಕಾ
ಸಾಧ್ವೀ ನೈಜವಿಭುಂ ಲತಾ ಕ್ಷಿತಿರುಹಂ ಸಿಂಧುಃ ಸರಿದ್ವಲ್ಲಭಮ್ ।
ಪ್ರಾಪ್ನೋತೀಹ ಯಥಾ ತಥಾ ಪಶುಪತೇಃ ಪಾದಾರವಿಂದದ್ವಯಂ
ಚೇತೋ ವೃತ್ತಿರುಪೇತ್ಯ ತಿಷ್ಠತಿ ಸದಾ ಸಾ ಭಕ್ತಿರಿತ್ಯುಚ್ಯತೇ ॥

ಶಂಕರಾಚಾರ್ಯರು ರಚಿಸಿದ ಪ್ರಸಿದ್ಧ ಸ್ತೋತ್ರ "ಶಿವಾನಂದ ಲಹರಿ"ಯ 60ನೇ ಶ್ಲೋಕವಿದು. ಮನುಷ್ಯನ ಮನಸ್ಸು ಭಗವಚ್ಛಕ್ತಿಯ ಕಡೆಗೆ ಹೇಗೆ ತಾನಾಗಿಯೇ ಸೆಳೆಯಲ್ಪಡುತ್ತದೆ ಎಂಬುದನ್ನು ಆರು ಉಪಮೆಗಳೊಂದಿಗೆ ಹೇಳುವ ಶಂಕರಾಚಾರ್ಯರು ಭಕ್ತಿಯ ಸ್ವರೂಪವನ್ನು ಸಲಕ್ಷಣವಾಗಿ ವಿವರಿಸಿದ್ದಾರೆ. ಅಂಕೋಲ ಮರದ ಬೀಜಗಳು ಕೆಳಗೆ ಬಿದ್ದರೂ ಮತ್ತೆ ಆ ತಾಯಿಮರದ ಕಡೆಗೆ ಆಕರ್ಷಿತವಾಗಿ ಸೇರುವಂತೆ, ಸೂಜಿಯು ಸೂಜಿಗಲ್ಲನ್ನು, ಗುಣವತಿಯಾದ ಹೆಂಡತಿಯು ತನ್ನ ಪತಿಯನ್ನು, ಬಳ್ಳಿಯು ಮರವನ್ನು, ನದಿಯು ಸಾಗರವನ್ನು ಹೇಗೆ ಸೇರುತ್ತವೆಯೋ ಹಾಗೆ ನನ್ನ ಚಿತ್ತವೃತ್ತಿಯೂ ಸಹ, ಹೇ ಪಶುಪತಿಯೆ, ನಿನ್ನ ಪಾದಕಮಲಗಳನ್ನು ಸೇರಿ ಎಂದೆಂದೂ ಅಲ್ಲೇ ನಿಲ್ಲುತ್ತದೆ. ಅದುವೇ ಭಕ್ತಿ.

ಶಂಕರಾಚಾರ್ಯರದ್ದು ಅದ್ವೈತ ಸಿದ್ಧಾಂತವನ್ನು ಪ್ರತಿಪಾದಿಸಿದುದು ಸರ್ವವಿದಿತ. ಭಕ್ತ ಮತ್ತು ಭಗವಂತರಿಬ್ಬರೂ ಅಭಿನ್ನರು. ಜಗತ್ತಿನ ಪ್ರತಿಯೊಂದು ಜೀವಿಯೂ ಭಗವಂತನ ಅಂಶವೇ. ಎಲ್ಲ ಜೀವಿಗಳ ಚೈತನ್ಯದಲ್ಲಿ ಭಗವಂತನ ಚಿದಾನಂದ ಸ್ವರೂಪವಿರುತ್ತದೆ. ದೇವನಿಂದ ದೂರವಾದ ಜೀವ ಮತ್ತೆ ದೇವನನ್ನು ಸೇರುತ್ತದೆ. ಅಜ್ಞಾನದಿಂದ ಜೀವನು ದೇವನಿಂದ ತನ್ನನ್ನು ಬೇರೆ ಎಂದು ಭಾವಿಸುತ್ತಾನೆ. ಈ ಭಾವನೆ ಬರುವುದಕ್ಕೆ ಜೀವವು ಹೊರಗಿನ ಇಂದ್ರಿಯಗಳನ್ನು ಅವಲಂಬಿಸಿರುವುದೇ ಕಾರಣ. ಅತೀಂದ್ರಿಯವಾದ ಮನೋಚಕ್ಷುವಿನಿಂದ ನೋಡಿದರೆ ಅಂತರಂಗದಲ್ಲಿ ನಿಹಿತನಾದ ಅನಂತಸ್ವರೂಪನಾದ ಭಗವಂತ ಗೋಚರಿಸುತ್ತಾನೆ. ಶಂಕರರು ಈ ಶ್ಲೋಕದಲ್ಲಿ ಅದ್ವೈತ ಭಕ್ತಿಯ ತತ್ವವನ್ನು ವಿಶದೀಕರಿಸಿದ್ದಾರೆ. ವಾಸ್ತವವಾಗಿ ಅವರು ಶಿವ–ಆನಂದ–ಲಹರಿ ಎಂಬ ಸಮಾಸಪದದಲ್ಲಿ ಅನೇಕ ತತ್ವಗಳನ್ನು ಅಡಗಿಸಿದ್ದಾರೆ. 'ಶಿವ' ಎಂದರೆ 'ಮಂಗಳ', 'ಮಂಗಳಕರ' ಎಂದರ್ಥ. ಎಲ್ಲ ಕಾಲ, ದೇಶ, ಚರಿತ್ರೆಗಳಲ್ಲೂ ಮಂಗಳವಾದದ್ದು ಎಲ್ಲಿ ಸಂಭವಿಸುತ್ತದೋ ಅಲ್ಲಿ ಸಹಜವಾಗಿಯೇ ಆನಂದವು

ಲಭಿಸುತ್ತದೆ. ಈ ಲೋಕದ ಸರ್ವಸಮಸ್ತದಲ್ಲೂ ಆನಂದ ತಾನೇ ತಾನಾಗಿ ತುಂಬಿದೆ. ಅದು ಮಂಗಳಕರವಾದುದು. "ಆನಂದಮಯ ಈ ಜಗಹೃದಯ" ಎಂಬ ಕುವೆಂಪು ಅವರ ಮಾತು ಇದನ್ನು ಅದ್ಭುತವಾಗಿ ಧ್ವನಿಸುತ್ತದೆ. ಈ ಶುಭವಾದ ಆನಂದವೇ ಮನಸ್ಸಿನ ಉಲ್ಲಾಸದ ಮೂಲ. ಅದುವೇ ಲಹರಿ. ಅದೊಂದು ತರಂಗ. ಈ ಸುಖದ ತರಂಗವನ್ನು ಅರಿಯುವ ವೇಗವರ್ಧಕ ಎಲ್ಲರ ಪಾಲಿಗೂ ದೊರೆಯುವಂತಾಗಬೇಕು.

ಭಕ್ತಿಯೆಂದರೆ ಮಾನವನ ಆತ್ಮವು ಪರಮಾತ್ಮನೊಂದಿಗೆ ತಾದಾತ್ಮ್ಯವನ್ನು ಹೊಂದುವ ಪರಿಶುದ್ಧವೂ ಪರಿಪೂರ್ಣವೂ ಆದ ಭಾವ. ಇದು ಕೇವಲ ಆಚರಣೆಯಿಂದ, ಸಂಪ್ರದಾಯದಿಂದ ಸಾಧಿತವಾಗುವುದಿಲ್ಲ. ಆಚರಣೆ, ಸಂಪ್ರದಾಯಗಳು ಕೇವಲ ಸಾಧನ ಮಾತ್ರ. ಭಕ್ತಿಯೆಂಬುದು ಇವುಗಳನ್ನೂ ಮೀರಿದ ಆಂತರಿಕವಾದ ಒಂದು ಅನುಭೂತಿ. ಅದೊಂದು ನಿಷ್ಠೆ, ಸಮರ್ಪಣೆ, ವಿಶ್ವಾಸ ಮತ್ತು ಪ್ರೀತಿಯ ಸಮ್ಮಿಲನ. ವಾಸ್ತವದಲ್ಲಿ 'ಭಕ್ತಿ' ಎಂಬ ಪದದ ಮೂಲ ಧಾತು 'ಭಜ್', ಎಂದರೆ ಸೇವೆ ಮಾಡುವುದು, ಆರಾಧನೆ ಮಾಡುವುದು, ಪ್ರೀತಿಯಿಂದ ಸ್ಮರಿಸುವುದು ಇವೇ ಮೊದಲಾದ ಅರ್ಥಗಳಿವೆ. ಭಕ್ತಿಯು ಮಾನವನ ಹೃದಯದಲ್ಲಿನ ಅಹಂಕಾರವನ್ನು ಇಲ್ಲವಾಗಿಸಿ ಆನಂತದ, ಭೂಮದ ಕಡೆಗೆ ದೃಷ್ಟಿ ಹಾಯಿಸುವಂತೆ ಪ್ರೇರೇಪಿಸುತ್ತದೆ. ಅಹಂಕಾರವು ಅಂತರಂಗವನ್ನು ದುರ್ಬಲಗೊಳಿಸಿದರೆ ಭಕ್ತಿಯು ಅದನ್ನು ಸಬಲಗೊಳಿಸುತ್ತದೆ, ವಿನಯವನ್ನು ಮೂಡಿಸುತ್ತದೆ, ಆತ್ಮಶುದ್ಧಿಗೆ ದಾರಿದೀಪವಾಗುತ್ತದೆ.

ಕನ್ನಡನಾಡಿನ ಶರಣರು, ಅದರಲ್ಲೂ ಅಲ್ಲಮಪ್ರಭುದೇವರು, ಈ ಅದ್ವೈತ ಭಕ್ತಿಯನ್ನು ಪ್ರತಿಪಾದಿಸಿದರು. ಬಸವಣ್ಣನವರಂತೂ ಇಂಥ ಭಕ್ತಿಗೆ ಭಂಡಾರಿಯೇ ಆಗಿದ್ದರು. ಆದರೆ ಅವರದು ಭಾವದಲ್ಲಿ ದ್ವೈತ ಭಕ್ತಿ, 'ಪಶು ನಾನು, ಪಶುಪತಿ ನೀನು' ಎಂಬ ಭಾವ ಅವರದು. ಅವರ ಸುಪ್ರಸಿದ್ಧ ವಚನ

ವಚನದಲ್ಲಿ ನಾಮಾಮೃತ ತುಂಬಿ
ನಯನದಲ್ಲಿ ಮೂರುತಿ ತುಂಬಿ
ಮನದಲ್ಲಿ ನಿಮ್ಮ ನೆನಹು ತುಂಬಿ
ಕಿವಿಯಲ್ಲಿ ಕೀರುತಿ ತುಂಬಿ
ಕೂಡಲಸಂಗಮದೇವಾ
ನಿಮ್ಮ ಚರಣಕಮಲದೊಳಗಾನು ತುಂಬಿ

ಎಂಬಲ್ಲಿ ಶಂಕರಾಚಾರ್ಯರ ಶ್ಲೋಕವೇ ನೆನಪಿಗೆ ಬರುತ್ತದೆ. ಭಗವಂತನ ಚಿದಂಶವಾದ ಪ್ರತಿಯೊಂದು ಜೀವಿಯಲ್ಲೂ ಭಗವಂತನನ್ನು ಕಾಣುವ ಮೂಲಕ ಲೋಕವು ತನ್ನ ಕಲ್ಯಾಣವನ್ನು ಕಾಣುವಂತಾಗಲೆಂದು ಹಾರೈಸುತ್ತೇವೆ.

**ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

# ಸಂಪಾದಕೀಯ

ಜಗತ್ತಿನಲ್ಲಿ ಮಾತಿಗೆ ಅನಂತ ಶಕ್ತಿ ಇದೆ. ಅದು ಖಡ್ಗದಂತೆ, ಅದರಿಂದ ಒಳಿತೂ ಆಗಬಹುದು, ಕೆಡುಕೂ ಆಗಬಹುದು. ಆದರೆ ಜಗತ್ತಿನ ತತ್ತ್ವಜ್ಞಾನಿಗಳೆಲ್ಲ ಮಾತಿಗೆ 'ಖಡ್ಗ' ಎಂಬ ಉಪಮೆಯನ್ನು ಎಂದೂ ಸ್ವೀಕರಿಸಿಲ್ಲ. ಏಕೆಂದರೆ ಖಡ್ಗದ ಆದ್ಯತೆ ಕೊಲ್ಲುವುದು. ಆನುಷಂಗಿಕವಾದದ್ದು ಮಾತ್ರ ಅದರ ಒಳಿತಿನ ಕ್ರಿಯೆಗಳು. ಹಾಗಾಗಿ ತತ್ತ್ವಜ್ಞಾನಿಗಳು ಮಾತನ್ನು 'ಬೆಳಕಾಗಿ', 'ಬೆಳದಿಂಗಳಾಗಿ', 'ಮಾಣಿಕ್ಯದ ದೀಪ್ತಿಯಾಗಿ', 'ಜ್ಯೋತಿರ್ಲಿಂಗವಾಗಿ' ಕಂಡಿದ್ದಾರೆ. ಕನ್ನಡದ ವಚನಕಾರರಂತೂ ಮಾತು ಕೇವಲ ಮಾತಲ್ಲ, ಅದೊಂದು ನುಡಿ. ಮಾತು ಮತ್ತು ನುಡಿಗೆ ಒಂದು ಅಂತರವಿದೆ. 'ಮಾತನ್ನು ಗಳಪಿದರು' ಎನ್ನುವಾಗ ಅದು ಪ್ರತಿ ಮಾತಿಗೂ ಅರ್ಥ ಇರಬೇಕೆಂದಿಲ್ಲ. ಅರ್ಥವಿದ್ದರೂ ನಿರ್ದಿಷ್ಟವಾದ ಅರ್ಥ ಇರಬೇಕೆಂದಿಲ್ಲ. ಅದೊಂದು ಅರ್ಥರಹಿತ ವ್ಯರ್ಥ ಪ್ರಲಾಪವೂ ಆಗಿರಬಹುದು ಎಂದಾಗುತ್ತದೆ. ನಾವು ಅನೇಕ ಬಾರಿ ಮಾತನ್ನು ಅನಗತ್ಯವಾಗಿ, ಅವಶ್ಯಕತೆ ಇಲ್ಲದಿದ್ದರೂ ಆಡುತ್ತೇವೆ. ಅವಶ್ಯಕತೆ ಒದಗಿಬಂದರೂ ನಾವಾಡುವ ಮಾತು ಕೇವಲ ನಮ್ಮ ಅನಿಸಿಕೆ ಮತ್ತು ಬಯಕೆಗಳ ಅಭಿವ್ಯಕ್ತಿ ಮಾತ್ರವಾಗಿರುತ್ತದೆ. ಆದರೆ ಶರಣರು 'ನುಡಿ' ಎಂಬ ಪದವನ್ನು ಯಥೇಚ್ಛವಾಗಿ ಬಳಸಿರುವುದರ ಹಿಂದೆ ಒಂದು ನಿರ್ದಿಷ್ಟ ಕಾರಣವಿದೆ. ಅವರಿಗೆ "ಮಾತೆಂಬುದು ಜ್ಯೋತಿರ್ಲಿಂಗ, ಸ್ವರವೆಂಬುದು ಪರತತ್ತ್ವ, ತಾಳೋಷ್ಠ ಸಂಪುಟವೆಂಬುದು ನಾದಬಿಂದು ಕಲಾತೀತ". ಆದುದರಿಂದ ಶರಣರು ನುಡಿದು ಸೂತಕಿಗಳಲ್ಲ.

ಅಲ್ಲಮಪ್ರಭುದೇವರ ಪ್ರಕಾರ ಮಾತು ಸ್ವಯಂಕಾಂತಿಯಿಂದ ಕೂಡಿರಬೇಕು. ಮಾತೆಂಬ ವಸ್ತುವನ್ನು ಬೆಳಗಿಸಲು, ಕಾಣಿಸಲು ಮತ್ತೊಂದು ಬೆಳಕಿನ ಆಗತ್ಯವಿರಬಾರದು. ಏಕೆಂದರೆ ಹೊರಗಿನ ಬೆಳಕು ನಂದಿಹೋದಾಗ ಅದರ ಅಶ್ರಯದಲ್ಲಿ ಪ್ರಕಾಶಗೊಳ್ಳುತ್ತಿದ್ದ ವಸ್ತುವಿಗೂ ಕತ್ತಲೆ ಆವರಿಸುತ್ತದೆ. ಆದುದರಿಂದಲೇ ಪ್ರಭುದೇವರು ಮಾತಿಗೆ ಸ್ವಯಂಕಾಂತಿ ಇರಬೇಕು ಎಂದಿದ್ದಾರೆ. ಮಾತ್ರವಲ್ಲ ಅದು ಕೇವಲ ಕಾಂತಿಯಿಂದ ಕೂಡಿದ್ದರೆ ಪ್ರಯೋಜನವಿಲ್ಲ. ಅದು ಲಿಂಗವೂ ಆಗಿರಬೇಕು. ಲಿಂಗವೆಂದರೆ ಅದೊಂದು ನಿರ್ವಿಕಾರ. ಅನಂತ ತತ್ತ್ವಗಳ ರೂಪ ಈ ನಿರಾಕಾರದ ಅನಂತತೆಯ ಕಾಂತಿ, ನಮ್ಮ ಒಳಹೊರಗು ಎರಡನ್ನೂ ಏಕಕಾಲದಲ್ಲಿ ಬೆಳಗುತ್ತದೆ. ಈ ಸ್ವಯಂಕಾಂತಿಯು ಅಂತರಂಗದಿಂದಾಚೆಗೆ

ಪ್ರವಹಿಸುವಾಗ ಅದು ಸ್ವರ ರೂಪವನ್ನು ತಳೆಯುತ್ತದೆ. ಶಬ್ದಮಣಿದರ್ಪಣಕಾರ ಕೇಶಿರಾಜ "ಜೀವನ ಇಚ್ಛೆಯಂತೆ ನಾಭಿ ಮೂಲದಿಂದ ಶಬ್ದ ದ್ರವ್ಯಂ ಜನಿಸುಗುಂ, ಶ್ವೇತಂ ಅದರ ಕಾರ್ಯಂ" ಎನ್ನುತ್ತಾನೆ. ವೈಯಾಕರಣಿಯಾದ ಕೇಶಿರಾಜನ ಪ್ರಕಾರ, ಮಾತೆಂಬುದು ಒಂದು ತತ್ತ್ವ, ಅದು ಪರತತ್ತ್ವ. ಅದು ಉತ್ಪನ್ನವಾಗುವುದು ಜೀವನ ಅಂದರೆ ವ್ಯಕ್ತಿಯ ಇಚ್ಛೆಯಂತೆ, ಆ ಇಚ್ಛೆಯ ಹೊರಹೊಮ್ಮುವಿಕೆಯು ಧ್ವನಿಪೆಟ್ಟಿಗೆಯ, ಅಂದರೆ ಧ್ವನಿ ಡಮರು ಮೇಲೆ ಹಾಯ್ದು ಹೊರಹೊಮ್ಮುತ್ತದೆ. ಹಾಗೆ ಹೊರಹೊಮ್ಮುವಾಗ ಹುಟ್ಟುವ ಸ್ವರವು ಆತ್ಮದ ಪರತತ್ತ್ವವಾಗಿರಬೇಕು. ಇಲ್ಲಿ ಪರತತ್ತ್ವವೆಂದರೆ ನಮ್ಮ ಕಣ್ಣಿಗೆ ಕಾಣದ, ಅಗೋಚರವಾದ ನಮ್ಮನ್ನು ನಿಯಂತ್ರಿಸುವ ಯಾವುದೋ ಒಂದು ಅಗೋಚರ ಚೈತನ್ಯ. ಅದು ನಮ್ಮನ್ನು ಸದಾ ನಿಯಂತ್ರಿಸುತ್ತಿರುತ್ತದೆ. ಅದರ ನಿಯಂತ್ರಣದಲ್ಲಿದ್ದ, ದೇಹ ಅಂತರಂಗದ ಅರಿವಿನ ಬೆಳಕಿನಲ್ಲಿ ಸರಾಗವಾಗಿ ಸಾಗುತ್ತದೆ. ಅರಿವಿಲ್ಲದಿದ್ದಾಗ ಅವನತಿಯ ಕಡೆ ಧಾವಿಸುತ್ತದೆ ಅಥವಾ ಜಾತುತ್ತದೆ. ಈ ಪರತತ್ತ್ವದಂತೆಯೇ ಆತ್ಮ ಕೂಡ ಅಗೋಚರವಾದದ್ದು. ಆತ್ಮದ ಇರುವಿಕೆ ವೈಜ್ಞಾನಿಕ ಲೋಕ ಅರಿವಿಗೆ ಬಾರದಂತೆ ಇದೆ. ಅರಿವಿಗೆ ನಿಲುಕುತ್ತಿಲ್ಲವೆಂದ ಮಾತ್ರಕ್ಕೆ ಅದು ಇಲ್ಲವೆಂದು ನಿರ್ಧರಿಸಬಹುದೆ ಎಂದರೆ ಸಲ್ಲದು. ಆತ್ಮವಿಲ್ಲದೆ ಹೋದರೆ ಜೀವವೇ ಇರಲಾರದು. ಇದೊಂದು ಬಗೆಯ ಮಾಯೆ, ವಿಸ್ಮಯ. ಈ ವಿಸ್ಮಯದ ಅರಿವಿದ್ದಾಗ ಆತ್ಮವು (ಜೀವ) ಪರಮಾತ್ಮನ ಸ್ವಯಂಕಾಂತಿಯನ್ನು ಹೊರಹೊಮ್ಮಿಸುತ್ತದೆ.

ಸ್ವರವು ಧ್ವನಿಪೆಟ್ಟಿಗೆಯಿಂದ ಹೊರಬಂದು ಅದು ಕಂಠ, ತಾಳವ್ಯ, ದಂತ್ಯ, ಓಷ್ಠ, ಮೂರ್ಧನ್ಯ ಅಂದರೆ ಬಾಯಿ ನಾಲಿಗೆ ಹಾಗೂ ತುಟಿಗಳ ಸಂಯೋಜನೆಯ ಮೂಲಕ ಹೊರಡುತ್ತದೆ. ಅಂದರೆ ನಾಲಿಗೆ ದಂತ, ಅಂಗಳು, ತುಟಿ, ಸ್ವರ. ಈ ಐದು ಅಂಶಗಳು ಪರಬ್ರಹ್ಮನ ಒಟ್ಟು ಸಮ್ಮಿಲನ – ಅದೊಂದು ಸಂಕೀರ್ಣ. ಅದೊಂದು ಸಂಪುಟ. ಆದುದರಿಂದಲೇ ಕೇಶಿರಾಜನು ಅದೊಂದು ದ್ರವ್ಯ (ಸಂಪತ್ತು), ಅದರ ಕಾರ್ಯ ಶ್ವೇತ (ಬಿಳುಪು) ಎನ್ನುತ್ತಾನೆ. ಆದರೆ ನಮಗೆ ಮಾತು ಕೇವಲ 'ಗಳಪವು' ಕ್ರಿಯೆ ಆಗಿದೆ. ಅದರಿಂದ ಮಾತಿಗೆ ಯಾವ ಅರ್ಥವೂ ಉಳಿದಿಲ್ಲ. ಅರ್ಥವಿಲ್ಲದ ಮಾತಿನಿಂದ ವ್ಯಕ್ತಿಗೂ, ವ್ಯಕ್ತಿತ್ವಕ್ಕೂ ಬೆಲೆ ಇಲ್ಲದಂತಾಗಿದೆ ಇಂದಿನ ಜಗತ್ತಿನಲ್ಲಿ. ಈಗ ಮಾತೆಂಬುದು ಕೇವಲ ಸರಳ ತತ್ತ್ವವಾಗಿ ಉಳಿದಿಲ್ಲ.

**ಡಾ. ಎಂ.ಎನ್. ನಂದೀಶ್ ಹಂಚೆ**

ಪ್ರವಚನಸಾರ

# ಓಂ-ಉದ್ಗೀಥ

ಶ್ರೀ ಸಿದ್ಧೇಶ್ವರ ಸ್ವಾಮಿಗಳು

ಮನುಷ್ಯ ಎಲ್ಲವನ್ನೂ ಅರಿಯಬೇಕು, ದಿವ್ಯ ಸತ್ಯ ದರ್ಶನದ ಅನುಭೂತಿಯನ್ನು ಪಡೆಯಬೇಕು. ಋಷಿಗಳು ಆದುದು ಇದೇ ಬಯಕೆಯ ಪರಿಣಾಮದಿಂದ. ಶರಣರು ತಮ್ಮನ್ನು ತಾವು ಸಮರ್ಪಿಸಿಕೊಂಡದ್ದು ಇದೇ ಬಯಕೆಯ ಪರಿಣಾಮದಿಂದ. ಸಾವಿರಾರು ಜನ ಸಾಧಕರು ಮನೆ ಮಾರುಗಳನ್ನು ತ್ಯಜಿಸಿದ್ದು ಈ ಬಯಕೆಯ ಪೂರ್ತಿಗಾಗಿ. ಹೇಗೆ ವಸ್ತುಗಳನ್ನು ಅನುಭವಿಸಿ ಸಂತೋಷಪಡಬೇಕು ಎಂದು ನಾವು ಬಯಸುತ್ತೇವೆಯೋ ಹಾಗೆ ಸತ್ಯಾನುಭವದ ಬಯಕೆ ಅವರಿಗೆ. ನಮ್ಮ ಬಯಕೆ ಸುಲಭವಾಗಿ ಈಡೇರಿದರೆ, ಅವರ ಬಯಕೆ ಸ್ವಲ್ಪ ನಿಧಾನವಾಗಿ ಕೈಗೂಡುತ್ತದೆ. ಅದಕ್ಕೊಂದು ಮುಖ್ಯ ಕಾರಣವೆಂದರೆ ನಮ್ಮ ಮನಸ್ಸಿಗೆ ಅಂಥ ಸತ್ಯದೆತ್ತರಕ್ಕೇರುವ ತರಬೇತಿ ಇಲ್ಲದಿರುವುದು ಹಾಗೂ ಅಭ್ಯಾಸದ ಕೊರತೆ. ಶಬ್ದಗಳನ್ನು ಮತ್ತು ವಸ್ತುವನ್ನು ಅವಲಂಬಿಸಿ ಮನಸ್ಸು ಕಾರ್ಯ ಮಾಡಲು ಇಚ್ಛಿಸುತ್ತದೆ. ಯಾವುದರ ಸಹಾಯವೂ ಇಲ್ಲದೆ ಮನಸ್ಸು ಸತ್ಯಪ್ರಜ್ಞೆಯ ಎತ್ತರಕ್ಕೆ ಏರುವುದು ಬಹಳ ಕಷ್ಟ.

ಭೂಮಿಯ ಮೇಲೆ ಚಲಿಸಲು ರೈಲು, ಕಾರು ಮುಂತಾದ ಹಲವಾರು ವಾಹನಗಳು ಸುಲಭವಾಗಿ ಸಿಗುತ್ತವೆ, ಆದರೆ ಅಂತರಿಕ್ಷಕ್ಕೇರಲು ವಾಹನ ದೊರೆಯುವುದು ಕಠಿಣ. ಅದಕ್ಕಿಂತ ಇನ್ನೂ ಎತ್ತರಕ್ಕೇರಬೇಕಿತ್ತು ಅಂದರೆ ಇನ್ನಷ್ಟು ಕಠಿಣ. ಆ ಬಳಿಕ ಆಕಾಶದ ಆಚೆ ಸಾಗಬೇಕಾದರೆ ಅತ್ಯಂತ ಕಷ್ಟ. ಸಹಾಯ ಮಾಡುವವರು ಯಾರೂ ದೊರೆಯರು. ಯಾವ ಭೌತ ವಾಹನಗಳೂ ಸಹಾಯ ಮಾಡವು. ಲೌಕಿಕ ಸಾಧನೆ ಮಾಡುವಲ್ಲಿ ಸಾಕಷ್ಟು ಜನ ಗೆಳೆಯರು ಸಿಗುತ್ತಾರೆ! ಉದಾಹರಣೆಗಾಗಿ ವ್ಯಾಪಾರದ ಕ್ಷೇತ್ರದಲ್ಲಿ ಹೋದರೆ ಸಾಕಷ್ಟು ಸಹಾಯಕರು ದೊರೆಯುತ್ತಾರೆ. ಒಕ್ಕಲುತನದ ಕ್ಷೇತ್ರಕ್ಕೆ ಹೋದರೆ ಸಹಾಯ ಮಾಡುವವರು ಸಿಗುತ್ತಾರೆ. ಆದರೆ ಅಧ್ಯಾತ್ಮಕ್ಷೇತ್ರಕ್ಕೆ ಹೋದಾಗ ಸಹಕರಿಸುವವರು ಅತಿ ವಿರಳ.

ಸಾಕ್ರೆಟೀಸನು ಒಬ್ಬ ಸಂತ. ಅಥೆನ್ಸ್ ನಗರದ ಬಹುತೇಕ ಯುವಕರು ಸಾಕ್ರೆಟೀಸನಿಗೆ ಮಾರುಹೋದವರು. ಆತನ ಜ್ಞಾನದ ಮಾತು ಅತ್ಯಂತ ಪರಿಣಾಮಕಾರಿ. ಅವನ ಬದುಕು ಸೊಗಸಾದುದು, ಸುಂದರವಾದುದು. ಆಸೆ ಆಮಿಷಗಳಿಲ್ಲ, ಮಾತಿನಲ್ಲಿ ರಾಗದ್ವೇಷಗಳಿಲ್ಲ, ವಿಚಾರಗಳಲ್ಲಿ ಛಲವಿಲ್ಲ, ಅವನು ಒಬ್ಬ ಮಹಾನುಭಾವ! ಅನುಭಾವಿ! ಆತನನ್ನು ನೋಡಲು, ಆತನ ಬೆಳಕಿನ ಮಾತನ್ನು ಕೇಳಲು ಯುವಕವೃಂದ ಮುತ್ತಿಗೆಹಾಕುತ್ತಿದ್ದರು.

ಒಂದು ದಿವಸ ಓರ್ವ ಪಂಡಿತ ಬಂದು ಹೇಳಿದ: "ಸಾಕ್ರೆಟೀಸರೆ, ಇಷ್ಟು ಜನ ಯುವಕರು ನಿಮ್ಮನ್ನು ಸುತ್ತುವರೆದಿದ್ದಾರೆ. ಅಲೌಕಿಕ ಚಿಂತನ ಮಾಡುತ್ತಾರೆ, ವಿರಾಗಪ್ರಿಯರು, ಆದರೆ ಇವರನ್ನೆಲ್ಲಾ ನಾನು ಅಲ್ಪ ಸಮಯ ದಲ್ಲಿ ಸಂಸಾರ ರಸಿಕರನ್ನಾಗಿ ಮಾಡಬಲ್ಲೆ. ಇವರನ್ನು ಸತ್ಯಪ್ರಿಯರನ್ನಾಗಿಸಲು ನೀವು ವರುಷ ವರುಷ ಶ್ರಮಿಸಿದ್ದೀರಿ. ನಾಲ್ಕು ದಿನಗಳಲ್ಲಿ ಅವರನ್ನೆಲ್ಲ ಅಸತ್ಯಪ್ರಿಯರನ್ನಾಗಿಸಬಲ್ಲೆ. ಒಬ್ಬನೂ ನಿಮ್ಮ ಹತ್ತಿರ ಸುಳಿಯಲಾರದಂತೆ ಮಾಡಬಲ್ಲೆ. ಇದಕ್ಕೇನು ಹೇಳುತ್ತೀರಿ?" ಎಂದ. ಸಾಕ್ರೆಟೀಸ್ ನುಡಿದ "ಕೆಡಿಸಲು ನಿನ್ನಂಥ ಪಂಡಿತನೇ ಏಕೆ ಬೇಕು? ಗುಡ್ಡದ ತುದಿಯಿಂದ ಕಲ್ಲು ಕೆಳಗುರುಳಿ ಸಲು ಪೈಲ್ವಾನ ಏಕೆ? ಒಬ್ಬ ಬಾಲಕ ಸ್ವಲ್ಪ ನೂಕಿದರೂ ಕಲ್ಲು ಕೆಳಗೆ ಬಂದು ಬೀಳುತ್ತದೆ! ಹಾಗೆ ಜನರನ್ನು ಕೆಡಿಸುವುದಕ್ಕೆ ನಿನ್ನಂಥ ಪಂಡಿತರ ಆವಶ್ಯಕತೆ ಇಲ್ಲ. ಸುಮ್ಮನೆ ಯಾರಾದರೂ ನಾಲ್ಕು ಮಾತು ಹೇಳಿದರೂ ಜನ ಕೆಟ್ಟು ಹೋಗುತ್ತಾರೆ. ಅದಲ್ಲದೆ ಹಾಗೆ ಮಾಡುವಲ್ಲಿ ಅದೇನು ಪೌರುಷ ಹೇಳು?"

ಪರಾಂಚಿಖಾನಿ ವ್ಯತೃಣತ್ ಸ್ವಯಂಭೂಃ
ತಸ್ಮಾತ್ ಪರಾಙ್ ಪಶ್ಯತಿ ನಾಂತರಾತ್ಮನ್

ದೇವರು ಇಂದ್ರಿಯಗಳನ್ನು ಹೊರಮುಖವಾಗಿ ನಿರ್ಮಿಸಿದ. ಸಾಂಸಾರಿಕ ಒಲವು ನೈಸರ್ಗಿಕ! ಆದುದರಿಂದ ಪತನ, ಕೆಳಮುಖಗಮನ ಬಹು ಸುಲಭ. ಉತ್ಥಾಪನ ಉದ್ಧರಣ ಅತಿ ಸಾಹಸದ್ದು. ಸಾಮಾನ್ಯ ಒಲವಿನ ಜನಾಂಗವನ್ನು ಸತ್ಯಪ್ರೇಮಿಯಾಗಿಸಲು ಒಬ್ಬ ಸಾಕ್ರೆಟೀಸನೇ ಬೇಕಾಗುತ್ತದೆ. ಪತನಗೊಳಿಸಲು ಒಂದು ಕ್ಷುಲ್ಲಕ ಆಮಿಷವೂ ಸಾಕು.

ವಿಶ್ವಾಮಿತ್ರ ಎಷ್ಟು ಎತ್ತರ ಏರಿದ! ನಿಮಿಷದಲ್ಲಿ ಜಾರಿದ! ಹಾಗೆಯೇ ನಹುಷ. ಅವನು ಎಷ್ಟು ಕಷ್ಟಪಟ್ಟು ಸ್ವರ್ಗವೇರಲು! ಸರ್ಪವಾಗಿ ಕೆಳಗೆ ಬೀಳಲು ಒಂದು ಕ್ಷಣ ಹಿಡಿಯಲಿಲ್ಲ.

ನೀತಿಕ್ಷೇತ್ರಕ್ಕೆ ತರುವವರು ಸ್ವಲ್ಪ ಜನ. ಧರ್ಮಕ್ಷೇತ್ರಕ್ಕೆ ತರುವವರು ಇನ್ನಷ್ಟು ಕಡಿಮೆ ಜನ. ತತ್ವಕ್ಷೇತ್ರಕ್ಕೆ ತರುವವರು ಮತ್ತಷ್ಟು ಕಡಿಮೆ ಜನ. ತತ್ವಜ್ಞಾನದ ಅನುಭೂತಿಯ ಶಕ್ತಿ ತರುವವರು ಇನ್ನಷ್ಟು ಕಡಿಮೆ! ಒಂದು ಲಗ್ನ ಮಾಡಿಕೊಳ್ಳಹೊರಟರೆ ಹತ್ತು ಜನ ಸಹಾಯ ಮಾಡುತ್ತಾರೆ. ಆದರೆ ಸನ್ಯಾಸಿ ಆಗುತ್ತೇನೆಂದು ಹೊರಟರೆ ಯಾರಿಗೂ ಹೇಳದೆಯೇ ಮನೆ ಬಿಡಬೇಕೇ ವಿನಾ ಅವನಿಗೆ ಸಹಾಯ ಮಾಡುವವರು ಯಾರು ಇದ್ದಾರೆ? ಶಂಕರಾಚಾರ್ಯರು ಹೇಳದೆ ಹೊರಟುಹೋದರು. ಬುದ್ಧ ರಾತ್ರೋರಾತ್ರಿ ಮನೆ ಬಿಡುವ ನಿರ್ಣಯ ಮಾಡಿದ. ಸತ್ಯಕ್ಷೇತ್ರಕ್ಕೆ ಪ್ರವೇಶಿಸುವವರಿಗೆ ವಿರೋಧ ಹಾಗೂ ಆತಂಕವೇ ಹೆಚ್ಚು. ಎಲ್ಲೋ ಒಬ್ಬ ಗುರು, ವೀರಜ್ಞಾನಿ ದೊರೆತರೆ ಅದೊಂದು ಭಾಗ್ಯ ಸಾಧಕನಿಗೆ. ಸಾಧಕ ಸಿದ್ಧಿಮಾರ್ಗ ಕ್ರಮಿಸುವಲ್ಲಿ ಆಲಂಬನೆಗಳು ಅಂದರೆ ಸಹಾಯಕ ಸಾಧನಗಳು ಅವಶ್ಯ. ಆಲಂಬನ ಅವಶ್ಯ.

ಆಲಂಬನೆಗಳಲ್ಲಿ ಪ್ರಧಾನವಾಗಿ ಎರಡು ಬಗೆ. ಒಂದು ರೂಪ. ಎರಡನೆಯದು ಶಬ್ದ. ರೂಪವನ್ನು ಅವಲಂಬಿಸಿ ಮನಸ್ಸು ಏಕಾಗ್ರವಾಗುತ್ತದೆ. ಹಾಗೆಯೇ ಶಬ್ದವನ್ನವಲಂಬಿಸಿ

ಮನಸ್ಸು ದೇವಕ್ಷೇತ್ರಕ್ಕೆ ಏರುತ್ತದೆ, ಏಕಾಗ್ರವಾಗುತ್ತದೆ. ನಾವೀಗ ಶಬ್ದಾಲಂಬನ ವಿಧಾನ ಉಪಯೋಗಿಸುತ್ತಿದ್ದೇವೆ. ಭಗವತ್ ಚಿಂತನೆಗಾಗಿ!

ಪವಿತ್ರ ಶಬ್ದಗಳನ್ನು ಕೇಳಿ, ಅದರ ಅರ್ಥದ ಜಾಡು ಹಿಡಿದು ಸಾಗಿದರೆ ಮನಸ್ಸು ಸುಲಭವಾಗಿ ದೇವಕ್ಷೇತ್ರ ಪ್ರವೇಶಿಸುತ್ತದೆ. ಶ್ರವಣಾಖ್ಯ ಸಮಾಧಿ ಅನುಭವಿಸುತ್ತದೆ. ಪ್ರವಚನವೆಂದರೆ ಶಬ್ದಾಲಂಬನ ವಿಧಾನ. ಮನಸ್ಸು ಒಂದು ತಾಸು ಆ ಕಡೆ ಈ ಕಡೆ ಹರಿಯದೆ ಶಬ್ದಪ್ರವಾಹದೊಂದಿಗೆ ಹರಿಯುತ್ತದೆ. ಆ ಪ್ರವಾಹ ತತ್ವಕ್ಷೇತ್ರದಲ್ಲಿ ಸಮಾವೇಶ ಹೊಂದಿದರೆ, ಕೇಳುವ ಮನಸ್ಸೂ ಅಲ್ಲಿ ಸಮರಸವಾಗುತ್ತದೆ. ಪ್ರವಚನಗಳನ್ನು ಕೇಳುವಾಗ ಮನಸ್ಸು ತನ್ಮಯವಾಗುವಂತೆ ನಮ್ಮಿಷ್ಟಕ್ಕೆ ನಾವು ಕುಳಿತಾಗ ಆಗದು. ಧ್ಯಾನಾವಸ್ಥೆಗೆ ಶಬ್ದಗಳು ಬಹು ಸಹಕಾರಿ. ಶಬ್ದಗಳಂತೆ 'ಲಿಂಗ' ಇತ್ಯಾದಿ ರೂಪಗಳೂ ಸಾಧನಕ್ಕೆ ಸಮರ್ಥ ಸಹಾಯಕಗಳು. ಶರಣರಂತೂ ಲಿಂಗನೋಟದಲ್ಲಿ ತನ್ಮಯರಾದವರು.

ಉರಿಲಿಂಗಪೆದ್ದಿ ಉರಿಲಿಂಗದೇವರ ಶಿಷ್ಯ. ಮೊದಲು ಕಳ್ಳನಾಗಿದ್ದವನು ಅವನು. ಅವನಿಗೆ ಯಾವ ಸಂಸ್ಕಾರ ಇಲ್ಲ. ಧರ್ಮ, ನೀತಿ, ತತ್ವ ಏನೂ ಗೊತ್ತಿಲ್ಲ. ಇಂತಹ ಮನುಷ್ಯ ಉರಿಲಿಂಗಪೆದ್ದಿ. ಕಳ್ಳತನ ಮಾಡಲು ರಾತ್ರಿ ಬರುತ್ತಾನೆ. ಇವನ ಗುರುಗಳು ಒಳಗೆ ಕುಳಿತುಕೊಂಡು ಶಿವಯೋಗ ಸಾಧನೆ ಮಾಡುತ್ತಿರುತ್ತಾರೆ. ಆತ ಬಂದು ಮರೆಯಾಗಿ ನಿಂತು ನೋಡುತ್ತಾನೆ. ಅವರ ಆ ಅವಸ್ಥೆ, ಆ ಮುಖದ ಮೇಲಿರುವ ತೇಜಸ್ಸು, ಕೈಯೊಳಗಿರುವ ಲಿಂಗದ ಮೇಲಿನ ಏಕಾಗ್ರತೆ, ಇದನ್ನೆಲ್ಲಾ ಕಂಡಾಗ ಆತ ಬದಲಾಗುತ್ತಾನೆ. ಗುರುಗಳು ಯಾವುದನ್ನು ಕೈಯ್ಯಲಿಟ್ಟು ಇಷ್ಟೆಲ್ಲಾ ಸಾಧನೆ ಮಾಡುತ್ತಾ ಇದ್ದಾರೆ, ದೃಷ್ಟಿಯನ್ನು ಏಕಾಗ್ರಗೊಳಿಸಿದ್ದಾರೆ, ಅದರಲ್ಲಿ ಮಗ್ನವಾಗಿಬಿಟ್ಟಿದ್ದಾರೆ, ಆ ವಸ್ತುವನ್ನು ನಾನೂ ಪಡೆಯಬೇಕು ಎಂದು ನಿರ್ಧರಿಸುತ್ತಾನೆ. ಕಳ್ಳ ಕೆಳಗೆ ಇಳಿದು ಬರುತ್ತಾನೆ, ಗುಪ್ತಸೇವೆ ಮಾಡುತ್ತಾನೆ. ಕಾಲಾಂತರದಲ್ಲಿ ಗುರುಗಳಿಗೆ ಗೊತ್ತಾಗುತ್ತದೆ. ಗುರುಗಳಿಗೆ ತನ್ನ ಇಂಗಿತ ಹೇಳುತ್ತಾನೆ. ಗುರುಗಳು ಲಿಂಗ ದಯಪಾಲಿಸುತ್ತಾರೆ. ಅದರ ಸಾಧನೆ ಮಾಡುತ್ತಾನೆ. ಅಪ್ರತಿಮ ಅವಸ್ಥೆ ಹೊಂದುತ್ತಾನೆ. ಅವನ ಈ ವಚನ ಕೇಳಿ:

ತ್ವಂ ಪದವೇ ಲಿಂಗವೆಂದು ಅರುಹಿದ
ತತ್ ಪದವೇ ಲಿಂಗವೆಂದು ಅರುಹಿದ
ಅಸಿ ಪದವೇ ಪ್ರಾಣವೆಂದು ಅರುಹಿದ ಗುರು
ಅಂಗವೇ ಲಿಂಗವೆಂದು ಲಿಂಗವೇ ಅಂಗವೆಂದು
ಅಂಗಲಿಂಗವೆರಡೂ ಸಮರಸಪ್ರಾಣವೆಂದು ಅರುಹಿ
ಇಷ್ಟಲಿಂಗವನ್ನಿತ್ತು ದೃಷ್ಟಿಲಿಂಗವೆಂದು ಆದೇಶ ಕೊಟ್ಟ
ಆ ದೃಷ್ಟಿಲಿಂಗ ಬಳಸಿ ನಾನೀನೆಲ್ಲವನು ಬಯಲೊಳಗೆ ಬಿಟ್ಟು
ಬಟ್ಟಬಯಲಾಗಿ ಹೋದೆ!
ಉರಿಲಿಂಗ ಪೆದ್ದಿ ಪ್ರಿಯ ವಿಶ್ವೇಶ್ವರಾ!

ಇಷ್ಟಲಿಂಗವನ್ನು ಕೊಟ್ಟ ಗುರು ಇದು ದೃಷ್ಟಿಲಿಂಗವೆಂದು ಉಪದೇಶಮಾಡಿದ. ಇದು ರೂಪ ಆಲಂಬನೆ. ಇದನ್ನು ಕಂಡು, ಮರೆತು ಕಾಣದ ದೇವರತ್ತ ಗಮಿಸಬೇಕು. ಭಾವ ಹರಿಯಬೇಕು ಎಂದು ಬೋಧಿಸಿದ. ಲಿಂಗ ಅಂದರೆ ವಿಶ್ವಚೇತನ. ಅದು ತತ್ವದ ಅರ್ಥ. ಅಂಗ ಅಂದರೆ ವ್ಯಷ್ಟಿ ಚೇತನ. ಅದು ತ್ವಂ ಪದಾರ್ಥ. ಅಂಗವೇ ಲಿಂಗವೆಂದು ಅರುಹಿದ. ಈ ತತ್ವವನ್ನು ಭಾವಕ್ಕೆ ತಂದುಕೊಡುವುದಕ್ಕಾಗಿ ದೃಷ್ಟಲಿಂಗವ ತೋರಿಸಿದ. ಕಾಣುವಂತಹ ಒಂದು ರೂಪವನ್ನು ಕೈಗೆ ಇತ್ತು ಹೇಳಿದ. ಇದು ದೃಷ್ಟ ಲಿಂಗ, ಇದನ್ನು ನೀನು ನೋಡಬೇಕು, ಅದೃಷ್ಟವಾದ ಬಟ್ಟಬಯಲನ್ನು ಸೇರಬೇಕು ಎಂದು ಆದೇಶವಿತ್ತ.

ದೃಷ್ಟಿಲಿಂಗವನ್ನು ಅರ್ಚಿಸಿದ ಉರಿಲಿಂಗ ಪೆದ್ದಿ, ಅಂಗ-ಲಿಂಗ ಸಾಮರಸ್ಯ ವನ್ನು ಸಾಧಿಸಿದ. ಕೊನೆಗೆ ಬಟ್ಟ ಬಯಲಾದ. ಆ ಅವಸ್ಥೆ ಅನುಭವಿಸಲು ಈ ರೂಪ, ಈ ಇಷ್ಟಲಿಂಗ, ಈ ಪ್ರತೀಕ ಸಹಾಯಮಾಡಿತು. ಲೋಕದಲ್ಲೂ ಅಷ್ಟೇ. ಪ್ರತೀಕಗಳನ್ನು ಹೆಜ್ಜೆಹೆಜ್ಜೆಗೆ ಉಪಯೋಗಿಸುತ್ತೇವೆ. ಉದಾಹರಣೆಗಾಗಿ ಹೂಮಾಲೆ. ಅದು ಗೌರವದ, ಪ್ರೇಮದ ಕುರುಹು; ಭಕ್ತಿಯ ಪ್ರತೀಕ.

ಜಗತ್ತಿನ ಎಲ್ಲ ಧರ್ಮಗಳೂ ಪ್ರತೀಕವನ್ನು ಬಳಸಿವೆ. ಕಣ್ಣಿಗೆ ಕಾಣುವಂಥ ಒಂದಲ್ಲ ಒಂದು ವಸ್ತುವನ್ನು ಗ್ರಹಿಸಿವೆ. ಅದರ ಮೂಲಕ ಭಕ್ತ ತನ್ನ ಭಾವನೆ ವ್ಯಕ್ತಮಾಡುತ್ತಾನೆ. ತತ್ತ್ವವನ್ನು ಪರಿಕಲ್ಪಿಸುತ್ತಾನೆ. ಅದೃಶ್ಯ-ಅಗಮ್ಯ ಸತ್ಯದೊಳಗೆ ಬೆರೆಯುತ್ತಾನೆ.

> ಯೇಷಾಂ ಭೂತಾನಾಂ ಪೃಥಿವೀ ರಸಃ

ಭೂಮಂಡಲ, ಇದರ ಸಾರ ನೀರು. ಭೂಮಂಡಲದಲ್ಲಿ ಸಮಸ್ತ ಸಾರವೇ ನೀರು. ನೀರಿನ ಸಾರವೇ ಓಷಧಯಃ, ಸಸ್ಯಸಂಪತ್ತು. ಈ ಸಸ್ಯದ ಸಾರವೇ ದೇಹ. ಈ ದೇಹದ ಸಾರವೇ ವಾಣಿ. ವಾಣಿಯ ಸಾರ ಸತ್ಯ. ಋತ, ಭೂಮಿ; ಭೂಮಿಯಿಂದ ನೀರು, ನೀರಿನಿಂದ ಸಸ್ಯ, ಸಸ್ಯದಿಂದ ದೇಹ, ದೇಹದಿಂದ ಮಾತು ಹೊರಹೊಮ್ಮಿತು. ಈ ಮಾತಿನ ಹಿಂದೆ ಸತ್ಯ, ಆ ಸತ್ಯದ ಅನುಭೂತಿಯೊಳಗೆ ಸಾಮ. ಸಾಮ ಅಂದರೆ ಸಂತೋಷ. ಸಾಮದ ಮಹಾಪ್ರವಾಹವೇ ಸಮಾಧಾನ! ಭವ್ಯ ಆನಂದ! ಇಂತಹ ಆನಂದಾನುಭೂತಿಯೊಳಗೆ ನೆಲೆಸಿದ, ರಮಿಸಿದ ಮಹಾನುಭಾವನ ಮುಖದಿಂದ ಒಂದು ಉದ್ಗಾರ ಹೊರಡುತ್ತದೆ. ಆ ಉದ್ಗಾರವೇ ಓಂಕಾರ! ಅದು ಸಹಜವಾಗಿ ಬಂದ ಓಂಕಾರ. ಆತ್ಮನಿಂದ ಆಕಾಶಕ್ಕೆ, ಅದರಿಂದ ವಾಯುವಿಗೆ, ಅದರಿಂದ ಅಗ್ನಿಗೆ, ಅಗ್ನಿಯಿಂದ ಜಲಕ್ಕೆ, ಜಲದಿಂದ ಭೂಮಿಗೆ, ಭೂಮಿಯಿಂದ ಸಸ್ಯಗಳಿಗೆ ಆ ಮೂಲಚೇತನ, ಓಂಕಾರನಾದ ಇಳಿಯಿತು. ಅಲ್ಲಿಂದ ಅದು ದೇಹಕ್ಕೂ ವಾಣಿಗೂ ಹರಿದು 'ಓಂ'ಕಾರವಾಗಿ ಹೊಮ್ಮಿತು. ಓಂಕಾರ ಈ ರೀತಿ ವಿಶ್ವವ್ಯಾಪಕ! ವಿಶ್ವದಲ್ಲಿ ಕಾಣಬರುವ ದಿವ್ಯ ಓಂಕಾರ ನಿನಾದ ಇದು! ವಿಶ್ವದ ಪ್ರತಿ ಕಣಕಣದೊಳಗೆ ಓಂಕಾರ ತುಂಬಿದೆ.

ಓಂಕಾರ ಗಾನರೂಪ; ಗೀತರೂಪ; ಅದು ಪವಿತ್ರ ಉದ್ಗೀಥ. ಸತ್ಯಾನುಭವದ ವ್ಯಕ್ತರೂಪ! ಮೇಲಿನಿಂದ ಹರಿದುಬಂದರೆ ಓಂ ನಾದ. ಕೆಳಗಿನಿಂದ ಮೇಲೇರಿದರೆ ಉದ್ಗೀಥ!

ಮೂಲದತ್ತ ಧಾವಿಸುವ ಧ್ವನಿ! ದಿವ್ಯನಾದ! ಪವಿತ್ರ ಮಂತ್ರ! ಪಾವನ ಸಂಕೇತ! ಯಾವ ಮಂತ್ರಗಳೆ ಇರಲಿ ಎಲ್ಲಾ ಮಂತ್ರಗಳಿಗೂ ಓಂಕಾರ ಮೂಲಧ್ವನಿ. ಮೊಟ್ಟಮೊದಲನೆಯ ಉದ್ಗಾರದ ಧ್ವನಿ ಅದು. ಇದನ್ನು ಯಾರೂ ನಿರ್ಮಾಣ ಮಾಡಲಿಲ್ಲ. ಸಹಜವಾಗಿ ವಿಶ್ವದಲ್ಲಿ ಹೊರಹೊಮ್ಮಿ ಬಂತು. ಇಂತಹ ಉದ್ಗೀಥವನ್ನು ಉಪಾಸಿಸಬೇಕು! ಹೇಗೆ? ಮೂರು ರೂಪದಲ್ಲಿ ಉಪಾಸಿಸಬಹುದು.

ಮೊದಲನೆಯದು ಪ್ರಾಣರೂಪ ಉದ್ಗೀಥ ಉಪಾಸನೆ. ಈ ಜಗತ್ತಿನಲ್ಲಿ ಅನೇಕ ಜೀವಿಗಳು ಇವೆ. ಪ್ರತಿ ಜೀವಿಯ ದೇಹದ ಮಧ್ಯೆ ಸ್ಪಂದನ ಇದೆ. ಪ್ರಾಣಸ್ಪಂದನ ಇದೆ. ಭವ್ಯವಾದ ಈ ಪ್ರಾಣಸ್ಪಂದನ ಎಲ್ಲಾ ಪ್ರಾಣಿಗಳ ಮಧ್ಯೆ ಸಮನಾಗಿ ಇದೆ. ಯಾವ ಪ್ರಾಣಸ್ಪಂದನ ಕೀಟಗಳಲ್ಲಿ ಹರಿಯುತ್ತಿದೆಯೋ ಅದೇ ಸ್ಪಂದನ ನಮ್ಮೊಳಗೂ ಇದೆ, ಸಮಸ್ತ ವಿಶ್ವದಲ್ಲೂ ಇದೆ. ಈ ಸ್ಪಂದನವನ್ನು ಗುರುತಿಸುವುದು. ಜೀವಜಂತುಗಳನ್ನು ಕಂಡಾಗಲೆಲ್ಲಾ ಈ ಸ್ಪಂದನ ಆಲಿಸುವುದು. ಇದು ಪ್ರಾಣೋದ್ಗೀಥ ಸಾಧನೆ. ಪ್ರಾಣಸ್ಪಂದನಾನುಭವದ ವಿಧಾನ. ಹೃದಯದ ಬಡಿತದಲ್ಲಿ, ದೇಹದ ಚಲನೆಯಲ್ಲಿ, ಕಾರ್ಯಸಮೂಹದಲ್ಲಿ ಪ್ರಾಣರೂಪ ಪ್ರಣವ ನಿನಾದ ಆಲಿಸುವುದು.

ಎರಡನೆಯದು ಸಮಷ್ಟಿ ಭೌತ ಉದ್ಗೀಥ ಸಾಧನ. ಬೆಟ್ಟದ ಮೇಲೆ ಕುಳಿತು ನೋಡಿ! ಕ್ಷಿತಿಜ, ಉಷಸ್ಸು, ರವಿ, ಆಕಾಶ, ಹಸಿರು ಸೌಂದರ್ಯ ರಾಶಿ, ಎಲ್ಲವೂ ರವಿಯ ಪ್ರಕಾಶದ ರೂಹು! ಭಾನು ಬೆಳಕಿನ ಸೌಂದರ್ಯ! ಅದುವೇ ಉದ್ಗೀಥ! ಪ್ರಕಾಶ ಪ್ರಣವ. ಅದನ್ನು ನೋಡುವುದು, ಪ್ರಣವದ ಸೊಬಗರೂಪ ಸ್ಪಂದನ ಈಕ್ಷಿಸುವುದು ಈ ಸಾಧನೆ. ಅರುಣೋದಯ, ಬೆಳದಿಂಗಳು, ನಕ್ಷತ್ರಗಳ ಮಿಂಚು, ಎಲ್ಲವೂ ವಿಶ್ವಗಾನಗಳು! ಬೆಳಗಿನಲ್ಲಿ ಕುಳಿತು ವಿಶ್ವದ ಸೊಬಗನ್ನು ಸವಿಯುವುದು, ರಾತ್ರಿಯಲ್ಲಿ ಕುಳಿತು ಚಂದ್ರನ ಶೀತಲ ಜ್ಯೋತ್ಸ್ನೆ ಸವಿಯುವುದು. ಭೌತ ಉದ್ಗೀಥದ ಉಪಾಸನೆ! ವಿಶ್ವದಲ್ಲಿ ನಿನದಿಸುವ ಪ್ರಣವೋಪಾಸನೆ! ಇಂಥದ್ದನ್ನು ಋಷಿ ಅನುಭವಿಸಿದ, ಹಾಡಿದ, ಆತನ ಹಾಡುಗಳೇ, 'ಸಾಮ'! ಸಂಹಿತೆ. ಇಂಥ ಸ್ಥಿತಿಯಲ್ಲಿ ಯಾರು ಹಾಡಿದರೂ ಅದು ಸಾಮ!

ಮೂರನೆಯದು ಆಧ್ಯಾತ್ಮಿಕ ಉದ್ಗೀಥ. ಮಕ್ಕಳ ಕಣ್ಣಿನೊಳಗಿನ ಕಾಂತಿ, ಮುಖದ ಮೇಲಿನ ಪ್ರಸನ್ನತೆ, ಸಂತರ, ಮಹಂತರ, ವಿದ್ವಾಂಸರ, ಅತಿ ಪರಿಶುದ್ಧ ಹೃದಯದ ದೇಹದಿಂದ ಹೊಮ್ಮುವ ಶಾಂತಿ ಕಂಡು ಇದು ಪ್ರಣವ ಎಂದು ಭಾವಿಸುವುದು, ಆಧ್ಯಾತ್ಮಿಕ ಉದ್ಗೀಥ. ನಮ್ಮೊಳಗೆ ಬುದ್ಧಿ ಇದೆ, ವಿಚಾರಗಳಿವೆ, ಪ್ರಜ್ಞೆ ಇದೆ, ಅಸ್ತಿತ್ವದ ಅರಿವಿದೆ. ಅದೆಲ್ಲ ಪ್ರಣವ ನಿನಾದವೆಂದು ಅನುಭವಿಸುವುದು ಉದ್ಗೀಥ!

ನಮ್ಮ ಸಂತೋಷಕರ ಮಾತು, ರಸಪೂರ್ಣ ಭಾವನೆಗಳು, ಪ್ರಕಾಶಕ ವಿಚಾರಗಳು ಇವುಗಳಲ್ಲೆಲ್ಲಾ ಪ್ರಣವಧ್ವನಿ ಗುರುತಿಸಿ, ಕೇಳಿ, ಹರ್ಷ ಮಗ್ನನಾಗುವುದು ಆಧ್ಯಾತ್ಮಿಕ ಉದ್ಗೀಥ ಸಾಧನೆ. ಈ ಮೂರು ಬಗೆಯ ಶಬ್ದಾಲಂಬನ, ಧ್ವನ್ಯಾಲಂಬನ ಪವಿತ್ರ ಸಾಧನೆ 'ಭಗವಚ್ಚಿಂತನ.'

□

# ಆಶ್ರಯ ನೀಡಿದ ಶ್ರೀಮಠ*

**ಡಾ. ಜಿ.ಎಸ್. ಶಿವರುದ್ರಪ್ಪ**

ಸುತ್ತೂರು ಮಠದ ವಿದ್ಯಾರ್ಥಿನಿಲಯದ ಹಳೆಯ ವಿದ್ಯಾರ್ಥಿಗಳಲ್ಲಿ ಒಬ್ಬನಾದ ನನ್ನನ್ನು, ಜಗದ್ಗುರು ಶ್ರೀ ಶಿವರಾತ್ರೀಶ್ವರ ಪ್ರಸಾದ ನಿಲಯಗಳ ಹಿರಿಯ ವಿದ್ಯಾರ್ಥಿಗಳ ಸಂಘವು ನನಗೆ ರಾಷ್ಟ್ರಕವಿ ಪ್ರಶಸ್ತಿ ಬಂದ ಸಂದರ್ಭದಲ್ಲಿ, ಈ ದಿನ ಅತ್ಯಂತ ಪ್ರೀತಿ, ವಿಶ್ವಾಸಗಳಿಂದ ಅಭಿನಂದಿಸಿ ಗೌರವಿಸಿದೆ. ಅದಕ್ಕಾಗಿ ನಾನು ಪ್ರಸಾದನಿಲಯಗಳ ಹಿರಿಯ ವಿದ್ಯಾರ್ಥಿಸಂಘದ ಅಧ್ಯಕ್ಷರಾದ ಶ್ರೀ ಎಲ್. ರೇವಣಸಿದ್ಧಯ್ಯ ಮತ್ತು ಇತರ ಪದಾಧಿಕಾರಿಗಳಿಗೆ ಕೃತಜ್ಞತೆಯ ವಂದನೆಗಳನ್ನು ಸಲ್ಲಿಸುತ್ತ ಈ ಸನ್ಮಾನವನ್ನು ತುಂಬ ಪ್ರೀತಿಯಿಂದ ಸ್ವೀಕರಿಸಿದ್ದೇನೆ.

ಈ ಸಮಾರಂಭದ ಜತೆಗೆ ಇನ್ನೆರಡು ವಿಶೇಷಗಳು ಸೇರಿಕೊಂಡಿವೆ. ಮೊದಲನೆಯದು ಪ್ರೊ. ಲಿಂಗದೇವರು ಹಳೆಮನೆಯವರು ನನ್ನ ಸಾಹಿತ್ಯ ಹಾಗೂ ವ್ಯಕ್ತಿತ್ವವನ್ನು ಕುರಿತು ರಚಿಸಿರುವ ಕಿರು ಕೃತಿಯೊಂದು ನನ್ನ ಪ್ರೀತಿಯ ಕವಿಯೂ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರೂ ಆಗಿರುವ ಡಾ. ಸಿದ್ಧಲಿಂಗಯ್ಯನವರಿಂದ ಬಿಡುಗಡೆಯಾಗುತ್ತಿದೆ ಅನ್ನುವುದು. ಪ್ರೊ. ಲಿಂಗದೇವರು ಇಂಥದೊಂದು ಕೃತಿಯನ್ನು ಬರೆದಿದ್ದಾರೆನ್ನುವುದು ನನಗೆ ಸಂತೋಷದ ಸಂಗತಿ ಕೂಡಾ. ಎರಡನೆಯದು, ಭಾರತೀಯ ಭಾಷಾ ಸಂಸ್ಥಾನದ ವತಿಯಿಂದ ನನ್ನ ತರುಣ ಮಿತ್ರರು, ಸಾಹಿತ್ಯ ಹಾಗೂ ಚಲನಚಿತ್ರ ವಲಯಗಳಲ್ಲಿ ಹೆಸರು ಮಾಡಿರುವ ಶ್ರೀ ಕೃಷ್ಣ ಮಾಸಡಿಯವರು ನನ್ನನ್ನು ಕುರಿತು ಸಿದ್ಧಪಡಿಸಿರುವ ಸಾಕ್ಷ್ಯಚಿತ್ರವೊಂದು ಈ ದಿನ ಪ್ರದರ್ಶಿತವಾಗಲಿದೆ ಅನ್ನುವುದು. ಈ ಸಾಹಸಗಳಿಗಾಗಿ ನಾನು ಪ್ರೊ. ಲಿಂಗದೇವರು ಹಳೆಮನೆಯವರನ್ನೂ, ಶ್ರೀ ಕೃಷ್ಣ ಮಾಸಡಿಯವರನ್ನೂ ಅಭಿನಂದಿಸುತ್ತೇನೆ. ಮತ್ತು, ನನ್ನನ್ನು ಕುರಿತು ಪ್ರಿಯರಾದ ಶ್ರೀ ಗೊ.ರು. ಚನ್ನಬಸಪ್ಪನವರು, ಡಾ. ಎಂ. ಚಿದಾನಂದಮೂರ್ತಿಯವರು ಮತ್ತು ಡಾ. ಸಿ.ಪಿ.ಕೆ. ಹಾಗೂ ಡಾ. ಸಿದ್ಧಲಿಂಗಯ್ಯನವರು ತುಂಬ ಪ್ರೀತಿಯಿಂದ ಮಾತನಾಡಿದ್ದಾರೆ. ತಮ್ಮ ನಡುವಣ ಒಬ್ಬ ಕವಿಯನ್ನು ಕುರಿತು ಆತನ ಸಮಕಾಲೀನ ಸಹೃದಯರು ತಾಳುವ ಆಸಕ್ತಿ, ನಡೆಯಿಸುವ ಚರ್ಚೆ ಇವೆಲ್ಲ ಆ ಕವಿಗೆ ತೋರುವ ಗೌರವವಷ್ಟೇ ಅಲ್ಲ, ಆ ಮೂಲಕ ಒಂದು ಭಾಷೆಗೆ ಮತ್ತು ಆ ಭಾಷೆಯನ್ನಾಡುವ ಜನಕ್ಕೆ ತೋರುವ ಗೌರವವೂ ಹೌದು.

---

* ರಾಷ್ಟ್ರಕವಿ ಪದವಿ ಪುರಸ್ಕಾರ ಪಡೆದಾಗ ಜೆಎಸ್ಎಸ್ ಪ್ರಸಾದನಿಲಯಗಳ ಹಿರಿಯ ವಿದ್ಯಾರ್ಥಿಗಳ ಸಂಘವು 16.6.2007ರಂದು ಸನ್ಮಾನಿಸಿದಾಗ ಶ್ರೀ ಜಿ.ಎಸ್. ಶಿವರುದ್ರಪ್ಪನವರು ಮಾಡಿದ ಭಾಷಣ

ನಾನು ಮೂರು ಮಠಗಳ ತೊಟ್ಟಿಲಲ್ಲಿ ಬೆಳೆದವನು. ಅಂದರೆ, ನನ್ನ ಶೈಕ್ಷಣಿಕ ಜೀವನವು ವಿಕಾಸಹೊಂದಿದ್ದು ಶರಣಧರ್ಮದ ಮೂರು ಮುಖ್ಯ ಮಠಗಳು ನಡೆಯಿಸುತ್ತಿರುವ ವಿದ್ಯಾರ್ಥಿನಿಲಯಗಳ ಆಶ್ರಯ ಮತ್ತು ಪೋಷಣೆಯಲ್ಲಿ. ಮೊದಲನೆಯದು, ನನಗೆ ಹೈಸ್ಕೂಲಿನ ದಿನಗಳಲ್ಲಿ ಆಶ್ರಯ ಕೊಟ್ಟದ್ದು ಚಿತ್ರದುರ್ಗದ ಶ್ರೀ ಮುರುಘರಾಜೇಂದ್ರ ಸ್ವಾಮಿಗಳು ದಾವಣಗೆರೆಯಲ್ಲಿ ಸ್ಥಾಪಿಸಿರುವ ಜಯದೇವ ವಿದ್ಯಾರ್ಥಿನಿಲಯ. ದಾವಣಗೆರೆಯ ಜಯದೇವ ವಿದ್ಯಾರ್ಥಿನಿಲಯ ಸ್ಥಾಪಿತವಾಗಿ ಒಂದು ನೂರು ವರ್ಷವಾಯಿತು. ಕಳೆದ ತಿಂಗಳು ಅದರ ಶತಮಾನೋತ್ಸವ ವರ್ಷದ ಆಚರಣೆಯ ಸಂದರ್ಭದಲ್ಲಿ ಅದರ ಹಳೆಯ ವಿದ್ಯಾರ್ಥಿಯಾದ ನನ್ನನ್ನು ರಾಷ್ಟ್ರಕವಿ ಪುರಸ್ಕೃತನೆಂದು ಗೌರವಿಸಲಾಯಿತು. ಎರಡನೆಯದು ನನ್ನ ಇಂಟರ್‌ಮೀಡಿಯೇಟ್ ಕಾಲೇಜಿನ ದಿನಗಳಲ್ಲಿ ನನಗೆ ಆಶ್ರಯ ಕೊಟ್ಟದ್ದು ಪೂಜ್ಯ ಶ್ರೀ ಶಿವಕುಮಾರ ಸ್ವಾಮಿಗಳ ಸಿದ್ಧಗಂಗಾ ಮಠದ ಪ್ರಸಾದನಿಲಯ. ಋಷ್ಯಾಶ್ರಮಸದೃಶವಾದ ಈ ಕ್ಷೇತ್ರದಲ್ಲಿ ನನ್ನ ಕವಿತೆಗೆ ರೆಕ್ಕೆಪುಕ್ಕಗಳು ಮೂಡಿದುವೆಂದು ಹೇಳಬಹುದು. ಮೂರನೆಯದು ನನ್ನ ಬಿ.ಎ. ಆನರ್ಸ್ ತರಗತಿಯ ಶಿಕ್ಷಣದ ಸಂದರ್ಭದಲ್ಲಿ ಆಶ್ರಯ ಕೊಟ್ಟದ್ದು ಮೈಸೂರಿನಲ್ಲಿರುವ ಶ್ರೀ ಸುತ್ತೂರು ಜಗದ್ಗುರುಗಳು ನಡೆಯಿಸುತ್ತಿದ್ದ ಶ್ರೀ ಶಿವರಾತ್ರಿ ರಾಜೇಂದ್ರ ವಿದ್ಯಾರ್ಥಿನಿಲಯ. ಈ ಮೂರೂ ಮಠಗಳು ಕರ್ನಾಟಕದ ಶಿಕ್ಷಣ ಹಾಗೂ ಸಂಸ್ಕೃತಿಯ ಸಂವರ್ಧನೆಯಲ್ಲಿ ವಹಿಸಿರುವ ಪಾತ್ರ ಮಹತ್ವದ್ದು. ಇವುಗಳ ಆಶ್ರಯವಿಲ್ಲದಿದ್ದ ಪಕ್ಷದಲ್ಲಿ ನಾನು ಹಾಗೂ ನನ್ನಂಥ ಅಸಂಖ್ಯ ಬಡ ವಿದ್ಯಾರ್ಥಿಗಳು ಶಿಕ್ಷಣದ ಸವಲತ್ತನ್ನು ಪಡೆದುಕೊಂಡು ಮುಂದೆ ಬರಲು ಸಾಧ್ಯವೇ ಇರುತ್ತಿರಲಿಲ್ಲ ಅನ್ನುವುದು ಒಂದು ಚಾರಿತ್ರಿಕ ಸತ್ಯವಾಗಿದೆ.

ಸುತ್ತೂರು ಮಠದ ವಿದ್ಯಾರ್ಥಿನಿಲಯದ ಒಬ್ಬ ಹಳೆಯ ವಿದ್ಯಾರ್ಥಿಯಾಗಿ ನನ್ನ ಅಂದಿನ ದಿನಗಳನ್ನು ನೆನೆಯುವುದು ಅಂದರೆ, ಮೈಸೂರಿನ ಮಹಾರಾಜ ಕಾಲೇಜಿನ ಉಜ್ವಲವಾದ ಆ ದಿನಗಳನ್ನು ನೆನೆಯುವುದು ಎಂದೇ ಅರ್ಥ. ಮಹಾಕವಿ ಕುವೆಂಪು, ಪಂಡಿತೋತ್ತಮ ಡಿ.ಎಲ್. ನರಸಿಂಹಾಚಾರ್, ಆಚಾರ್ಯ ತೀ.ನಂ. ಶ್ರೀಕಂಠಯ್ಯ, ಮಹಾವಾಗ್ಮಿ ಟಿ.ಎ. ಪುರುಷೋತ್ತಮ, ವಿನೋದಪ್ರಿಯ ಪ್ರೊ. ವಿ.ಎಲ್. ಡಿಸೌಜ, ತತ್ವಜ್ಞಾನಿ ಎಂ. ಯಾಮುನಾಚಾರ್ಯ, ಮಾಧುರ್ಯವೇ ಮೂರ್ತಿವೆತ್ತಂತಿದ್ದ ರಾಳ್ಲಪಳ್ಳಿ ಅನಂತಕೃಷ್ಣಶರ್ಮ– ಈ ಹೆಸರುಗಳೇ ಸಾಕು. ಇವರ ನಡುವೆ ಸೇರಿಸಬೇಕಾದದ್ದು ವಾತ್ಸಲ್ಯದ ಪ್ರತಿಮಾಸ್ವರೂಪರಾದ ಪ್ರೊ. ತ.ಸು. ಶಾಮರಾಯರು.

ಶಾಮರಾಯರ ನೆನಪು ಬರುತ್ತಲೇ ನಾನು ಸುತ್ತೂರು ಮಠದ ವಿದ್ಯಾರ್ಥಿನಿಲಯಕ್ಕೆ ಸೇರಿಕೊಂಡ ಸ್ವಾರಸ್ಯವಾದ ಸಂಗತಿ ಕಣ್ಣ ಮುಂದೆ ಬಂದು ನಿಲ್ಲುತ್ತದೆ.

ಅದು 1946ನೆಯ ಇಸವಿ. ಗ್ರಾಮೀಣ ಪರಿಸರದ ಮಧ್ಯಮ ವರ್ಗದ ಕುಟುಂಬದಿಂದ ಬಂದ ನಾನು ಮನೆಯೊಳಗಣ ಆರ್ಥಿಕ ಸಂಕಷ್ಟಗಳ ಕಾರಣದಿಂದ ವಿದ್ಯಾಭ್ಯಾಸವನ್ನು

ಮುಂದುವರಿಸಲಾಗದೆ, ಕೆಲವು ಕಾಲ ಮಿಡಲ್ ಸ್ಕೂಲ್ ಮೇಷ್ಟ್ರಾಗಿ, ಕೆಲವು ಕಾಲ ತಾಲ್ಲೂಕು ಕಛೇರಿಯ ಗುಮಾಸ್ತನಾಗಿ ಹಲವು ಅವಸ್ಥಾಂತರಗಳನ್ನು ಹಾದು, ಅದು ಹೇಗೋ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಕನ್ನಡ ಬಿ.ಎ. ಆನರ್ಸ್ ತರಗತಿಗೆ ಸೇರಿಕೊಂಡಿದ್ದೆ. ಆದರೆ ಏನು ಕಾರಣವೋ ಏನೋ ಮೈಸೂರಿನ ಯಾವ ವಿದ್ಯಾರ್ಥಿನಿಲಯದಲ್ಲೂ ನನಗೆ ಪ್ರವೇಶ ದೊರೆಯಲಿಲ್ಲ. ಹೀಗಾಗಿ ನಾನು ನನ್ನಂತೆಯೆ ಇದ್ದ ಒಂದಿಬ್ಬರು ಗೆಳೆಯರೊಂದಿಗೆ, ಮೈಸೂರಿನ ಡಿ. ಸುಬ್ಬಯ್ಯ ರಸ್ತೆಯಲ್ಲೊಂದು ಕೊಠಡಿಯನ್ನು ಬಾಡಿಗೆಗೆ ಹಿಡಿದು, ಒಂದಷ್ಟು ಅನ್ನ ಬೇಯಿಸಿಕೊಂಡು ಹೋಟಲಿನಿಂದ ಸಾಂಬಾರ್ ಕೊಂಡು ತಂದು, ನಮ್ಮ ದಿನಗಳನ್ನು ನೂಕುತಿದ್ದೆವು.

ಇಂಥ ದಿನಗಳಲ್ಲಿ ಒಂದು ದಿನ ಮಹಾರಾಜ ಕಾಲೇಜಿನಲ್ಲಿ ನಮ್ಮ ಗುರುಗಳಾದ ತ.ಸು. ಶಾಮರಾಯರು ಕುಮಾರವ್ಯಾಸನ 'ಉದ್ಯೋಗ ಪರ್ವ'ದ ಒಂದು ಸಂದರ್ಭವನ್ನು ಕುರಿತು ಪಾಠ ಮಾಡುತ್ತಿದ್ದರು. ಇದ್ದಕ್ಕಿದ್ದಹಾಗೆ ನನಗೆ ತಲೆ ಸುತ್ತಿದಂತಾಗಿ, ಡೆಸ್ಕಿನ ಮೇಲೆ ತಲೆಯಿರಿಸಿ ಒರಗಿಕೊಂಡೆ. ಕೊಂಚ ಹೊತ್ತಿನ ಮೇಲೆ ಸುಧಾರಿಸಿಕೊಂಡು ಮಂಕಾಗಿ ಕೂತ ನನ್ನನ್ನು ಶಾಮರಾಯರು ಗಮನಿಸಿದರು.

ತರಗತಿ ಮುಗಿದ ಕೂಡಲೇ ನನ್ನ ಕಡೆ ನೋಡಿ 'ಏ ಮಗೂ, ಏನಾಗಿದೆ ನಿನಗೆ? ಯಾಕೆ ಹೀಗಿದ್ದೀ? ಊಟ ಮಾಡಿದ್ದೀಯ ತಾನೆ?' ಅಂದರು. ನಾನೆಂದೆ: 'ಊಟ ಆಗಿದೆ ಸಾರ್, ಏನೋ ಸ್ವಲ್ಪ ತಲೆ ಸುತ್ತಿದ ಹಾಗಾಯಿತು, ಅಷ್ಟೆ'. 'ಎಲ್ಲಿ ಮಾಡಿದೆ, ಯಾವ ಹಾಸ್ಟಲು' ಅಂದರು ಮೇಷ್ಟ್ರು. 'ಯಾವ ಹಾಸ್ಟಲಲ್ಲೂ ಇಲ್ಲ ಸಾರ್, ಹೋಟಲಿನಲ್ಲಿ' ಅಂದೆ. 'ಸುಳ್ಳು, ಸುಳ್ಳು. ನೀನು ಊಟಾನೇ ಮಾಡಿಲ್ಲ ಅನ್ನೋದನ್ನ ನಿನ್ನ ಮುಖವೇ ಹೇಳುತ್ತೆ. ಬಾ ನನ್ನ ಜತೆಗೆ' – ಎಂದು ಸೀದಾ ತಮ್ಮ ಮನೆಗೆ ಕರೆದುಕೊಂಡು ಹೋದರು. 'ಲೇ, ನನ್ನ ಜತೆಗೆ ಇವನಿಗೂ ಎಲೆ ಹಾಕೇ' ಎಂದು ಅಡುಗೆಮನೆಯೊಳಗಿದ್ದ ತಮ್ಮ ಮಡದಿಗೆ ಕೇಳುವಂತೆ ಹೇಳಿದರು. ಮುಂದಿನ ಹದಿನೈದು ನಿಮಿಷಗಳಲ್ಲಿ ನಡೆದಿತ್ತು ನಮ್ಮ ಊಟ. 'ಬಡ್ಸು ಬಡ್ಸು, ಸರಿಯಾಗಿ ಬಡ್ಸು' ಎಂದು ತಮ್ಮ ಹೆಂಡತಿಗೆ ಹೇಳುತ್ತಲೇ 'ನಾಚಿಕೆಪಟ್ಟುಕೊಳ್ಳಬೇಡ ಕಣಯ್ಯಾ, ಸರಿಯಾಗಿ ಊಟ ಮಾಡು' ಅಂದರು. ಊಟವಾದ ಮೇಲೆ ನನ್ನ ಪೂರ್ವೋತ್ತರಗಳನ್ನೆಲ್ಲ ವಿಚಾರಿಸಿದರು. ಮರುದಿನ ನನ್ನನ್ನು ಸುತ್ತೂರು ಜಗದ್ಗುರುಗಳಾದ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳ ಹತ್ತಿರ ಕರೆದುಕೊಂಡು ಹೋದರು. 'ಸ್ವಾಮೀಜಿ ಇವನೊಬ್ಬ ಬಡ ಹುಡುಗ. ನನ್ನ ವಿದ್ಯಾರ್ಥಿ. ಯಾವ ಹಾಸ್ಟಲಲ್ಲೂ ಇವನಿಗೆ ಅವಕಾಶ ಸಿಕ್ಕಿಲ್ಲ. ಇವನಿಗೆ ನಿಮ್ಮ ಹಾಸ್ಟಲಲ್ಲಿ ದಯಮಾಡಿ ಅನುಕೂಲ ಮಾಡಿಕೊಡಿ' ಎಂದು ಕೇಳಿಕೊಂಡರು. ಪೂಜ್ಯ ಸ್ವಾಮಿಗಳು ನಕ್ಕು ಹೇಳಿದರು. 'ಶಾಮರಾಯರೇ ಇವನು ಲಿಂಗಾಯತರ ಹುಡುಗ, ನೀವು ಬ್ರಾಹ್ಮಣರು. ಇವನ ಬಗ್ಗೆ ನಿಮಗೇನು ಇಷ್ಟೊಂದು ಆಸಕ್ತಿ?' ಶಾಮರಾಯರು ಎಂದೂ ಯಾವುದಕ್ಕೂ ತಮ್ಮ ಸ್ವಂತಕ್ಕೆಂದು ಯಾರ ಹತ್ತಿರವೂ ಹೋದವರಲ್ಲ. ಪೂಜ್ಯ ಸ್ವಾಮೀಜಿಯವರು ಶಾಮರಾಯರ ಬಗ್ಗೆ ತುಂಬ

ವಿಶ್ವಾಸವಿರಿಸಿಕೊಂಡವರು. ಅವರೇ ಹೀಗಂದ ಮೇಲೆ ಶಾಮರಾಯರು ಸ್ವಲ್ಪ ಕಟುವಾಗಿಯೇ ಹೇಳಿದರು. 'ಸ್ವಾಮೀಜಿ, ನನ್ನ ವಿದ್ಯಾರ್ಥಿಗಳು ನನ್ನ ಮಕ್ಕಳಿದ್ದಂತೆ. ಅವರು ನನ್ನ ಮಟ್ಟಿಗೆ ಜಾತ್ಯತೀತರು. ಅವರದು ವಿದ್ಯಾರ್ಥಿಗಳ ಜಾತಿ, ನಾನು ಅವರ ಗುರು'. ಸ್ವಾಮಿಗಳ ನಗುಮುಖ ಅರಳಿತು. ಸ್ವಾಮೀಜಿ ಹೇಳಿದರು: 'ನಾನು ಅದನ್ನು ಬಲ್ಲೆ, ಕೇವಲ ಹಾಸ್ಯಕ್ಕಾಗಿ ಹೇಳಿದೆ. ನಾಳೆಯಿಂದಲೇ ಈತ ನಮ್ಮ ಹಾಸ್ಟೆಲಿಗೆ ಬಂದು ಸೇರಿಕೊಳ್ಳಲಿ.'

ಅಂತೂ ಇಂತೂ ಶಾಮರಾಯರ ಕೃಪೆಯಿಂದ ಸುತ್ತೂರು ಮಠದ ವಿದ್ಯಾರ್ಥಿನಿಲಯದೊಳಗೆ ಪ್ರವೇಶ ಪಡೆದ ನಾನು, ಅಂದಿನಿಂದ ಮೂರು ವರ್ಷಗಳ ಕಾಲ ಅಶನ-ವಸತಿ ಸೌಲಭ್ಯಗಳನ್ನು ಪಡೆದುಕೊಳ್ಳುವ ಸುಯೋಗವೊಂದು ಪ್ರಾಪ್ತವಾಯಿತು. ಆ ಸುಯೋಗವೇ ಈಹೊತ್ತು ಶ್ರೀ ಶಿವರಾತ್ರೀಶ್ವರ ವಿದ್ಯಾರ್ಥಿನಿಲಯದ ಹಿರಿಯ ವಿದ್ಯಾರ್ಥಿ ಗಳ ಸಂಘದಿಂದ ಸನ್ಮಾನಗೊಳ್ಳುವ ಸಂದರ್ಭಕ್ಕೆ ನಾಂದಿಯಾಯಿತೆಂದು ಭಾವಿಸುತ್ತೇನೆ.

ಜತೆಗೆ ಇಂದಿನ ಹಾಗೂ ಹಿಂದಿನ ಕೆಲವು ಅಭಿನಂದನ ಸಮಾರಂಭಗಳ ಹಿಂದೆ ಪೂಜ್ಯ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ನನ್ನ ಬಗ್ಗೆ ಇರಿಸಿರುವ ಪ್ರೀತಿ-ಅಭಿಮಾನಪೂರ್ವಕವಾದ ಆಶೀರ್ವಾದದ ಪರಿವೇಷವೊಂದು ಅಗೋಚರವಾಗಿ ಇದೆ ಎನ್ನುವುದು ನನ್ನ ಭಾಗ್ಯವಾಗಿದೆ.

ನವೋದಯ ಉತ್ಕರ್ಷಕಾಲದಲ್ಲಿ ಕನ್ನಡ ಸಾಹಿತ್ಯವನ್ನು ಪ್ರವೇಶಿಸಿದ ನಾನು ಈವರೆಗಿನ ವಿವಿಧ ಸಾಹಿತ್ಯ ಚಳವಳಿಗಳಿಂದ ನನ್ನ ಸೃಜನಶೀಲತೆಗೆ ಅಗತ್ಯವಾದ ಗುಣಾತ್ಮಕ ಅಂಶಗಳನ್ನು ಕರಗಿಸಿ ಕೊಳ್ಳುತ್ತ, ಅರಗಿಸಿಕೊಳ್ಳುತ್ತ ಸಾಹಿತ್ಯಕ್ಷೇತ್ರದಲ್ಲಿ ಅಲ್ಪಸ್ವಲ್ಪ ಸಾಧನೆ ಮಾಡಿದ್ದೇನೆ. ಕನ್ನಡ ಜನ ನನ್ನನ್ನು ಪ್ರೀತಿಯಿಂದ ಕವಿ ಎಂದು ಮೆಚ್ಚಿ ಒಪ್ಪಿಕೊಂಡಿದೆ. ನನ್ನ ಅಧ್ಯಾಪಕತನದ ಜೀವನದಲ್ಲಿ ನಾನು ಸಂಪಾದಿಸಿದ ಸಂಪತ್ತೆಂದರೆ, ನಾನು ಹೆಮ್ಮೆಪಟ್ಟುಕೊಳ್ಳಬಹುದಾದ ಹಾಗೂ ಸಾಹಿತ್ಯದ ವಿವಿಧ ಕ್ಷೇತ್ರಗಳಲ್ಲಿ ಹೆಸರು ಮಾಡಿರುವ ಬಹುಸಂಖ್ಯೆಯ ವಿದ್ಯಾರ್ಥಿಗಳೇ. ಕಾಲದಿಂದ ಕಾಲಕ್ಕೆ ಅಯಾಚಿತವಾಗಿ ಪ್ರಶಸ್ತಿಗಳು ನನಗೆ ಲಭ್ಯವಾಗಿವೆ. ಈ ಎಲ್ಲವನ್ನೂ ನೋಡಿದರೆ ನಾನು ಅದೃಷ್ಟವಂತನೆಂದೇ ಹೇಳಬೇಕು. ಒಂದು ರೀತಿಯಲ್ಲಿ ನಾನು ಕೊಟ್ಟಿದ್ದಕ್ಕಿಂತ ಪಡೆದದ್ದೇ ಹೆಚ್ಚೆಂದು ತೋರುತ್ತದೆ.

ಹೀಗೆ ಪಡೆದದ್ದರ ಪಟ್ಟಿಗೆ ಇಂದಿನ ಸಮಾರಂಭವೂ ಸೇರುತ್ತದೆ. ಅದಕ್ಕಾಗಿ ನಿಮಗೆ ಕೃತಜ್ಞತೆಯ ವಂದನೆ ಅಂದರೆ ಅಷ್ಟೆ ಸಾಕೆ? ನಿಜವಾಗಿಯೂ ಹೇಳಬೇಕಾದದ್ದು ಹೇಳಿದ್ದರ ಆಚೆಗೇ ಉಳಿದು ಬಿಡುತ್ತದೆ. ನಮಸ್ಕಾರ.

**ಕೃಪೆ : 'ಘನ–ಮನ' (ಜೆಎಸ್‌ಎಸ್ ಗ್ರಂಥಮಾಲೆ ಪ್ರಕಟಣೆ)**

□

ವೀರಶೈವ ಟೀಕು ಸಾಹಿತ್ಯ ಸರಣಿ

# ಶಬರಶಂಕರ ವಿಲಾಸ ಟೀಕು : ದ್ವಿತೀಯಾಶ್ವಾಸ

ಸಿದ್ಧಾಂತಿ ಶಿವಶಂಕರ ಶಾಸ್ತ್ರಿಗಳು

(ಮುಂದುವರಿದಿದೆ)

ಕಂ॥ ತಳತಳನೆ ತೊಳಪ ರದನ ।
ಬೆಳಗಂತ ಸ್ಥಿತಕೃಪಾಸುಧಾಂಭೋನಿಧಿ ಮ ॥
ಗ್ಗಳಿಸಿ ತೆರೆ ಮಸಗಿದಂತಿರೆ ॥
ಜಲರುಹರಿಪುಮೌಳಿ ತಾಪಸಂಗಿಂತೆಂದಂ ॥ ೧೧೪ ॥

**ಟೀಕೆ ॥** ತಳತಳನೆ – (ಅನುಕರಣವು ಪ್ರಕಾಶದಲ್ಲಿ) ಥಳಥಳಾಯಮಾನವಾಗಿ, ತೊಳಪ – ಬೆಳಗುವ, ರದನದ – ಹಲ್ಲಿನ, ಬೆಳಗು – ಪ್ರಕಾಶವು, ಅಂತಸ್ಥಿತ – ಒಳಗಿರುವ, ಕೃಪಾಸುಧಾಂಭೋನಿಧಿ – ದಯೆಯೆಂಬ ಪಾಲ್ಗಡಲು, ಮಗ್ಗಳಿಸಿ – ಉಕ್ಕಿ, ತೆರೆ ಮಸಗಿದಂತಿರೆ – ಅಲೆಯೆದ್ದ ಹಾಗಿರಲು, ಜಲರುಹರಿ ಪುಮೌಳಿ – ಚಂದ್ರಶೇಖರನು, ತಾಪಸಂಗೆ ಇಂತೆಂದಂ.

**ತಾ ॥** ಪ್ರಗಲ್ಭತಾಪಸನಿಗೆ ಶಿವ ಉತ್ತರವಂ ಪೇಳುವಾಗ ಶಿವನ ದಂತಕಾಂತಿಯು ಅಂತರ್ಗತವಾದ – ಕರುಣಾಸಮುದ್ರದ ತರಂಗದ ಹಾಗಿತ್ತೆಂದು ಉಪಮಾಲಂಕಾರವು ॥ ೧೧೪ ॥

ಮ॥ ಆ ತಪೋಧನನಾವನೆಂಬಭಿಶಂಕೆಯೇಕೆ ಜಗತ್ರಯ ।
ಖ್ಯಾತನರ್ಜುನನಿಂದ್ರಸೂನು ಮುಕುಂದದೇವರನುಗ್ರಶೌ ॥
ರ್ಯಾತುಳಂ ಭವದೀಯಭಾಗ್ಯಮನೇನುಮಂಡಲೆದರ್ಥಿಸಂ ।
ಭೀತಿ ಬೇಡವನತ್ತಣೀಂ ನಿಮಗಂತವಂ ತಪಮಿರ್ದೊಡಂ ॥ ೧೧೫ ॥

**ಟೀಕೆ ॥** ಆ ತಪೋಧನಂ ಅವನೆಂಬ – ಯಾರೆಂಬ, ಅಭಿಶಂಕೆ – ಹೆದರಿಕೆ, ಏಕೆ, ಜಗತ್ರಯಖ್ಯಾತಂ – ಮೂರುಲೋಕದಲ್ಲಿಯೂ ಪ್ರಸಿದ್ಧನಾದ, ಇಂದ್ರಸೂನು – ಇಂದ್ರನ ಮಗನು, ಮುಕುಂದ – ಕೃಷ್ಣನ, ದೇವರಂ – ಮೈದುನನು, ಉಗ್ರಶೌರ್ಯಾತುಳಂ – ಕ್ರೂರವಾದ ಶೂರತ್ವದಲ್ಲಿ ಸಮಾನರಿಲ್ಲದವನು ಆದ "ಅರ್ಜುನಂ" ಎಂಬವನು, ಭವದೀಯಭಾಗ್ಯಮಂ – ನಿಮ್ಮದಾಗಿರುವ ಐಶ್ವರ್ಯವನ್ನು, ಏನುಮಂ – ಯಾವುದನ್ನೂ, ಅಂಡಲೆದು – ಉಪದ್ರವಗೊಳಿಸಿ, ಅರ್ಥಿಸಂ – ಬಯಸನು, ಅವಂ ಅಂತು ತಪಮಿರ್ದೊಡಂ ಅವನತ್ತಣಿಂ – ನಿಮಗೆ ಭೀತಿ ಬೇಡ.

**ತಾ ||** ಅವನು – ಅರ್ಜುನನು, ನಿಮ್ಮ ಭಾಗ್ಯವನ್ನು ಬಯಸುವವನಲ್ಲ, ಅವನು ಹಾಗೆ ತಪವಂಗೈದರೂ ಅವನ ದೆಸೆಯಿಂದ ನೀವು ಹೆದರಬೇಕಾದುದಿಲ್ಲ || ಪಾದ ೧ಕ್ಕೆ – ರ–ಸ–ಜ–ಜ–ಭ–ರ ಎಂಬ ೬ ಗಣಂಗಳಿಂವೆರಸಿದ ೧೮ ಅಕ್ಷರಂಗಳುಳ್ಳ ಮಲ್ಲಿಕಾಮಾಲಾವೃತ್ತಂ || ೧೧೫ ||

ಮ|| ಪಡೆ ನೀ ಪಾಶುಪತಾಸ್ತ್ರಮಂ ಗಿರಿಶನಿಂ ಪೋಗಿಂದ್ರಕೀಲಕ್ಕೆ ಪೆಂ ।
ಪಡರ್ದುದ್ಯತ್ತಪಮಾಂಪುದೆಂದು ಬೆಸನಿತ್ತಂ ವ್ಯಾಸನೆಯ್ತಂದನಾ ।
ಯೆಡೆಗಾತಂ ಪದೆದಿತ್ತ ಮಂತ್ರಮನದಂ ಕೈಕೊಂಡು ಮದ್ಭಕ್ತಿಸಂ ।
ಗಡಮಾಗುತ್ತಿರೆ ವೈರಿವಗವಿಜಯೋಪಾಯಾನ್ವಿತಂ ಫಾಲ್ಗುನಂ || ೧೧೬ ||

**ಟೀಕೆ ||** ನೀಂ – ನೀನು, ಪಾಶುಪತಾಸ್ತ್ರಮಂ – ಪಶುಪತಿದೇವತಾಸ್ತ್ರವಾದ ಮಂತ್ರಾಯುಧವನ್ನು, ಗಿರಿಶನಿಂ – ಶಿವನಿಂದ, ಪಡೆ – ಪಡಕೊ, ಇಂದ್ರಕೀಲಕ್ಕೆ ಪೋಗು, ಪೆಂಪಡರ್ದ – ಅಭಿವೃದ್ಧವಾದ, ಉದ್ಯತ್ತಪಂ – ಮಹಾವ್ರತವನ್ನು, ಆಂಪುದು – ಧರಿಸು, ಎಂದು ವ್ಯಾಸಂ ಬಾದರಾಯಣನು, ಬೆಸನಿತ್ತಂ – ಅಪ್ಪಣೆ ಕೊಟ್ಟನು, ಆತಂ – ಆ ವ್ಯಾಸನು, ಪದೆದು – ಪ್ರಸನ್ನನಾಗಿ, ಇತ್ತ – ಕೊಟ್ಟ, ಮಂತ್ರಮನದಂ – ಆ ಶಿವಮಂತ್ರವನ್ನು, ಕೈಕೊಂಡು – ಪ್ರತಿಗಹಿಸಿ, ಮದ್ಭಕ್ತಿ – ನನ್ನಲ್ಲಿ ಭಕ್ತಿಯು, ಸಂಗಡಂ – ಸಹಾಯವು ಆಗುತ್ತಿರಲು, ವೈರಿವರ್ಗ – ಶತ್ರುಸಂಗದ, ಅಂತವ್ಯೆರಿಗಳಾದ, ಕಾಮಾದಿಗಳ, ಬಹಿರ್ವೈರಿಗಳಾದ, ದುರ್ಯೋಧನಾದಿಗಳ, ವಿಜಯ – ಜಯಕ್ಕೆ, ಅವರನ್ನು ಗೆಲ್ಲುವದಕ್ಕೆ ಉಪಾಯ – ಸಾಧನಂಗಳಿಂದ, ಅನ್ವಿತಂ – ಕೂಡಿದವನಾದ, ಫಾಲ್ಗುಣಂ – ಅರ್ಜುನನು, ಆಯೆಡೆಗೆ – ಆಯಾಶ್ರಮಕ್ಕೆ, ಎಯ್ತಂದಂ – ಬಂದಂ || ೧೧೬ ||

ಕಂ|| ರಿಪುಜಯಕಾರಣ ಶರಮಂ ।
ಪ್ರಪತ್ತಿಯಿಂ ಪಡೆವನೆಂದು ಬಯಸುತ್ತೆಮ್ಮಿಂ ||
ತಪಮಿರ್ದಪನಾ ಮುನಿಯಿ ।
ತ್ತುಪದೇಶಂ ಪಡೆದು ನಿಶ್ಚಿತಾರ್ಥಂ ಪಾರ್ಥಂ || ೧೧೭ ||

**ಟೀಕ ||** ಆ ಮುನಿಯಿತ್ತ – ಆ ವ್ಯಾಸನು ಕೊಟ್ಟ, ಉಪದೇಶಂ – ರಹಸ್ಯ ಜ್ಞಾನವನ್ನು, ಪಡೆದು ನಿಶ್ಚಿತಾರ್ಥಂ – ನಿರ್ಣಯಿಸಲ್ಪಟ್ಟ, ಪ್ರಯೋಜನವು, ಪಾರ್ಥಂ – ಕುಂತಿಪುತ್ರನು, ರಿಪುವಿಜಯಕಾರಣಶರವಂ – ಶತ್ರುಗಳನ್ನು ಗೆಲ್ಲುವದಕ್ಕೆ ಸಾಧನವಾದ ಅಸ್ತ್ರವನ್ನು, ಪ್ರಪತ್ತಿಯಿಂ – ಶರಣಾಗತಿಯಿಂದ, ಎಮ್ಮಿಂ – ನಮ್ಮ ದೆಸೆಯಿಂದ, ಪಡೆವೆನೆಂದು – ಪಡೆಯುವೆನೆಂದು, ತಪಮಿರ್ದಪಂ – ತಪವಂಗೈಯ್ಯುತಿರುವನು || ೧೧೭ ||

ಉ|| ಆತನಭೀಷ್ಟಮಂ ಸಲಿಸಿ ಪಾಶುಪತಾಶ್ತ್ರಮನಿತ್ತು ತತ್ತಪೋ ।
ಜಾತ ಮಹೋಷ್ಣಮಂ ತವಿಸಿ ನಿಮ್ಮ ಮನೋರಥಮಿತ್ತು ರಕ್ಷಿಪೆಂ ||
ಮಾತಿದು ನನ್ನಿಯೆಂದಭಯಮಿತ್ತವರಂ ಕಳುಪುತ್ತೆ ಭಕ್ತಸಂ ।
ಪ್ರೀತಿಯನೆಯ್ದಲುಜ್ಜುಗಿಸಿದಂ ಮೃಗಯಾತ್ರೆಯನಿಂದುಸೇಖರಂ ||

**ಟೀಕ ॥** ಆತನ – ಅರ್ಜುನನ, ಅಭೀಷ್ಟವಂ – ವರವನ್ನು, ಸಲಿಸಿ – ಕೊಟ್ಟು, ಪಾಶುಪತಾಸ್ತ್ರವನ್ನು ಇತ್ತು, ತತ್ತಪಃ – ಅವನ ತಪಸ್ಸಿನಿಂದ, ಜಾತ – ಹುಟ್ಟಿದ, ಮಹೋಷ್ಣಮಂ – ಹೆಚ್ಚು ಬಿಸಿಯನ್ನು ತಂಪುಗೊಳಿಸಿ, ನಿಮಮನೋರಥಂ – ಬಯಕೆಯನ್ನು ಇತ್ತು, ರಕ್ಷಿಪೆಂ – ಪಾಲಿಸುವೆನು, ಮಾತಿದು – ಈ ನುಡಿಯು, ನನ್ನಿ ದಿಟವು – ಇಂದು ಅಭಯಮಿತ್ತು – ಇಂದು ಸೇರಿದಂತೆ ಭರವಸೆಕೊಟ್ಟು, ಅವರನ್ನು ಕಳುಪುತ್ತೆ – ಕಳುಹಿಸುತ್ತ, ಇಂದುಶೇಖರಂ – ಚಂದ್ರಮೌಳಿಯು, ಭಕ್ತಸಂಪ್ರೀತಿಯಿಂ – ಅರ್ಜುನನಲ್ಲಿ ವಾತ್ಸಲ್ಯದಿಂದ, ಮೃಗಯಾತ್ರೆಯಂ – ಬೇಟೆಯನ್ನು ಕುರಿತು, ಎಯ್ದಲ್ – ಹೋಗುವದಕ್ಕೆ, ಉಜ್ಜುಗಿಸಿದಂ – ಉದ್ಯೋಗಿಸಿದನು.

**ತಾ ॥** ಶಿವನು ಮುನಿಗಳಿಗೆ ಕೊಟ್ಟ ವಾಗ್ದಾನವನ್ನು ಅರ್ಜುನನ ಮನೋರಥವನ್ನು ಮೃಗಯಾತ್ರೆಯನ್ನು ನೆವ ಮಾಡಿಕೊಂಡನು ॥ ೧೧೮ ॥

**ಗದ್ಯ ॥** ಇದು ಸಮಸ್ತಭುವನೈಕವಲ್ಲಭ ಸುರಾಸುರೇಂದ್ರ ಕರುಣಾವರ ಪರಮಶಿವಲಿಂಗ ತರುಣಪತಂಗ, ಸಂಗತಮಂಗಳ ಹೃದಯಾರವಿಂದಮಂಗಳ ಬಂಧುರ ಸರಸಜನ ಮಾನಿತೋಭಯಕವಿತಾವಿಶಾರದ ಶ್ರೀ ಷಡಕ್ಷರಿದೇವ ವಿರಚಿತ ಕಿರಾತರುದ್ರಾಲೀಲ ಕಥನ ವಿಪುಳಪ್ರಬಂಧದೋಳ್ ದ್ವಿತೀಯಾಶ್ವಾಸಂ ಪರಿಸಮಾಪ್ತಂ ॥ * ॥

ಇಂತೆಂಬಲ್ಲಿಗೆ ಕಾವ್ಯಾರ್ಥಾಶಯಬೋಧಿನಿ ಎಂಬ ವ್ಯಾಖ್ಯಾನದೊಳು ದ್ವಿತೀಯಾಶ್ವಾಸಾರ್ಥ ನಿರೂಪಣಂ ಪೂರ್ಣಮಾದುದು.

ಶಿವಮಸ್ತು.

ಅಂತುಆಶ್ವಾಸವೆರಡಕ್ಕೆ – ಪದ್ಯ ೨೦೩ ವಚನ ೨೨ ಕ್ಕಂ

ಮಂಗಳಮಸ್ತು ಶ್ರೀ ಶ್ರೀ ಶ್ರೀ.

(ಮುಂದುವರಿಯುವುದು)

# ಕಡಕೋಳ ಮಡಿವಾಳಪ್ಪನ ತಾತ್ತ್ವಿಕ ನಿಲುವು

ವೆಂಕಟೇಶ ಕೆ. ಜನಾದ್ರಿ

"ತನ್ನ ತಾನು ತಿಳಿದ ಮೇಲೆ ಇನ್ನೇನಿನ್ನೇನೋ ತನ್ನಂತೆ ಸರ್ವರ ಜೀವ ಮನ್ನಿಸಿ ಮೂಕಾದ ಮೇಲೆ ಇನ್ನೇನಿನ್ನೇನೋ" ಎಂಬ ಕಡಕೋಳ ಮಡಿವಾಳಪ್ಪನವರ ಅನುಭಾವದ ನುಡಿ ನನಗೆ ಬಹಳ ವಿಶಿಷ್ಟವಾಗಿ ತೋರಿತ್ತು. ಅವರ ಕುರಿತು ತಿಳಿದುಕೊಳ್ಳುವ ಅದಮ್ಯ ಬಯಕೆ ಎನಗಿತ್ತು. ಬಿರುಬೇಸಿಗೆಯ ಒಂದು ದಿನ ನನ್ನ ಸಂಸ್ಥೆಯ ಸಹೋದ್ಯೋಗಿ ಗಳೊಂದಿಗೆ ವಾಹನಗಳ ತಪಾಸಣೆಗೆಂದು ಕಲಬುರ್ಗಿ ಜಿಲ್ಲೆಯ ಜೇವರ್ಗಿ, ಜೇರಟಗಿ, ಯಡ್ರಾಮಿ, ಅರಳಗುಂಡಗಿ ಭಾಗದಲ್ಲಿ ಸಂಚರಿಸುತ್ತಾ ಸಾಗಿದ್ದಾಗ ಥಟ್ಟನೇ ನನಗೆ ನೆನಪಾಗಿದ್ದು ಕಡಕೋಳ ಕ್ಷೇತ್ರ.

ಅಲ್ಲಿ ಕಡಕೋಳ ಮಡಿವಾಳಪ್ಪನ ಮಠ ಇರುವುದಾಗಿ ಆತನ ಶರಣತ್ವದ ಕುರಿತು, ತತ್ವ ಪದಗಳ ಕುರಿತು, ಅನುಭಾವಿಕ ನಡೆಯ ಕುರಿತು ನನ್ನ ಸಹೋದ್ಯೋಗಿಗಳಿಗೆ ತಿಳಿಸಿದಾಗ ಅವರೂ ಚಕಿತರಾಗಿ "ಹಾಗಾದರೆ ಆ ಮಠಕ್ಕೆ ತೆರಳಿ ಮುತ್ಯಾನ ದರ್ಶನ ಮಾಡಿಕೊಂಡೇ ಮುಂದೆ ಹೋಗೋಣ"ವೆಂದು ತೀರ್ಮಾನಿಸಿದ್ದರಿಂದ ಅಂದು ಅಪರಾಹ್ನ ವಾಹನದಲ್ಲಿ ತೆರಳಿ ಮಠದ ಆವರಣದಲ್ಲಿ ಇಳಿಯುವ ಮುನ್ನ ನನಗೋ ಮಡಿವಾಳಪ್ಪ ನಡೆದಾಡಿದ ಆ ನೆಲಕ್ಕೆ ಕಾಲಿಡುವ ಮನಸ್ಸಾಗದೆ ಮೊದಲು ವಾಹನದಿಂದ ಕೆಳಗೆ ಕೈ ಮುಂದೆ ಮಾಡಿ, ಆ ನೆಲದ ಮಣ್ಣನ್ನು ಕೈಯಲ್ಲಿ ಹಿಡಿದು ಹಣೆಗಿಟ್ಟುಕೊಂಡು ಆಮೇಲೆ ಮಠದ ಆವರಣದ ನೆಲದ ಮೇಲೆ ಕಾಲಿರಿಸಿದೆ.

ಮೂಲತಃ ಜ್ಞಾನಿಯಾಗಿದ್ದ ಮಡಿವಾಳಪ್ಪನವರ ಮೇಲೆ ಹನ್ನೆರಡನೇ ಶತಮಾನದ ಶರಣರ ವಿಚಾರಧಾರೆಗಳು ಮತ್ತವರ ಪ್ರಭಾವ ಹೆಚ್ಚು ಪರಿಣಾಮ ಬೀರಿ ಶ್ರೇಷ್ಠ ಅನುಭಾವಿಯಾಗಿದ್ದವರು. ಆ ಪರಶಿವನೇ ಜೀವಾತ್ಮನಾಗಿ ನಮ್ಮೊಳಗಿದ್ದು, ನಮಗೆಲ್ಲಾ ಆತನೇ ಎಲ್ಲವೂ ಆಗಿ, ಆತನೇ ನನ್ನ ನಡೆಯನ್ನು ಕಂಡು ಅಹುದಹುದೆಂದಾದ ಮೇಲೆ ನನಗಿನ್ನೇನು ನನಗಿನ್ನೇನು? ಬೇರಿನ್ನೇನಿದೆ? ಎಂಬ ಆನುಭಾವಿಕ ನುಡಿಯನ್ನು ತಮ್ಮದಾಗಿಸಿಕೊಂಡಿದ್ದ ಮಡಿವಾಳಪ್ಪ ನನಗೆ ಒಬ್ಬ ಶರಣನಾಗಿ, ಸಂತನಾಗಿ, ಪ್ರಗತಿಪರನಾಗಿ, ಜಂಗಮನಾಗಿ, ಮಹಾಮಾನವತಾವಾದಿಯಾಗಿ, ಸಕಲ ಜೀವಿಗಳಿಗೂ ಲೇಸನೇ ಬಯಸುವ ಶರಣಜ್ಜನಾಗಿ ಪೂಜನೀಯರು.

ನನ್ನ ಅದೃಷ್ಟವನ್ನು, ಭವಿಷ್ಯವನ್ನು, ಬದುಕನ್ನು ಬದುಕಿನ ಪಥವನ್ನು ಹೊರಗೆ ಅರಸುತ್ತಿದ್ದ ನನಗೆ ಮಡಿವಾಳಪ್ಪನವರ ನುಡಿಗಳು ನನ್ನೊಳಗಿನ ಅರಿವಿನ ಕಣ್ಣುಗಳನ್ನು ತೆರೆಸಿದ್ದವು. ನನ್ನ ನಾ ತಿಳಿದ ಮೇಲೆ ಇನ್ನೇನಿದೆ? ಈ ಜಗವನ್ನರಿಯಬೇಕಾದರೆ ಅದರ ಸ್ವರೂಪವಾದ ನನ್ನನ್ನು, ನನ್ನೊಳಗನ್ನು, ನನ್ನೊಳಗಿರುವ ಆತನನ್ನು ಮೊದಲು ನಾನು ಅರಿಯಬೇಕೆಂಬ ಅದ್ಭುತವಾದ ಅನುಭಾವಿಕ ನುಡಿ ನನಗಿಷ್ಟವಾಗಿತ್ತು. ಅದೇ ಪಥದಲ್ಲಿ ನನ್ನ ಬದುಕನ್ನು ಕಂಡುಕೊಳ್ಳುವತ್ತ ನಾನು ಸಾಗಿರುವಂಥ ದಿನಗಳವು. ಅವರ ತತ್ವಗಳನ್ನು ಓದಿ ಒಂದಿಷ್ಟು ತಿಳಿದುಕೊಂಡಿದ್ದ ನನಗೆ ಅಂದು ಅವರ ಸ್ಥಳಕ್ಕೆ ಬಂದಾಗ ಆದ ಅನುಭೂತಿಯೇ ಮಹದಾನಂದವಾಗಿತ್ತು.

ಕಡಕೋಳ ಮಡಿವಾಳಪ್ಪ ಕಲ್ಬುರ್ಗಿ ಜಿಲ್ಲೆಯ ಅಫಜಲಪೂರ ತಾಲ್ಲೂಕಿನ ಬಿದನೂರಿನಲ್ಲಿ ಮಠಾಧೀಶ ವಿರುಪಾಕ್ಷಯ್ಯ ಮತ್ತು ಗಂಗಮ್ಮನವರ ಮಗನಾಗಿ ಕ್ರಿ.ಶ. 1780ರಲ್ಲಿ ಜನಿಸಿದರು. (ಕೆಲವರು ಇವರ ತಂದೆ ದುಂಡಪ್ಪ ಬಗಲಿ ಎಂತಲೂ ಗುರುತಿಸಿದ್ದಾರೆ). ಶರಣರ, ಮಹಾತ್ಮರ ಹುಟ್ಟು, ಕಾಲ, ಸ್ಥಳಗಳ ಕುರಿತಾಗಿಯೇ ಚಿಂತಿಸದೆ ಅವರ ಬದುಕಿನ ನೆಲೆ ಮತ್ತು ತತ್ವಗಳನ್ನು ಅರಿತುಕೊಳ್ಳುವುದು ಮುಖ್ಯ ಎಂಬುದು ನನ್ನ ನಿಲುವು. ಬಾಲ್ಯದಲ್ಲಿ ಚಿಣಮಗೇರಿ ಮಹಾಂತಮಠದ ಪರಿಸರ ಇವರ ಮೇಲೆ ಪರಿಣಾಮ ಬೀರಿತ್ತು. ಮಠದ ಮೂಲಪುರುಷ ಮಹಾಂತೇಶ್ವರರ ಮೇಲೆ ಶ್ರದ್ಧಾಭಕ್ತಿಯನ್ನಿರಿಸಿ ಕೊಂಡಿದ್ದರು. ಮಠದ ಹತ್ತನೇ ತಲೆಮಾರಿನ ಶ್ರೀ ಗುರು ಬಸವದೇವರಿಂದ ಇವರಿಗೆ ಎಂಟನೇ ವಯಸ್ಸಿನಲ್ಲಿ ಲಿಂಗದೀಕ್ಷೆಯೂ ಆಗಿತ್ತು ಇವರಲ್ಲಿಯೇ ತಮ್ಮ ತಂದೆ, ತಾಯಿ, ಬಂಧು, ಬಳಗವನ್ನು ಕಂಡುಕೊಂಡಿದ್ದರು ಮಡಿವಾಳಪ್ಪ.

ಇವರ ಕುಲದ ಕಾರಣಕ್ಕಾಗಿ ಅರಳಗುಂಡಿಗಿಯ ಬಸಯ್ಯನೆಂಬಾತ ಇವರಿಗೆ ಅಯ್ಯಾಚಾರ/ಲಿಂಗದೀಕ್ಷೆ ಕೊಡಬಾರದೆಂದು ವಿರೋಧಿಸುತ್ತಾನೆ. ಆದರೆ ಕಲ್ಬುರ್ಗಿಯ ಶರಣಬಸವೇಶ್ವರರು ಇವರಿಗೆ ಲಿಂಗದೀಕ್ಷೆ ಕೊಡಿಸಲೇಬೇಕೆಂಬ ಸದುದ್ದೇಶದಿಂದ ತಮ್ಮ ಗುರುಗಳಾಗಿದ್ದ ಕಲಕೇರಿಯ ಮರುಳಾರಾಧ್ಯರಿಂದ ಮಡಿವಾಳಪ್ಪನಿಗೆ ಅಯ್ಯಾಚಾರ/ಲಿಂಗದೀಕ್ಷೆ ಮಾಡಿಸಿದರೆಂಬುದು, ಸ್ವತಃ ಶರಣ ಬಸವೇಶ್ವರರೇ ಲಿಂಗದೀಕ್ಷೆ ಮಾಡಿದರೆಂಬುದು, ಓರ್ವ ಜಂಗಮ ಸ್ವರೂಪಿಯಿಂದ ಶರಣಬಸವೇಶ್ವರರು ಲಿಂಗದೀಕ್ಷೆ ಮಾಡಿಸಿದರೆಂಬ ಐತಿಹ್ಯವೂ ಇದೆ. ಆದರೆ ಈ ಎಲ್ಲಕ್ಕಿಂತ ಮುಂಚೆಯೇ ಬಹುಶಃ ಗರ್ಭಾವಸ್ಥೆಯಲ್ಲಿಯೇ ಚಿಣಮಗೇರಿ ಮಹಾಂತಮಠದ ಮೂಲ ಪುರುಷರಿಂದ ಲಿಂಗದೀಕ್ಷೆಯಾಗಿರುವ ಕಾರಣ ಆರಂಭದಿಂದಲೇ ಅನುಭಾವಿಕ ನೆಲೆಯಲ್ಲಿ ಇವರ ಚಿಂತನೆಗಳಿದ್ದವೆಂಬುದನ್ನು ಗಮನಿಸಬೇಕಿದೆ.

ಮುಂದೆ ಕಲ್ಬುರ್ಗಿ ಶರಣಬಸಪ್ಪ ಮತ್ತು ಮಡಿವಾಳಪ್ಪನವರ ಮಧ್ಯೆ ಅನ್ಯೋನ್ಯ ಸಂಬಂಧದ ಕಾರಣ ದಿನನಿತ್ಯ ಇಬ್ಬರೂ ಸೇರಿ ಅನ್ನದಾಸೋಹ ಮತ್ತು ಜ್ಞಾನದಾಸೋಹ

ನಡೆಸುತ್ತಿದ್ದರು. ಶರಣಬಸಪ್ಪ ನೇರವಾಗಿ ಸಾಹಿತ್ಯರಚನೆ ಮಾಡದಿದ್ದರೂ ಪರೋಕ್ಷವಾಗಿ ಮಡಿವಾಳಪ್ಪನವರ ಬರವಣಿಗೆಗೆ ಗಟ್ಟಿ ದ್ರವ್ಯ ಒದಗಿಸಿ, ತಮ್ಮ ಅರ್ಥಪೂರ್ಣ ಮೌನಕ್ಕೆ ಮಡಿವಾಳಪ್ಪನ ಅನುಭಾವಪೂರ್ಣ ತಾತ್ವಿಕ ಸಾಹಿತ್ಯದ ಪ್ರಖರತೆಯನ್ನು ಬೆರೆಸಿ ಅಂದಿನ ಜನ ಸಾಮಾನ್ಯರ ಮನದ ಮೈಲಿಗೆ ಕಳೆಯುವಲ್ಲಿ ಸಮರ್ಥವಾಗಿದ್ದವು. ಇಂದಿಗೂ ಮಡಿವಾಳಪ್ಪನವರ ವಚನಗಳು, ತತ್ವಗಳು, ಜನಾನುರಾಗಿಯಾಗಿ ಜನಪದವಾಗಿ ಜಂಗಮದ ಮಧ್ಯ ಜೀವಂತವಾಗಿಯೇ ಉಳಿದಿವೆ.

ಅಂದಿನ ಜಾತಿ ವ್ಯವಸ್ಥೆ ಮತ್ತು ತಮ್ಮದೇ ಬದುಕಿನಲ್ಲಿ ನಡೆದ ಲಿಂಗದೀಕ್ಷೆಯ ಘಟನೆಯಿಂದ ವ್ಯವಸ್ಥೆಯ ಕುರಿತು ನೊಂದುಕೊಂಡಿದ್ದ ಮಡಿವಾಳಪ್ಪ ತಮ್ಮೊಳಗಿನ ಅರಿವೆಂಬ ಗುರುವಿನಿಂದಲೇ ದೀಕ್ಷೆ ಪಡೆದುಕೊಂಡಿರಬಹುದೆಂದು ನನ್ನ ಅನಿಸಿಕೆ. ಅದಕ್ಕೆ ಅವರ ಕವನದ ಸಾಲಿನಲ್ಲಿ "ತನ್ನ ತಾನರಿತ ಮೇಲೆ ಇನ್ನೇನು ಇನ್ನೇನು?" ಎಂಬ ಸಾಲನ್ನು ಗಮನಿಸುತ್ತೇವೆ. ಓರ್ವ ಗುರು ಮತ್ತು ತನ್ನೊಳಗಿನ ಅರಿವೆಂಬ ಗುರುವಿನಿಂದ ಮಡಿವಾಳಪ್ಪನವರಿಗೆ ಅರಿವಿನೊಂದಿಗಿನ ಜ್ಞಾನದ ಅನುಸಂಧಾನ ಆಗಿರುವುದೆಂಬುದು ನನ್ನ ಮನದ ಅಂಬೋಣ. ಅಂದಿನ ಅವ್ಯವಸ್ಥೆಯಲ್ಲಿಯ ಜಾತಿ, ವರ್ಗ ಸಂಘರ್ಷದ ದಿನಗಳಲ್ಲಿ ಕೆಲ ಉನ್ನತ ವರ್ಗದವರು ಮಡಿವಾಳಪ್ಪನವರಿಗೆ ಕಿರಿಕಿರಿ ಮಾಡಿದರೆ ದಲಿತರು ಇವರನ್ನು ತಮ್ಮವರೆಂದು ಪರಿಗಣಿಸಿ ತಮ್ಮ ತೆಕ್ಕೆಯಲ್ಲಿ ಅಪ್ಪಿಕೊಂಡು ಪ್ರೀತಿಯಿಂದ ಕಡಕೋಳದಲ್ಲಿ ವಾಸಿಸಲು ಅನುಕೂಲ ಮಾಡಿಕೊಟ್ಟಿದ್ದರೆಂದು ತೋರುತ್ತದೆ. ಅದಕ್ಕೆ ಅಲ್ಲಿಯ ಅಂದಿನ ಪರಿಸರ ಮತ್ತು ಮಠ ಇಂದಿಗೂ ತನ್ನ ಪ್ರಭಾವಳಿಯಲ್ಲಿ ಭಕ್ತರ ಭಕ್ತಿಯನ್ನು ಜಂಗಮದಲ್ಲಿ ತೊಳಗಿ ಬೆಳಗುತ್ತಲಿದೆ.

ಬದುಕಿನಲ್ಲಿ ಎಂಥದೇ ಸವಾಲುಗಳು ಎದುರಾದರೂ ದಿಟ್ಟತನದಿಂದ ಸ್ವೀಕರಿಸುತ್ತಿದ್ದ ಮಡಿವಾಳಪ್ಪನವರು ಸದಾ ಮಠದ ಪರಿಸರದಲ್ಲಿ ಯಾವುದಾದರೊಂದು ಕಾಯಕದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದವರು. ಶ್ರಮವಹಿಸಿ ಕಾಯಕ ಮಾಡಿದ ಮೇಲೆಯೇ ತಾವು ಪ್ರಸಾದ ಮಾಡುತ್ತಿದ್ದರು. ಹೀಗೆ ಒಮ್ಮೆ ಮಠದ ಹಸುಗಳಿಗೆ ಮೇವು ತರಲು ಹೋದಾಗ ಕೆಲವು ಕಿಡಿಗೇಡಿಗಳು ಇವರಿಗೆ ತೊಂದರೆ ಕೊಡುವ ಉದ್ದೇಶದಿಂದ ಇವರಿಗೆ ಕಾಣದಂತೆ ಒಂದು ದೊಡ್ಡ ಕಲ್ಲಿನ ಸುತ್ತ ಮೇವನ್ನು ಪೇರಿಸಿ ಗಂಟು ಕಟ್ಟಿ ಹೊರೆಯನ್ನು ಸಿದ್ಧಪಡಿಸಿ, "ಮುತ್ಯಾ ಮೇವಿನ ಹೊರೆಯನ್ನು ಕಟ್ಟಿದ್ದೀವಿ, ಎತ್ತಿಕೊಂಡು ಮಠಕ್ಕೆ ಹೋಗು" ಎಂದು ಹೇಳಿದ ಜನರ ಮಾತನ್ನು ಅನುಸರಿಸಿ ಆ ಭಾರವನ್ನು ಹೊತ್ತು ಕಡಕೋಳ ಮಠಕ್ಕೆ ತಂದು ನೆಲಕ್ಕೆ ಹಾಕಿದಾಗ ಅದರಲ್ಲಿದ್ದ ಕಲ್ಲನ್ನು ನೋಡಿ ಒಂದಿಷ್ಟೂ ಬೇಸರಿಸಿಕೊಳ್ಳದೇ 'ಪರವಾಗಿಲ್ಲ ಈ ಕಲ್ಲು ಮಠದ ಮೆಟ್ಟಿಲಿನ ಬಳಕೆಗೆ ಆಗುತ್ತದೆ' ಎಂದರಂತೆ. ಈಗಲೂ ಆ ಕಲ್ಲನ್ನು ಮಠದ ಮುಂದಿರುವ ಮೆಟ್ಟಿಲುಗಳ ಹತ್ತಿರ ಇಟ್ಟಿರುವುದನ್ನು ಕಾಣಬಹುದು. ಕಷ್ಟವನ್ನು ಸಹಿಸಿಕೊಂಡು ಪೂಜೆಯ ರೀತಿಯಲ್ಲಿ ತಮ್ಮ ಕಾಯಕ ಮಾಡಿ ಅದರಿಂದ

ಬಂದ ಯಾವುದೇ ರೀತಿಯ ಫಲವನ್ನು ಸಕಾರಾತ್ಮಕವಾಗಿ ಪ್ರಸಾದವೆಂದು ಒಪ್ಪಿಕೊಳ್ಳಬೇಕೆಂಬ ಹನ್ನೆರಡನೇ ಶತಮಾನದ ಶರಣರ ತತ್ವವಿಲ್ಲಿದೆ.

ಒಮ್ಮೆ ಚಿಂಚೋಳಿ ತಾಲ್ಲೂಕಿನ ಸುಲೇಗಾಂವಕ್ಕೆ ಬಂದಿದ್ದ ಒಬ್ಬ ಮಾಂತ್ರಿಕನ ಬಳಿ ಒಂದು ಮಾಟದ ಮಂಚವಿತ್ತಂತೆ, ಈ ಮಂಚದ ಮೇಲೆ ತನ್ನ ಹೊರತು ಬೇರೆ ಯಾರೇ ಮಲಗಿದರೂ ಒಂದೇ ದಿನದಲ್ಲಿ ಅವರು ಸಾಯುತ್ತಾರೆ ಎಂದು ಆ ಮಾಂತ್ರಿಕ ಹೇಳಿದಾಗ, ಅಲ್ಲಿದ್ದ ಮಡಿವಾಳಪ್ಪ ಬಾಬಾನ ಈ ಮಾತನ್ನು ಸವಾಲಾಗಿ ಸ್ವೀಕರಿಸಿ, ಆ ಇಡೀ ರಾತ್ರಿ ಆ ಮಾಟದ ಮಂಚದ ಮೇಲೆ ಮಲಗುತ್ತಾರೆ. ಬೆಳಗ್ಗೆ ಜೀವಂತವಾಗಿಯೇ ಉಳಿದು ಆ ಮಾಂತ್ರಿಕನ ಸೊಕ್ಕಿಗೆ ವಿನಯದಿಂದಲೇ ಉತ್ತರಿಸಿದಾಗ ಅವಮಾನಿತನಾದ ಆ ಬಾಬಾ ತನ್ನ ಆ ಮಾಟದ ಮಂಚವನ್ನು ಮಡಿವಾಳಪ್ಪನಿಗೆ ಕೊಟ್ಟಿದ್ದರಂತೆ. ಈಗಲೂ ಈ ಮಂಚ ಮಠದ ಆವರಣದಲ್ಲಿದೆ. ಈಗಲೂ ಆ ಬಾಬಾ ನಂಬಿಸಿದ್ದ ಮೌಢ್ಯತೆಯ ಕಾರಣಕ್ಕೋ ಅಥವಾ ಮಡಿವಾಳಪ್ಪನವರ ಮೇಲಿನ ಭಕ್ತಿಯ ಗೌರವದ ಕಾರಣಕ್ಕೋ ಆ ಮಂಚದ ಮೇಲೆ ಯಾರೂ ಕುಳಿತುಕೊಳ್ಳುವುದಿಲ್ಲ. ಈ ಇಡೀ ಘಟನೆಯನ್ನು ವೈಚಾರಿಕವಾಗಿ ಆನುಭಾವಿಕ ನೆಲೆಯಲ್ಲಿ ಯೋಚಿಸಿದಾಗ ಯಾವುದೇ ಸಾಧನೆಗೆ ಮೌಢ್ಯದ ಭಯಕ್ಕಿಂತ ಆತ್ಮವಿಶ್ವಾಸದ ಪ್ರಯತ್ನ ಮುಖ್ಯವೆಂಬ ತತ್ವವಿರುವುದನ್ನು ಗಮನಿಸಬೇಕಿದೆ. ಭಯದ ಬದಲಿಗೆ ದಯೆ ಇದ್ದಲ್ಲಿ, ಮೌಢ್ಯದ ಬದಲಿಗೆ ಪ್ರಾಮಾಣಿಕತೆಯಿದ್ದಲ್ಲಿ ಕೊರಡೂ ಕೊನರುವುದೆಂಬ ಭರವಸೆ ಇರಬೇಕೆಂಬುದು ಶರಣರ ನಿಲುವಾಗಿತ್ತು. ಈ ನಿಲುವನ್ನು ಮಡಿವಾಳಪ್ಪ ಸಮರ್ಪಕವಾಗಿ ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡಿದ್ದರು.

ಒಮ್ಮೆ ಬಿದನೂರಿನ ಲಕ್ಷ್ಮಿ ಎಂಬಾಕೆ ಮಡಿವಾಳಪ್ಪನವರಿಗೆ ತನ್ನನ್ನು ಮದುವೆಯಾಗಲು ಒತ್ತಾಯಿಸುತ್ತಾಳೆ. ಮಡಿವಾಳಪ್ಪ ಒಪ್ಪದೇ "ನಾವ್ಹ್ಯಾಂಗ ಮಾಡಬೇಕರೋ" ಎಂದು ಕಡಕೋಳಕ್ಕೆ ಹೊರಟುಹೋದಾಗ ಈಕೆ ಅಲ್ಲಿಗೂ ಬಂದು ಇವರನ್ನು ಮತ್ತೆ ಕಾಡಿ ಬೇಡಿಕೊಂಡು ನೀವು ಮದುವೆಯಾಗದಿದ್ದರೆ "ನಾನು ಆತ್ಮಹತ್ಯೆ ಮಾಡಿಕೊಳ್ಳುವೆ" ಎಂದು ಹೇಳುತ್ತ ಬಾವಿಯಲ್ಲಿ ಹಾರಿ ಪ್ರಾಣ ಕಳೆದುಕೊಂಡು ಮುಂದಿನ ದಿನಗಳಲ್ಲಿ ದೆವ್ವ ಆಗಿ ಬರುತ್ತಾಳಂತೆ. ಹಾಗೆ ದೆವ್ವ ಆಗಿ ಬಂದಾಗ ಆ ದೆವ್ವದಿಂದಲೇ ಅವರ ಮಠದ ಕೆಲಸ ಮಾಡಿಸುತ್ತಿದ್ದರೆಂಬ ವದಂತಿ ಇದೆ. ಈಗಲೂ ಕಡಕೋಳ ಮಠದ ಒಂದು ಕೋಣೆಗೆ "ಲಕ್ಷ್ಮಿ ಕೋಣೆ" ಎನ್ನುತ್ತಾರೆ. ಈ ಘಟನೆಯ ಸತ್ಯಾಸತ್ಯತೆಯನ್ನು ಯೋಚಿಸಬಾರದು. ಇದು ಕೇವಲ ವದಂತಿಯೇ ಆಗಿರಬಹುದು. ಆದರೆ ಅಲ್ಲಮನಿಗೆ ಹೇಗೆ ಮಾಯೆ ಕಾಡಿಸಿದ್ದಳೋ ಹಾಗೆಯೇ ಈ ಪ್ರಕರಣವೂ ಇರಬಹುದೆಂದು ನನಗನಿಸುತ್ತದೆ. ಅದಕ್ಕೆ ಕೆಲವರು ಅವರನ್ನು "ಮಾಯೆಯ ಗಂಡ ಮಡಿವಾಳ" ಎಂತಲೂ ಕರೆಯುತ್ತಾರೆ.

ಈ ಎಲ್ಲ ಪ್ರಗತಿಪರ ಕಾರಣಗಳಿಗಾಗಿ ಇಂದಿಗೂ ಕಡಕೋಳ ಮಠ ದಲಿತ ದುರ್ಬಲರಿಗೆ ತಂಗುದಾಣವಾಗಿ, ಆಧ್ಯಾತ್ಮಿಕ ಗರಡಿಮನೆಯಾಗಿ ಜ್ಞಾನಸಾಧಕರಿಗೆ ಅನುಭವ

ಮಂಟಪವಾಗಿ ತಲೆಯೆತ್ತಿ ನಿಂತಿದೆ. ಮಡಿವಾಳಪ್ಪನವರು ಆತ್ಮ ಪರಮಾತ್ಮ, ಸೃಷ್ಟಿಕರ್ತ ಎಂಬ ನಿಗೂಢತೆಯನ್ನು ಅರಿತುಕೊಂಡವರಷ್ಟೇ ಅಲ್ಲ, ಸ್ವತಃ ಅನುಭಾವದ ಉನ್ನತಿಗೇರಿ ಹಲವಾರು ಸಿದ್ಧಿಗಳನ್ನು ಕೈವಶ ಮಾಡಿಕೊಂಡಿದ್ದವರು. ಹುಟ್ಟು ಹೋರಾಟಗಾರರಾಗಿ, ಅಪಾರ ಜೀವನಪ್ರೇಮಿಯಾಗಿ, ಮೌಢ್ಯತೆವನ್ನು ಖಂಡಿಸುವ ಛಲಗಾರರಾಗಿ, ಕಾಯಕ ದಾಸೋಹ ಪ್ರಸಾದದ ಮಹತ್ವವನ್ನು ಅರಿತವರಾಗಿ, ಸದಾಕಾಲ ಸತತ ಅನುಭಾವದ ಅನುಸಂಧಾನದಿಂದ ಶಿವಯೋಗಿಯೆನಿಸಿಕೊಂಡು ಜಗದ ಒಳಿತನ್ನು, ಸಕಲ ಜೀವಿಗಳ ಲೇಸನ್ನು ಸ್ಥಾಪಿಸುವ ಉದ್ದೇಶವನ್ನಿಟ್ಟುಕೊಂಡು ತಮ್ಮ ಕಾಯವನ್ನು ಜಂಗಮಕ್ಕಾಗಿ ಸವೆಸಿದವರು. ಕರ್ನಾಟಕದ ಹಲವಾರು ಭಾಗದಲ್ಲಿ ಸಂಚರಿಸಿ ತಮ್ಮ ಬದುಕನ್ನು ಮತ್ತು ವಿಚಾರಗಳನ್ನು ಜಂಗಮಗೊಳಿಸಿದ್ದರೂ ಸಹ ಕೊನೆಗೆ ಜೇವರ್ಗಿ ತಾಲ್ಲೂಕಿನ ಕಡಕೋಳದಲ್ಲಿ ತಮ್ಮ ಕಾರ್ಯಕ್ಷೇತ್ರವನ್ನು ನೆಲೆಗೊಳಿಸಿಕೊಂಡಿದ್ದರು.

ಒಂದೆಡೆ ಶರಣ ಸಾಹಿತ್ಯದ ಒಲವು, ಮತ್ತೊಂದೆಡೆ ಶಂಕರಾಚಾರ್ಯ ನಿಜಗುಣಾದಿಗಳ ಅದ್ವೈತ ಸಿದ್ಧಾಂತದ ತತ್ವ, ಮಗದೊಂದೆಡೆ ಸಿದ್ಧಿಗಳ ಕುತೂಹಲಗಳೆಂಬ ಬಹುಮುಖ ಪಾಂಡಿತ್ಯದ ಫಲಿತವಾಗಿ ತನ್ನ ತಾನರಿಯುವ ಶ್ರೇಷ್ಠ ಸಾಧನೆಯ ಮಾರ್ಗವನ್ನು ಕಡಕೋಳ ಮಡಿವಾಳಪ್ಪನವರು ಕ್ರಮಿಸುತ್ತಾರೆ. ಇಷ್ಟಲಿಂಗದೊಂದಿಗೆ ಅನುಸಂಧಾನ ಮಾಡಿಕೊಳ್ಳುವ ಮೂಲಕ ತಮ್ಮದೇ ಕಾಯದಿಂದ ಕಾಯಕವೆಂಬ ಪೂಜೆಯನ್ನು ಮಾಡಿಕೊಳ್ಳುತ್ತ ಶಿವಯೋಗಸಾಧನೆಯಿಂದ 'ಅನುಭಾವ' ಎಂಬ ಪ್ರಸಾದವನ್ನು ಕಂಡುಕೊಳ್ಳುತ್ತಾರೆ. ಬಿದನೂರು, ಚಿಣಮಗೇರಿಯಲ್ಲಿ ಇವರಿಗೆ ನಿಜದ ಅಂತರಂಗ, ಬಹಿರಂಗಗಳ ಸಂಘರ್ಷ ಆರಂಭವಾಗಿ ಒಂದೆಡೆ ತಮ್ಮ ಹುಟ್ಟಿನ ಸಮಸ್ಯೆ, ಮತ್ತೊಂದೆಡೆ ಅಂತರಾತ್ಮದ ತಾಕಲಾಟ, ಸಾಮಾಜಿಕ ತಲ್ಲಣಗಳು, ಹಲವು ಬಗೆಯ ವಿಷಮತೆಗಳು, ಹಲವು ವೈರುಧ್ಯಗಳೆಲ್ಲವೂ ಸೇರಿಕೊಂಡು ಮತ್ತಷ್ಟು ಗಟ್ಟಿಗೊಳ್ಳುತ್ತಲೇ ಹೋಗುತ್ತಾರೆ. ಇಷ್ಟೆಲ್ಲ ಆದ ಮೇಲೆ ನನಗೆ "ಆವ ಭಯವು ಇನ್ನೇನು" ಎಂದು ತಮ್ಮೊಳಗೇ ಗಟ್ಟಿಯಾಗಿ ಕಲ್ಯಾಣವನ್ನು ಸೃಜಿಸಿಕೊಳ್ಳುತ್ತಾರೆ. ತಮ್ಮ ಇಡೀ ಆಯುಷ್ಯವನ್ನು ಪೂರ್ತಿಯಾಗಿ ಅಧ್ಯಾತ್ಮ ಮತ್ತು ಸಾಧನೆ ಲೋಕೋದ್ಧಾರಕ್ಕಾಗಿಯೇ ಮೀಸಲಿರಿಸಿದ್ದ ಕಾರಣ ಉಳಿದ ಯಾವುದೇ ತೊಂದರೆಗಳು ಇವರನ್ನು ಕಾಡುತ್ತಿರಲಿಲ್ಲ. ಅಪ್ಪಟ ಜಂಗಮಿಯಾಗಿದ್ದ ಮಡಿವಾಳಪ್ಪ ಒಂದೇ ಸ್ಥಳದಲ್ಲಿ ನಿಲ್ಲದ ಶ್ರೀಶೈಲ, ಕದಳಿ ಮುಂತಾದ ತಾಣಗಳತ್ತಲೂ ಪಯಣಿಸುತ್ತಾರೆ. ತಮ್ಮ ನುಡಿಗಳನ್ನು ನಡೆಯ ಮೂಲಕ ಜಂಗಮಗೊಳಿಸಿಕೊಳ್ಳುತ್ತಾರೆ.

ಜೀವಿತದಲ್ಲಿ ಘಟನೆಗಳನ್ನೇ ಸಾಧನೆಯ ಮೆಟ್ಟಿಲುಗಳನ್ನಾಗಿಸಿಕೊಂಡಿದ್ದ ಮಡಿವಾಳಪ್ಪ ಒಂದೊಮ್ಮೆ ಹೊಲವೊಂದರಲ್ಲಿ ಕಬ್ಬು ಚೆನ್ನಾಗಿ ಬೆಳೆದಿರುವುದನ್ನು ನೋಡಿ, ಕೂಡಲೇ ಕಬ್ಬನ್ನು ತಿನ್ನಲು ಆರಂಭಿಸುತ್ತಾರೆ. ತಕ್ಷಣ ಹೊಲದ ಯಜಮಾನ ಬಂದು ಈತ ಕಳ್ಳ ಇರಬಹುದೆಂದು ಚೆನ್ನಾಗಿ ಥಳಿಸುತ್ತಾರೆ. ಆಗ ಅವರು, "ಹೊಡಿ ಹೊಡಿ, ಇನ್ನೂ ಹೊಡಿ.

ಈ ನಾಚಿಕೆಗೇಡಿ ಮನಸ್ಸಿಗೆ ಎಷ್ಟು ಹೇಳಿದರೂ ಬುದ್ಧಿ ಇಲ್ಲ. ಮಂದಿ ಹೊಲದಾಗ ಕಬ್ಬ ತಿನ್ನಬೇಕಂತದ, ಹೊಡಿ" ಎನ್ನುತ್ತಾರಂತೆ. ತಮ್ಮ ತಪ್ಪಿನ ಅರಿವಾಗಿ, ಶ್ರಮವಹಿಸಿ ಮಾಡುವ ಕಾಯಕದಿಂದಲ್ಲದೆ ಬಂದದ್ದು ಎಂದಿಗೂ ಪ್ರಸಾದವಾಗದೆಂಬ ಶರಣರ ತತ್ವವಿದೆ. ಹಾಗೆ ಬಂದದ್ದನ್ನು ಪಡೆದರೆ ಶಿಕ್ಷೆಗೆ ಗುರಿಯಾಗಲೇಬೇಕೆಂಬ ಸೂತ್ರವಿದೆ.

ಒಮ್ಮೆ ಯಾರದೋ ಮನೆಗೆ ಊಟಕ್ಕೆ ಹೋದಾಗ ಬದನೆಕಾಯಿ ಪಲ್ಲೆ ತುಂಬ ರುಚಿಯಾಗಿದ್ದ ಕಾರಣಕ್ಕೆ ಮತ್ತೆ ಮತ್ತೆ ಬೇಕೆಂದು ಬೇಡುತ್ತಾರೆ. ಕೊನೆಗೆ ಆ ಮನೆಯ ಯಜಮಾನಿ, "ಮುತ್ಯಾ ಪಲ್ಲೆ ಎಲ್ಲ ಖಾಲಿಯಾಗಿದೆ, ದಯಮಾಡಿ ಕ್ಷಮಿಸು" ಎಂದು ಕೈಮುಗಿದು, ಇವರ ಕಾಲಿಗೆ ಬಿದ್ದು ಅಳತೊಡಗುತ್ತಾಳೆ. ತಮ್ಮ ಬಾಯಿಚಪಲದ ಕುರಿತು ಮಡಿವಾಳಪ್ಪಗೆ ಬೇಸರವಾಗಿ ಮಠಕ್ಕೆ ಬಂದು ತಾವೇ ಒಂದು ಭಾವಿ ತೋಡಿ, ಬೀಳು ಭೂಮಿಯನ್ನು ಸಾಗುವಳಿ ಮಾಡಿ, ಬದನೆಗಿಡಗಳನ್ನು ಬೆಳೆದು, ಆ ಗಿಡದಲ್ಲಿ ಬೆಳೆದಿರುವ ಬದನೆಕಾಯಿಗಳಿಂದಲೇ ಪಲ್ಲೆ ಮಾಡಿ ತಿನ್ನುತ್ತಾ, "ಇನ್ನು ತಿನ್ನು, ಇನ್ನು ತಿನ್ನು, ಇನ್ನೊಮ್ಮೆ ಯಾರ ಮನೆಯಲ್ಲಿಯೂ ಹೀಗೆ ಬೇಡಬಾರದು" ಎನ್ನುತ್ತಾರಂತೆ.

ಈ ಎರಡೂ ಘಟನೆಗಳಿಗೆ ಇಂಬಾಗುವ ಹಾಗೆ ಒಂದು ಪದ್ಯ ಬರೆಯುತ್ತಾರೆ. ಆ ಪದ್ಯದ ಸಾಲು ಹೀಗಿದೆ, "ಮಾಡಿ ಉಣ್ಣೋ ಬೇಕಾದಷ್ಟು, ಬೇಡಿ ಉಣ್ಣೋ ನೀಡಿದಷ್ಟು, ಕೇಡಿಲ್ಲದರೊಳು ಎಳ್ಳಷ್ಟು, ನಾ ನೋಡಿ ಹೇಳಿದೆನು ಬಲ್ಲಷ್ಟು" ಎಂದು ತಾವು ಅನುಭವಿಸಿ ಬರೆದ ಈ ರಚನೆಯ ಮೂಲಕ ಮನುಷ್ಯನಲ್ಲಿರುವ ಹಲವು ಸ್ವಾರ್ಥಗಳನ್ನು ಅನಾವರಣಗೊಳಿಸುತ್ತಾರೆ. ಈ ಕವಿತೆಯಲ್ಲಿ ಬಾಯಿಚಪಲದ ವಿರುದ್ಧ ಸಮರವಿದೆ. ಕಾಯಕ ಮಾಡಿ ತಿನ್ನಬೇಕೆಂಬ ಸೂತ್ರವಿದೆ. ನಮ್ಮ ನಡುವಣ ಅಪರೂಪದ ಜೀವನದ ಧೀರತನವಿದೆ.

ಅವರು ಕರ್ತಾರನ ಕಮ್ಮಟದಲ್ಲಿ ನಿರಂತರ ಚಲಾವಣೆಯಾಗಿ ಹಲವು ಹೊಡೆತಗಳನ್ನನುಭವಿಸಿ ಗಟ್ಟಿತನವನ್ನನುಭವಿಸುತ್ತಲೇ ಹೋರಾಟ ಮತ್ತು ಸಂಘರ್ಷಗಳ ಮೂಲಕವೇ ಎಲ್ಲವನ್ನೂ ತಮ್ಮದಾಗಿಸಿಕೊಂಡಿದ್ದರೆಂಬುದನ್ನು ಇಲ್ಲಿ ಅರಿಯಬಹುದಾಗಿದೆ. ಬದುಕಿನುದ್ದಗಲಕ್ಕೂ ಘಟಿಸಿದ ಬಾಹ್ಯ ಸಂಕಟಗಳೆಲ್ಲವೂ ಅವರ ಅಂತರಂಗವನ್ನೆಲ್ಲ ಹಸನುಗೊಳಿಸುತ್ತಿದ್ದವು. ಮಡಿವಾಳಪ್ಪ ಇಷ್ಟೆಲ್ಲ ಸಿದ್ಧಗೊಳ್ಳಲು ಕಾರಣ ಅವರಿಗೆ ಇಷ್ಟಲಿಂಗದೊಂದಿಗಿನ ನಿರಂತರ ಲಿಂಗಾನುಸಂಧಾನದಿಂದ ಸಂಚಯವಾದ ಯೋಗಶಕ್ತಿ ಎನಿಸುತ್ತದೆ.

ಮಡಿವಾಳಪ್ಪ ತಮ್ಮ ಬದುಕಿನಲ್ಲಿ ಘಟಿಸಿದ ಘಟನೆಗಳಿಂದಲೇ ಅನುಭಾವದ ಅಡುಗೆ ಮಾಡಿದ್ದರು. ಜೊತೆಗೆ ಬಸವಾದಿ ಶರಣರು ಭಾರತೀಯ ತತ್ವಶಾಸ್ತ್ರಕ್ಕೆ ನೀಡಿದ್ದ ವಿಶಿಷ್ಟ ಪರಿಕಲ್ಪನೆಯಾಗಿದ್ದ. ಹಲವಾರು ಅಸಮಾನತೆರಹಿತ ಬದುಕೊಂದನ್ನು ಇಷ್ಟಲಿಂಗದ ಮೂಲಕ ಕಟ್ಟಿಕೊಟ್ಟ ಅನುಭವದ ಸಿದ್ಧಾಂತಗಳನ್ನು ಅನುಸಂಧಾನ ಮಾಡಿಕೊಂಡಾಗ ಆಗಿರುವ ಅನುಭಾವದ ಅಡುಗೆಯನ್ನು ಉಣಬಡಿಸಿದರು. ಅನುಭವ ಎಂಬುದು ಇಹದ

ಬದುಕಿನ ಅನುಷ್ಠಾನವಾದರೆ ಆಂತರಿಕವಾಗಿ ಆತ್ಯಂತಿಕ ಸತ್ಯದತ್ತ ಕ್ರಮಿಸುವುದನ್ನೇ 'ಅನುಭಾವ' ಎಂದು ಹೇಳಿ ಹಾಗೆ ನಡೆಯುವವರನ್ನು ಅನುಭಾವಿ ಎಂದೂ ಕರೆಯುತ್ತಿದ್ದರು.

ಅಂದು ದುಡಿಯುವ ಕೈಗಳಿಗಿಂತ ಗವಿಯಲ್ಲಿ, ಗುಡಿಯಲ್ಲಿ ಕುಳಿತು ಪೂಜೆ ಮಾಡುವ ಕೈಗಳೇ ಅಮೃತಹಸ್ತವೆಂದು ವೈಭವೀಕರಿಸಿರುವ, ಗಂಧ ವಿಭೂತಿ ಕರ್ಪುರಾದಿಗಳಿಂದಾ ವರಿಸಿದ ಆಲಂಕಾರಿಕ ದೇಹಗಳೇ ಶ್ರೇಷ್ಠವೆಂದು ನಂಬಿಸಿದ್ದ ವ್ಯವಸ್ಥೆಯಲ್ಲಿ ಬಾಹ್ಯಾಡಂಬರದ ತೋರಿಕೆಯ ಸಾಧನೆಗಳಿಗಿಂತ ಆಂತರ್ಯದ ಅರಿವಿನ ಕಣ್ತೆರೆಯುವಿಕೆಯೇ ಮಹತ್ಸಾಧನೆ, ಬಹಿರಂಗದಲ್ಲಿ ದುಡಿಯುವ ಕಾಯಕದ ಕೈಗಳೇ ಶ್ರೇಷ್ಠವೆಂದು ಮನನ ಮಾಡಿಸಿ, ಕಾಯವೇ ದೇವಾಲಯ, ಕಾಯಕವೇ ಕೈಲಾಸ ಎಂದು ನಿರೂಪಿಸಿದ್ದಲ್ಲದೆ ತಮ್ಮ ಅನುಭಾವದ ಅಡುಗೆಯಲ್ಲಿ ಪ್ರಸಾದ ಮಾಡಿ ಅದನ್ನೇ ಜಂಗಮಕ್ಕೆ ದಾಸೋಹ ಮಾಡಿದ್ದರು.

ಮಡಿವಾಳಪ್ಪನವರ ಶರಣತ್ವದ ಸರಳತೆಯ ಬದುಕಿನ ಕುರಿತು ಅವರ ಬದುಕಿನಲ್ಲಿ ಒಂದು ಪ್ರಸಂಗ ನಡೆಯುತ್ತದೆ. ಒಮ್ಮೆ ಜೇವರ್ಗಿಯ ಗಂವ್ಹಾರದ ಬಸಲಿಂಗಪ್ಪ ಶಾಸ್ತ್ರಿಗಳು ಮಡಿವಾಳಪ್ಪನನ್ನು ಕಾಣಲು ಕಡಕೋಳಕ್ಕೆ ಬಂದಾಗ ಅಲ್ಲಿ ಒಬ್ಬಾತ ಸೆಗಣಿ ಕಲೆಸುತ್ತ ಕೆಲಸದಲ್ಲಿ ಮಗ್ನನಾಗಿದ್ದ. ಆತನನ್ನುದ್ದೇಶಿಸಿ ಶಾಸ್ತ್ರಿಗಳು "ಏ ಮುತ್ಯಾ ಮಡಿವಾಳಪ್ಪನವರು ಎಲ್ಲಿದ್ದಾರೆ?" ಎಂದು ಕೇಳಿದಾಗ, ಆ ವ್ಯಕ್ತಿ "ಅವರು ಬೇರೆ ಊರಿಗೆ ಹೋಗಿದ್ದಾರೆ, ಅವರು ಬರುವವರೆಗೆ ವಿಶ್ರಾಂತಿ ಪಡೆಯಿರಿ" ಎಂದು ಹೇಳಿ ಸಂಪೂರ್ಣವಾಗಿ ಅವರ ಆತಿಥ್ಯದಲ್ಲಿ ತೊಡಗುತ್ತೇನೆ.

ಇದಾಗಿ ಒಂದೆರಡು ದಿನಗಳ ನಂತರ ಬೇರೆ ಊರಿನ ನಾಲ್ಕಾರು ಜನ ಬಂದು ಸೆಗಣಿ ಕಲೆಸುವ ಕೆಲಸ ಮಾಡುತ್ತಿದ್ದ ವ್ಯಕ್ತಿಯನ್ನುದ್ದೇಶಿಸಿ, "ಎಪ್ಪಾ ಮುತ್ಯಾ ಮಡಿವಾಳಪ್ಪ, ನಮ್ಮಲ್ಲಿ ಬಿತ್ತನೆಯ ಜೋಳದ ಕಾಳುಗಳು ಖಾಲಿಯಾಗಿವೆ, ಈ ವರ್ಷ ಹೊಲದಲ್ಲಿ ಬಿತ್ತಲು ನಿಮ್ಮಲ್ಲಿರುವ ಜೋಳದಕಾಳುಗಳನ್ನು ತಮ್ಮ ಕೈಯಾರ ಆಶೀರ್ವದಿಸಿ ನಮಗೆ ಕೊಡಬೇಕು" ಎನ್ನುತ್ತಾರೆ. ಆಗ ಬಸಲಿಂಗಪ್ಪ ಶಾಸ್ತ್ರಿಗಳು ಆಶ್ಚರ್ಯಚಕಿತರಾಗಿ ಇಲ್ಲಿಯವರೆಗೆ ನಮ್ಮ ಸೇವೆ ಮಾಡಿದವರೇ ಮಡಿವಾಳಪ್ಪ ಎಂದು ತಿಳಿದು "ಇದೇನು ಮಡಿವಾಳಪ್ಪ ಹೆಂಡಿ ಕಸದ ಮಾಯೆ ತಮಗಿನ್ನೂ ಬಿಟ್ಟಿಲ್ಲವೇ" ಎಂದು ಗೇಲಿ ಮಾಡಿದಾಗ ಮಡಿವಾಳಪ್ಪ ಅರ್ಥಪೂರ್ಣವಾಗಿ ಮುಗುಳ್ನಕ್ಕು ತಮ್ಮ ಕಾಯಕದಲ್ಲಿ ಮುಂದುವರೆದರಂತೆ.

ಹೀಗೆ ಮಡಿವಾಳಪ್ಪನಿಗೆ ಹುಲ್ಲು ಹೊರೆಯುವುದು, ಬೆರಣಿ ತಟ್ಟುವುದು, ಕಸ ಗುಡಿಸುವುದು ಇವೆಲ್ಲ ಇಷ್ಟಲಿಂಗದೊಂದಿಗೆ ಅನುಸಂಧಾನ ಮಾಡಿಕೊಳ್ಳುವ ಪೂಜೆಯಂತಾಗಿದ್ದವು. ಹೀಗೆ ಮಾಡುತ್ತಲೇ ಈ ಕ್ರಿಯೆಗಳೊಂದಿಗೆ ಆಧ್ಯಾತ್ಮದ ಪರಿಭಾಷೆ ಹೊಂದಿಸುತ್ತ ಪದಗಳನ್ನು, ವಚನಗಳನ್ನು ಕಟ್ಟಿ ಹಾಡುತ್ತಿದ್ದರು. ತಮ್ಮ ತತ್ವಪದಗಳ ಮೂಲಕವೇ ಹನ್ನೆರಡನೇ ಶತಮಾನದ ಶರಣರ ಜೀವನತತ್ವಗಳನ್ನು ಪುನರ್‌ಪ್ರತಿಷ್ಠಾಪಿಸುವ ಕಾಯಕದ ಸಿದ್ಧಾಂತ, ಜಾತಿ, ಲಿಂಗ, ವರ್ಣ, ಅಸಮಾನತೆಯನ್ನು ಮೀರಿದ ಸಹಜ

ಬದುಕಿನ ಕುರಿತು ಅನುಭವವನ್ನು ಜಂಗಮಗೊಳಿಸುತ್ತಾ, ಇದಕ್ಕಿಂತ ದೊಡ್ಡದಾವುದು ಇಲ್ಲವೆನ್ನುತ್ತಾರೆ. ತಮ್ಮೊಂದಿಗೆ ಖೈನೂರು ಕೃಷ್ಣಪ್ಪ, ತೆಲಗಬಾಳ ರ್‍ಯಾವಪ್ಪ, ಕಡ್ಲೇವಾಡದ ಸಿದ್ದಪ್ಪ, ಚನ್ನೂರು ಜಲಾಲಸಾಬ, ಅರಳಗುಂಡಿಗೆ ಭಾಗಮ್ಮ ಹೀಗೆ ಹಲವಾರು ಜನ ಸಾಧಕರೊಡನೆ ಅವರು ಆಧ್ಯಾತ್ಮದ ಆಟ ಆಡುತ್ತಿದ್ದರು.

ಅನುಭವ ಮಂಟಪ ಬರೀಯ ಮಾತಿನ ಮಂಟಪವಲ್ಲವೆಂದು ನಂಬಿಕೊಂಡು, ಕಡಕೋಳ ಮಠವನ್ನು ಅನುಭವ ಮಂಟಪವನ್ನಾಗಿಸುವತ್ತ ಸ್ಪಷ್ಟವಾದ ಕಾರ್ಯ ಯೋಜನೆಯೊಂದನ್ನು ಅನುಸರಿಸಿ ಅದನ್ನು ಸಾಕಾರಗೊಳಿಸುವ ಸಾಧನವಾಗಿ ಗರಡಿ ಮನೆಯನ್ನಾಗಿಸಿದ್ದರು. ಅದಕ್ಕೆ ಇವರನ್ನು ಜನ ಆರೂಢರಂತೆ, ವೇದಾಂತಿಯಂತೆ, ಮಠದಯ್ಯನಂತೆ, ಅನುಭಾವಿಯಂತೆ, ಸಮಾಜಸುಧಾರಕನಂತೆ, ಬಂಡಾಯಗಾರನಂತೆ, ಜಗದ ಜ್ಯೋತಿಯಂತೆ ಕಂಡಿದ್ದರು. ನನಗಂತೂ ಮಡಿವಾಳಪ್ಪನೆಂದರೆ ಶರಣರ ಮುಂದುವರಿದ ಭಾಗವಾಗಿ ಶ್ರಮಿಸುತ್ತಾ, ಮುರಿದುಹೋಗಿದ್ದ ವ್ಯವಸ್ಥೆಯನ್ನು ಮತ್ತೆ ಕಟ್ಟುವ ಮೂಲಕ ಮತ್ತೆ ಜಗತ್ತನ್ನು ಕಲ್ಯಾಣವಾಗಿಸುವತ್ತ ಸದಾ ಯೋಚಿಸುತ್ತಿದ್ದರೆನಿಸುತ್ತಿದೆ. ಮಡಿವಾಳಪ್ಪನ ಅದೆಷ್ಟೋ ತತ್ವ/ವಚನ ಪದಗಳಲ್ಲಿ ನನಗೆ ಅತಿ ಹೆಚ್ಚು ಇಷ್ಟವಾಗಿದ್ದು ಇದು.

ತನ್ನ ತಾನು ತಿಳಿದ ಮೇಲೆ ಇನ್ನೇನಿನ್ನೇನೋ
ತನ್ನಂತೆ ಸರ್ವರ ಜೀವ ಮನ್ನಿಸಿ ಮೂಕಾದ ಮೇಲೆ

ತಾನೇ ಪೃಥ್ವಿ ಅಪ್ಪು ತೇಜ ತಾನೆ ವಾಯು
ಆಕಾಶಾತ್ಮ ತಾನೆ ಸೂರ್ಯ ಚಂದ್ರ ತಾರೆ ತಾನೆ ಬ್ರಹ್ಮಾಂಡಾದ ಮೇಲೆ

ತಾನೇ ಘ್ರಾಣ ಜಿಹ್ವೆ ನೇತ್ರ ತಾನೆ ತ್ವಕ್ಕು ಶ್ರೋತ್ರ ಹೃದಯ
ತಾನೆ ಕಾಯ ಕರಣ ಹರಣ ತಾನೆ ಪಿಂಡಾಂಡಾದ ಮೇಲೆ

ತಾನೆ ಹೆತ್ತ ಸತ್ತ ಅತ್ತ ತಾನೆ ನಿತ್ಯ ನುತ್ಯ ಸತ್ಯ
ತಾನೆ ಆರ್ತ ಬೆರ್ತ ಮರ್ತ ತಾನೆ ಸರ್ವವಾದ ಮೇಲೆ

ತಾನೆ ಲಕ್ಷ ಸಾವಿರ ನೂರ ಹತ್ತೊಂಬತ್ತಗೆಂಟೇಳು
ತಾನೆ ಆರೈದು ನಾಲ್ಕು ಮೂರು ತಾನೆ ಎರಡೊಂದಾದ ಮೇಲೆ

ತಾನೆ ನೀನು ನೀನೆ ತಾನು ತಾನೆ ಅಲ್ಲ ತಾನೆ ಇಲ್ಲ
ತಾನೆ ಮಹಾಂತ ತಾನೆ ತಾನು ಏನೋ ಏನೊಂದಾದ ಮೇಲೆ

ಮೇಲಿನ ಇಡೀ ಪದ್ಯ ಅವರ ನಿಲುವಿಗೆ ಹಿಡಿದ ಕನ್ನಡಿಯಾಗಿದೆ. ವಿಶ್ವ ಕುಟುಂಬಿಯಾಗಿ ತಾದ್ಯಾತ್ಮವೇ ಶಿವಯೋಗ, ಅದುವೇ ಜೀವ ಮತ್ತು ಜೀವನದ ಬಹು

ದೊಡ್ಡ ಸಾಧನೆ ಎನ್ನುತ್ತಾರೆ. ಈ ಪದ್ಯ ಓದಿದ ಮೇಲೆ ವಿಶ್ಲೇಷಿಸಿದರೆ ಅದರ ಗಟ್ಟಿತನಕ್ಕೆ ಪೆಟ್ಟಾಗಬಹುದೆಂಬ ಭಯ ನನಗೆ. ಹಾಗಾಗಿ ಸ್ವಯಂವೇದ್ಯವಾಗಿರುವ ಇಡೀ ಪದ್ಯವನ್ನು ತಮ್ಮೊಂದಿಗೆ ಯಥಾವತ್ತಾಗಿ ಹಂಚಿಕೊಂಡಿದ್ದೇನೆ.

ಹೀಗೆ, ಕಡಕೋಳ ಮಡಿವಾಳಪ್ಪ ತಮ್ಮ ದಿಟ್ಟ, ಸ್ಪಷ್ಟ ನಿಲುವಿನಿಂದಾಗಿ ಇಂದಿಗೂ ಹಲವಾರು ಜಿಜ್ಞಾಸುಗಳ ಗಮನ ಸೆಳೆಯುತ್ತಾರೆ. 1,100 ತತ್ತ್ವ ಪದಗಳನ್ನು, 1,100 ಭಕ್ತಿಪದಗಳನ್ನು ಮತ್ತು 1,100 ಮಂಗಳಾರತಿ ಪದಗಳನ್ನು ಒಟ್ಟು 3,300 ಸ್ವರವಚನಗಳನ್ನು ಬರೆದಿರುವರೆಂಬ ಒಂದು ಲೆಕ್ಕಾಚಾರವಿದೆ. ಆದರೆ ಜನಮಾನಸದ ಜನಪದರಾಗಿ ಅದೆಷ್ಟೋ ಲೆಕ್ಕವಿಲ್ಲದಷ್ಟು ತತ್ವಪದಗಳನ್ನು ಕಟ್ಟಿಕೊಟ್ಟು ಹೋಗಿದ್ದಾರೆ. ಇವುಗಳಲ್ಲಿ ಪ್ರಕಟವಾಗಿರುವುದು ಸದ್ಯ 310 ಪದಗಳು.

ಕಲ್ಯಾಣದ ಹೆಬ್ಬಾಗಿಲಿನ ಇಳೆಯ ಮಗನಾದ ಮಡಿವಾಳಪ್ಪ ಕಡಕೋಳದ ಸ್ಥಾವರ ಮಠದಲ್ಲಿ ಕೇವಲ ಸ್ಮಾರಕವಾಗಿ ನನ್ನಂಥವರೊಳಗೆ ಸದಾ ಜಂಗಮವಾಗಿದ್ದಾನೆಂದು ಕೊಂಡೇ ಮಠದ ಆವರಣದಲ್ಲಿ ಸುತ್ತಾಡುತ್ತಾ ಮೂಲ ಕರ್ತೃ ಗದ್ದುಗೆಗೆ ಕೈಮುಗಿದು ಬಾಗಿ ನಮಿಸುವಾಗ ಬೇಡವೆಂದರೂ ಆತನ ಕಡೆಯ ದಿನದ ಕ್ಷಣಗಳು ನೆನಪಾಗಿ ಅಕ್ಷರಶಃ ಕಣ್ಣೀರಾದೆ. ಕ್ರಿ.ಶ. 1876ರಲ್ಲಿ ಒಂದು ದಿನ ಮಡಿವಾಳಪ್ಪ ಮಠದ ಆವರಣದಲ್ಲಿ ತಾವೇ ನಿರ್ಮಿಸಿದ ಗವಿಯೊಂದರಲ್ಲಿ ಧ್ಯಾನಕ್ಕೆ ಕುಳಿತುಕೊಳ್ಳುವಾಗ "ಮೂರು ದಿನಗಳ ನಂತರ ಬಾಗಿಲು ತೆರೆಯಿರಿ" ಎಂದು ಅಲ್ಲಿದ್ದವರಿಗೆ ತಿಳಿಸಿದ್ದರಂತೆ. ಆದರೆ ಯಾವುದೋ ಕಾರಣಕ್ಕೆ ಅಲ್ಲಿದ್ದ ಯಾರೊಬ್ಬರೂ ಬಾಗಿಲು ತೆರೆಯದಿದ್ದಾಗ ಕೆಲ ದಿನಗಳ ನಂತರ ಮುಚ್ಚಿದ ಗವಿಯಲ್ಲಿ ಒಂದು ರಂಧ್ರ ಕಂಡಂತಾಗಿ ಆ ಮೂಲಕ ಮಡಿವಾಳಪ್ಪನ ಜೀವಾತ್ಮ ಬಯಲಲ್ಲಿ ಬಯಲಾಗಿ ಮಹಾಬಯಲಲ್ಲಿ ಲೀನವಾಯಿತೆಂಬ ವಿಷಯ ನೆನಪಿಗೆ ಬಂತು.

ತಮ್ಮ ಪದಾರ್ಥಕಾಯವನ್ನು ಪ್ರಸಾದೀಕರಣಗೊಳಿಸಿಕೊಳ್ಳಲು ಮಡಿವಾಳಪ್ಪ ಆಯ್ದುಕೊಂಡಿದ್ದು ಭಕ್ತಿಪಂಥ. ಬಸವಾದಿ ಪ್ರಮಥರ ಗಾಢ ಪ್ರಭಾವವನ್ನು ತಮ್ಮೊಳಗಿಂಬಿಟ್ಟುಕೊಂಡೇ ತಮ್ಮ ಪ್ರಸಾದಿಕಾಯವನ್ನು ಜಂಗಮಕ್ಕೆಡೆಮಾಡಿಕೊಟ್ಟ ಇವರನ್ನು ಆ ದೇವ ತನಗೆ ಬೇಕೆಂದು ಬಲು ಪ್ರೀತಿಯಿಂದ ಎತ್ತಿಕೊಂಡಿದ್ದ. ಹೀಗೆ ಜಂಗಮಕ್ಕಳಿವಿಲ್ಲ ವಾದ ಇವರ ನೆನಪನ್ನು ಸ್ಥಾವರವನ್ನಾಗಿ ಉಳಿಸಿಕೊಳ್ಳಲು ಇದೇ ಗವಿಯ ಮೇಲಿನ ಭಕ್ತರು ಕಟ್ಟಿರುವ ಕಟ್ಟೆಯು ಗದ್ದುಗೆಯಾಗಿ ಕಡಕೋಳದ ಮಠದಲ್ಲಿ ಇಂದಿಗೂ ಪೂಜನೀಯವಾಗಿದೆ. "ನನ್ನೊಳಗಿದ್ದಾತನೇ ನನ್ನ ನಡೆಗೆ ಅಹುದಹುದೆಂದಮೇಲೆ ನನಗಿನ್ನೇನಿನ್ನೇನು...?" ಎಂಬ ಗಟ್ಟಿ ಭಾವದಲ್ಲಿ ಜಂಗಮವಾಗಿ ಸವೆದಿದ್ದ ಮಡಿವಾಳಪ್ಪ ನಮ್ಮಂಥವರಿಗೊಂದು ಆದರ್ಶಪಥವಾಗಿದ್ದಾರೆ. ಆ ಪಥದಲ್ಲಿ ನಾವು ನಡೆಯಬೇಕಷ್ಟೆ.

□

# ಶರಣರ ದೃಷ್ಟಿಯಲ್ಲಿ ಮಹಿಳೆ – ಒಂದು ಅವಲೋಕನ

ಎಚ್.ಎಸ್. ಸಿದ್ಧಗಂಗಪ್ಪ

ಮಹಿಳೆಯರನ್ನು ಪ್ರಾಚೀನ ಭಾರತದಲ್ಲಿ ಗೌರವಿಸಿರುವ ಕೆಲವು ನಿದರ್ಶನಗಳು ಕಂಡುಬಂದರೂ, ಅವು ಕೇವಲ ಬೆರಳೆಣಿಕೆಯಷ್ಟು ಮಾತ್ರ. ಇದಕ್ಕೆ ಕಾರಣ ಬಹುಶಃ ಮಹಿಳೆಯರ ಬಗ್ಗೆ ಇದ್ದ ದ್ವಂದ್ವ ನೀತಿಯೇ ಕಾರಣವಿರಬಹುದೆನಿಸುತ್ತದೆ. ಏಕೆಂದರೆ ಒಂದು ಕಡೆ 'ಎಲ್ಲಿ ಹೆಣ್ಣು ಗೌರವಿಸಲ್ಪಡುತ್ತಾಳೋ ಅಲ್ಲಿ ದೇವತೆಗಳು ನೆಲಸಿರುತ್ತಾರೆ' ಎಂದು ಹೇಳಿದರೆ, ಮತ್ತೊಂದೆಡೆ 'ನ ಸ್ತ್ರೀ ಸ್ವಾತಂತ್ರ್ಯಮರ್ಹತಿ' ಎಂದಿರುವುದು ಈ ದ್ವಂದ್ವ ನೀತಿಗೆ ಒಂದು ಉಜ್ವಲ ನಿದರ್ಶನ. ಆದರೆ 12ನೇ ಶತಮಾನದ ಬಸವಾದಿ ಶರಣರ ದೃಷ್ಟಿ, ಚಿಂತನೆ ಅತ್ಯಂತ ಪ್ರಗತಿಪರವಾದುದು. ಆಧ್ಯಾತ್ಮಿಕ ನೆಲಗಟ್ಟಿನ ಮೇಲೆ ನಿಂತಿದ್ದು, ಆಧುನಿಕ ಯುಗದಲ್ಲಿಯೂ ಸಮಾನತೆಯನ್ನು ಕಾಣದೆ ತತ್ತರಿಸುತ್ತಿರುವಾಗ ಎಂಟು ನೂರು ವರ್ಷಗಳ ಹಿಂದೆಯೇ 'ನಡುವೆ ಸುಳಿವ ಆತ್ಮ ಹೆಣ್ಣೂ ಅಲ್ಲ, ಗಂಡೂ ಅಲ್ಲ' ಎಂಬ ಪ್ರತ್ಯಕ್ಷ ಕಪಿಲಸಿದ್ಧ ಮಲ್ಲಿಕಾರ್ಜುನ ಕಾಯಕಯೋಗಿ ಸಿದ್ಧರಾಮನ ಅಭಿವ್ಯಕ್ತಿ ಹೆಣ್ಣಿಗೆ ನೀಡಿದ ಮಹೋನ್ನತ ಗೌರವ.

'ಹೆಣ್ಣು ಮಾಯೆಯಲ್ಲ' ಆಕೆ 'ಮಹಾದೇವಿ' ಎಂದು ಗೌರವಿಸಿದ ಶರಣರು, ಕೇವಲ ನುಡಿದವರಲ್ಲ, ನುಡಿದಂತೆ ನಡೆದವರು. ಶರಣರು ಹೆಣ್ಣನ್ನು 'ಕೇವಲ ಹೆಣ್ಣೆಂದು' ಭಾವಿಸದೆ, ಆಕೆಯನ್ನು ಕೇವಲ ಸೇವೆ ಮಾಡುವುದಷ್ಟಕ್ಕೇ ಸೀಮಿತಗೊಳಿಸದೆ ಆಕೆಯ ವ್ಯಕ್ತಿತ್ವವಿಕಸನಕ್ಕೆ ನೆರವಾದರು. ಹೆಣ್ಣು ಈ ಸಮಾಜದ 'ಅಂತರ್‌ನೈತಿಕ ಬಲ' ಎಂದು ಕಂಡುಕೊಂಡರು.

ಹೆಣ್ಣು ಯಜಮಾನ ಸಂಸ್ಕೃತಿಯಿಂದ ಹೊರಬಂದು ಹೆಣ್ಣಾಗಿ ನಿಂತುದು, ಗಂಡಿಗೆ ಸರಿಸಮಾನವಾದ ಸಾಧನೆ ಮಾಡಿದ್ದು, ಹನ್ನೆರಡನೆಯ ಶತಮಾನದ ವಚನಕಾರರ ಯುಗದಲ್ಲಿ ಎಂಬುದನ್ನು ಗಮನಿಸಬೇಕು. ಶರಣರು ಸಾಮಾಜಿಕವಾಗಿ, ಧಾರ್ಮಿಕವಾಗಿ ಸಮಾನತೆಯನ್ನು ಕೊಟ್ಟು ಅನುಭವಮಂಟಪದಲ್ಲಿ ಅನುಭಾವದ ಚರ್ಚೆಯಲ್ಲಿ ಅವರು ಪಾಲ್ಗೊಳ್ಳುವಂತೆ ಮಾಡಿದುದು ಸಾಮಾನ್ಯ ಘಟನೆಯಲ್ಲ. ಆಕೆ ಗೃಹಿಣಿಯಾಗಿ ಗೃಹಕಾರ್ಯದಲ್ಲಿ ತೊಡಗಿದಾಗಲು ಅವರಿಗೆ ಅವಳು ಸಮಾನಳು. ಅವಳ ಮಾತು 'ಬೆಲ್ಲದ ಕೆನರು, ಸಕ್ಕರೆಯ ಮಳಲು, ತವರಾಜದ ನೊರೆತೆರೆ'. ಹೀಗಿತ್ತು 12ನೇ ಶತಮಾನದ ಕೌಟುಂಬಿಕ ಜೀವನ. ಕುಟುಂಬ ಜೀವನವು ಸಹ್ಯವಾಗಿರಬೇಕಾದರೆ 'ಅರಿವು'ಳ್ಳ ಹೆಂಡತಿ ದೊರಕುವುದು ಪೂರ್ವಜನ್ಮದ ಪುಣ್ಯದ ಫಲ ಎಂದು ತಿಳಿದವರು ಶರಣರು. ಏಕೆಂದರೆ

ಅವರ ವಚನಗಳಲ್ಲಿ ಕೆಟ್ಟ ಹೆಂಡತಿಯರ ಉಲ್ಲೇಖವೂ ಇದೆ. ಅಂಥವರ ಒಡನಾಟ 'ಸತ್ತ ನಾಯಿ ಅಟ್ಟದ ಮೇಲಿಟ್ಟು ಹಂಚಿ ತಿಂದಂತೆ' ಎಂದಿದ್ದಾರೆ. ಒಂದು ಪಕ್ಷ ಆಧ್ಯಾತ್ಮಿಕ ಸಾಧನೆಯಲ್ಲಿ ಗಂಡ ದಾರಿತಪ್ಪಿದಾಗ ಎಚ್ಚರಿಕೆ ನೀಡಿ ಸರಿದಾರಿಗೆ ತರುವ ಹೆಂಡತಿಯರೂ ಇದ್ದರು. ಇದಕ್ಕೆ ಆಯ್ದಕ್ಕಿ ಮಾರಯ್ಯ–ಲಕ್ಕಮ್ಮ, ಮೋಳಿಗೆ ಮಾರಯ್ಯ–ಮಹಾದೇವಿ ದಂಪತಿಗಳ ಉತ್ತಮ ನಿದರ್ಶನ.

'ಸ್ತ್ರೀವಾದ' ಎಂಬ ಪರಿಕಲ್ಪನೆ ಇತ್ತೀಚೆಗೆ ಹುಟ್ಟಿಕೊಂಡಿದೆ. ಸ್ತ್ರೀವಾದವೆಂದರೆ ಲಿಂಗಾಧಾರಿತ ಅಸಮಾನತೆಯಿಂದ ಮಹಿಳೆಯರು ಸಮಾಜದಲ್ಲಿ ಎದುರಿಸುತ್ತಿರುವ ತಾರತಮ್ಯ, ದೌರ್ಜನ್ಯ ಹಾಗೂ ಶೋಷಣೆಗಳನ್ನು ಕೊನೆಗಾಣಿಸಲು ನಡೆಸುವ ಪ್ರಾಮಾಣಿಕ ಪ್ರಯತ್ನ. 'ಸ್ತ್ರೀವಾದ'ವನ್ನು ಈ ಹಿನ್ನೆಲೆಯಲ್ಲಿ ಒಂದು ಸಾಮಾಜಿಕ ಚಳವಳಿ. ಇದು ಒಂದು ಸೈದ್ಧಾಂತಿಕ ಕ್ರಮ ಎನ್ನುತ್ತಾರೆ ಸ್ತ್ರೀವಾದಿಗಳು. ಸ್ತ್ರೀವಾದಿಗಳು ಎಂದರೆ ಸ್ತ್ರೀಪರ ವಿಚಾರಗಳಲ್ಲಿ ಕಳಕಳಿಯನ್ನು, ಬದ್ಧತೆಯನ್ನು ಹೊಂದಿರುವ ಹಾಗೂ ಆ ವಿಚಾರಗಳಿಗೆ ಸ್ಪಂದಿಸುವ ಮನೋಭಾವವನ್ನು ಹೊಂದಿರುವವರು. ಅವರ ಈ ದೃಷ್ಟಿಕೋನ, ಕಾಳಜಿಯ ಕೇವಲ ಸ್ತ್ರೀಯರನ್ನಷ್ಟೇ ಅಲ್ಲ, ಪುರುಷರನ್ನು ಒಳಗೊಂಡಿದೆ. ಅವರ ಪ್ರಕಾರ ಸ್ತ್ರೀಸಮಾನತೆಯನ್ನು ಕೇವಲ ಕಾಯಿದೆ, ಕಾನೂನುಗಳಿಂದ ತರಲು ಸಾಧ್ಯವಿಲ್ಲ. ಏಕೆಂದರೆ ಈ ಅಸಮಾನತೆಯನ್ನು ಕಿತ್ತೊಗೆದಾಗ ಮಾತ್ರ ಸಾಧ್ಯ ಎನ್ನುವುದು ಸ್ತ್ರೀವಾದದ ಗುರಿಯಾಗಿದೆ.

ಸ್ತ್ರೀವಾದಿಗಳು ಎಂದರೆ ಸಾಮಾಜಿಕ ಸಮತೋಲನವನ್ನು, ಕುಟುಂಬದ ಸುಖ–ಶಾಂತಿಗಳನ್ನು, ಪುರುಷರು ಮತ್ತು ಮಹಿಳೆಯರ ನೆಮ್ಮದಿಯನ್ನು ನಾಶ ಮಾಡುವವರು ಎಂಬ ಭಾವನೆ ಬಹಳ ಜನರಲ್ಲಿದೆ. ಸ್ತ್ರೀವಾದವು ಸ್ತ್ರೀ ಸಮಾನತೆಗಾಗಿ ನಡೆಸುವ ಹೋರಾಟ. ಇದು ಒಂದು ನಿರ್ದಿಷ್ಟ ಧ್ಯೇಯ ಹಾಗೂ ಮಾರ್ಗದರ್ಶನವನ್ನು ನೀಡುತ್ತದೆ ಎಂಬುದು ಈ ಹೋರಾಟಗಾರರ ಅಭಿಪ್ರಾಯ.

ಈ ಅಭಿಪ್ರಾಯಗಳು ಸೂಕ್ತವೇ ಆಗಿದ್ದರೂ, ಇಲ್ಲಿ ಅನೇಕ ಪ್ರಶ್ನೆಗಳು ನಮ್ಮನ್ನು ಕಾಡುತ್ತವೆ. ಸಮಾನತೆ ಎನ್ನುವುದು ಕೇವಲ ಸ್ತ್ರೀಯರು ಮಾತ್ರ ಎದುರಿಸುತ್ತಿರುವ ಸಮಸ್ಯೆಯೆ? ಸ್ತ್ರೀವಾದ ಎಂಬುದು ಭಾರತೀಯ ಸಂಸ್ಕೃತಿಗೆ ಎಷ್ಟರಮಟ್ಟಿಗೆ ಹೊಂದಿಕೆಯಾಗುತ್ತದೆ, ಸ್ತ್ರೀವಾದಿಗಳೆಲ್ಲರೂ 'ಪುರುಷದ್ವೇಷಿಗಳೆ' ಅಂತೆಯೇ ಪುರುಷರೆಲ್ಲರೂ ಮಹಿಳೆಯರ ದ್ವೇಷಿಗಳೆ ಅಥವಾ ಶೋಷಕರೆ, ಹೆಣ್ಣು ಹೆಣ್ಣಿನ ಶತ್ರು ಎಂಬ ಮಾತು ಬರಲು ಕಾರಣಗಳೇನು, ಸ್ತ್ರೀವಾದವು ಖಚಿತವಾದ ಸೈದ್ಧಾಂತಿಕ ನೆಲೆಗಟ್ಟನ್ನು ಹೊಂದಿದೆಯೇ, ಅದರ ಸಿದ್ಧಾಂತಗಳೇನು, ಇತ್ಯಾದಿ ಪ್ರಶ್ನೆಗಳು ನಮ್ಮ ಮುಂದೆ ಹಾದುಹೋಗುತ್ತವೆ. ಇಂದು ಸಮಾಜದಲ್ಲಿ ಕುಟುಂಬಧರ್ಮವೆಂಬುದು ಅರ್ಥವನ್ನು ಕಳೆದುಕೊಳ್ಳುತ್ತಿದೆ. ಸಾಮಾಜಿಕ ಸಂಬಂಧಗಳು ಶಿಥಿಲವಾಗುತ್ತಿವೆ. ನಮ್ಮ ಸಮಾಜ ಎಲ್ಲಿ ದಾರಿ ತಪ್ಪುತ್ತಿದೆ ಎಂಬುದನ್ನು ಚಿಂತನೆ ಮಾಡಬೇಕಿದೆ. 12ನೇ ಶತಮಾನದಲ್ಲಿಯೇ ಬಸವಾದಿ ಶರಣರು ಸಾರಿದ ಸ್ತ್ರೀಪುರುಷ ಸಮಾನತೆ ಸಾಕಾರಗೊಳ್ಳಲು ಇರುವ ಅಡೆ

ತಡೆಗಳು ಯಾವುವು? ಸಮಾಜದಲ್ಲಿ ಅಸದನ್ನು ಮುಂಚೂಣಿಯಲ್ಲಿ ತರುವುದು ಹೇಗೆ, ಅದನ್ನು ಮತ್ತೆ ತರಲು ಇರುವ ಸಮಸ್ಯೆಗಳಾವುವು? ಎಂಬುದನ್ನು ನಮ್ಮ ಮನಶ್ಶಾಸ್ತ್ರಜ್ಞರು, ಬುದ್ಧಿಜೀವಿಗಳು, ವಿವಿಧ ಸಂಸ್ಥೆಗಳ ಪದಾಧಿಕಾರಿಗಳು ಈ ನಿಟ್ಟಿನಲ್ಲಿ ಚಿಂತಿಸಬೇಕಿದೆ. ಅಷ್ಟೇ ಅಲ್ಲ, ಸೂಕ್ತವಾದ ಪರಿಹಾರವನ್ನು ಕಂಡುಕೊಳ್ಳಬೇಕಿದೆ.

ಇವತ್ತು ಸಮಾಜದಲ್ಲಿ, ಕುಟುಂಬದಲ್ಲಿ ಪುರುಷರ ದಬ್ಬಾಳಿಕೆಯಿಂದಲೋ ಅಥವಾ ಮತ್ತಿತರ ಕಾರಣಗಳಿಂದಲೋ ಕುಟುಂಬಜೀವನ ಹಳಿ ತಪ್ಪುತ್ತಿದೆ. ಅದನ್ನು ಸರಿಪಡಿಸಿ ಸಂಬಂಧಗಳು ಗಟ್ಟಿಯಾಗುವಂತೆ ಮಾಡಲು ಮಹಿಳೆಯರು ಮತ್ತು ಪುರುಷರ ಸಹಭಾಗಿತ್ವದ ಮೂಲಕ ಕುಟುಂಬದಲ್ಲಿ ನೆಮ್ಮದಿ ಮರುಕಳಿಸುವಂತೆ ಮಾಡುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಬೇಕಾಗಿದೆ.

ಒಂದು ಕಡೆ ವಿನೋಬಾ ಭಾವೆಯವರು ಹೀಗೆ ಹೇಳಿದ್ದಾರೆ: "ಪುರುಷರು ಪ್ರಪಂಚದ ವ್ಯವಹಾರಗಳನ್ನು ಸಂಪೂರ್ಣವಾಗಿ ಕುಲಗೆಡಿಸಿದ್ದಾರೆ. ಅವುಗಳನ್ನು ಸರಿಪಡಿಸಲು ಇನ್ನು ಅವರಿಂದ ಆಗಿಲ್ಲ. ಇನ್ನು ಅವರಿಗಿರುವ ಒಂದೇ ಮಾರ್ಗವೆಂದರೆ ಎಲ್ಲಾ ಅಧಿಕಾರ ಸೂತ್ರಗಳನ್ನು ಸ್ತ್ರೀಯರಿಗೆ ಬಿಟ್ಟುಕೊಡುವುದು". ಹಾಗೆಂದ ಮಾತ್ರಕ್ಕೆ ಎಲ್ಲದಕ್ಕೂ ಮಹಿಳೆಯೇ ಮುಂದಾಗಬೇಕೆಂದರ್ಥವಲ್ಲ. ಪುರುಷರು ಕೈಗೊಂಡ ವ್ಯವಹಾರಗಳು ಫಲಕಾರಿಯಾಗಬೇಕಾದರೆ ಸ್ತ್ರೀಪುರುಷರಿಬ್ಬರೂ ಒಂದಾಗಿ ಸಾಗಬೇಕು. ಸ್ತ್ರೀಯೇ ಆಗಲಿ ಪುರುಷನೇ ಆಗಲಿ ಸ್ವಯಂ ಪರಿಪೂರ್ಣರಲ್ಲ. ಒಂದರ್ಥದಲ್ಲಿ ಸ್ತ್ರೀಪುರುಷರಿಬ್ಬರೂ ಒಂದೇ ನಾಣ್ಯದ ಎರಡು ಮುಖಗಳು, ಒಂದು ಮುಖ ಸವೆದುಹೋದರೂ ಆ ನಾಣ್ಯಕ್ಕೆ ಬೆಲೆ ಬರುವುದಿಲ್ಲ. ಅದು ಚಲಾವಣೆಯಾಗುವುದಿಲ್ಲ. ಹಾಗೆಯೇ ಸ್ತ್ರೀಪುರುಷರು ಒಬ್ಬರನ್ನೊಬ್ಬರು ಅರ್ಥಮಾಡಿಕೊಂಡು ಯಾರೂ ಕಡಿಮೆಯಲ್ಲ, ಯಾರೂ ಹೆಚ್ಚಲ್ಲ ಎಂಬ ಮನೋಭಾವದಿಂದ ನಡೆದಾಗ ಕುಟುಂಬದಲ್ಲಿ ನೆಮ್ಮದಿ ನೆಲೆಸುತ್ತದೆ.

ಪ್ರಸ್ತುತ ಸಮಾಜದಲ್ಲಿ ಮಹಿಳೆಯರು ಸ್ವಾತಂತ್ರ್ಯದ ಹೆಸರಿನಲ್ಲಿ ಕೆಲವೊಮ್ಮೆ ಅತಿರೇಕದಿಂದ ದಾರಿತಪ್ಪುವುದೂ ಉಂಟು. ಇದಕ್ಕೆ ಪುರುಷರೂ ಹೊರತಲ್ಲ. ಇಬ್ಬರಲ್ಲಿಯೂ ನೈತಿಕ ಮಟ್ಟ ಕುಸಿಯುತ್ತಿದ್ದು, ಕುಟುಂಬಧರ್ಮ ಗಾಳಿಗೆ ಸಿಕ್ಕ ಸೊಡರಾಗಿದೆ. ಸಾಮಾಜಿಕ ಸಂಬಂಧ ಸೂತ್ರ ಕಿತ್ತ ಗಾಳಿಪಟದಂತಾಗಿದೆ.

ಅಮೆರಿಕನ್ ಮಹಿಳೆ ಬೆಟ್ಟಿಪ್ರಾಯ್ಡನ್‌ಳ ಪ್ರಕಾರ "ಇಂದು ಮಹಿಳೆ ಪತಿ, ಮಕ್ಕಳು, ಮನೆ ಇವರಿಗಿಂತ ಹೆಚ್ಚಿನದನ್ನು ಬಯಸುತ್ತಾಳೆ. ಎಚ್ಚೆತ್ತ ಮಹಿಳೆಗೆ ಗೃಹಿಣೀ ಜೀವನವೊಂದೇ ಸಂಪೂರ್ಣ ಸಾರ್ಥಕ್ಯ ತಂದುಕೊಡಲಾರದಾಗಿದೆ". ಇದು 1960ರ ದಶಕದಲ್ಲಿ ಕಂಡ ಸತ್ಯ. ಆದರೆ ಈ ಸತ್ಯದ ಸಾಕ್ಷಾತ್ಕಾರವನ್ನು ಶರಣರು 12ನೇ ಶತಮಾನದಲ್ಲೇ ಕಂಡರು. ಮಹಿಳೆಯರನ್ನು ಪುರುಷರಂತೆ ಸಮಾನತೆಯಿಂದ ನಡೆಸಿಕೊಂಡರು.

ಬಸವಣ್ಣನವರು ಅನ್ಯಾಶ್ರಯದಲ್ಲಿ ಬದುಕುವ ಹೆಣ್ಣಿಗೆ ಒಂದು ಸಾಮಾಜಿಕ ಭದ್ರತೆಯನ್ನು ತಂದುಕೊಡುವ ನಿಟ್ಟಿನಲ್ಲಿ ಆಕೆಗೆ ಧಾರ್ಮಿಕ ಸ್ವಾತಂತ್ರ್ಯವನ್ನು ಕೊಟ್ಟು

ಆತ್ಮಬಲವನ್ನು, ನೈತಿಕ ಬಲವನ್ನು ತುಂಬಿದರು. ಹೆಣ್ಣು ನಾಲ್ಕು ಗೋಡೆಗಳಿಗೆ ಸೀಮಿತವಾಗದೆ, ಹೊರಗಿನ ಪ್ರಪಂಚದ ಆಗುಹೋಗುಗಳಲ್ಲಿ ಭಾಗವಹಿಸುವ ಹಕ್ಕು ಆಕೆಗೂ ಇದೆ ಎಂದು ಪ್ರತಿಪಾದಿಸಿದರು. ಕರ್ಮಠ ನೆಲೆಯಿಂದ ಹೆಣ್ಣನ್ನು ಸಾಮಾಜಿಕ ಸಮಾನತೆಯ ನೆಲೆಗೆ ತಂದವರು ಶರಣರು ಎಂಬುದನ್ನು ಮರೆಯಲಾಗದು. ಅನುಭವಮಂಟಪದಂತಹ ಧಾರ್ಮಿಕ ಚರ್ಚಾಗೋಷ್ಠಿಯಲ್ಲಿ ಸ್ತ್ರೀಪುರುಷರೆಲ್ಲರಿಗೂ ತಮ್ಮ ಅಭಿಪ್ರಾಯಗಳನ್ನು ಮುಕ್ತವಾಗಿ ಹಂಚಿಕೊಳ್ಳಲು ಅವಕಾಶ ಕಲ್ಪಿಸಿಕೊಟ್ಟ ಬಸವಣ್ಣನವರ ಉದ್ದೇಶ ಅತ್ಯಂತ ಉದಾತ್ತವಾದುದು.

ಶ್ರೇಣೀಕೃತ ಸಮಾಜದಲ್ಲಿ ದುಡಿಮೆ ಮತ್ತು ಆದಾಯದ ಮೂಲದಿಂದ ವ್ಯಕ್ತಿಯನ್ನು ಗೌರವಿಸುವ ಸಾಮಾಜಿಕ ಪದ್ಧತಿಯನ್ನು ಮೊಟ್ಟಮೊದಲಿಗೆ ಪ್ರತಿಭಟಿಸಿದವರು ಬಸವಾದಿ ಶರಣರು. ಎಲ್ಲರ, ಎಲ್ಲ ದುಡಿಮೆಯನ್ನು ಕಾಯಕದ ಪರಿಭಾಷೆಯಲ್ಲಿ ಗೌರವಿಸುವ ಮತ್ತು ದಾಸೋಹದ ಕ್ರಮದಿಂದ ಆರ್ಥಿಕ ವಿಕೇಂದ್ರೀಕರಣವನ್ನು ಸಾಧಿಸುವ ಅವರ ತುಂಬಾ ಮಹತ್ವವಾದುದು. ಮಹಿಳೆಯ ಕಾಯಕವನ್ನು ಗೌರವಿಸುವ ಸಹೃದಯತೆ ಮತ್ತು ವೈಚಾರಿಕತೆ ಆಧುನಿಕ ಯುಗದಲ್ಲಿ ಇಂದಿಗೂ ಕಾಣುತ್ತಿಲ್ಲ ಎಂದರೆ ಅತಿಶಯೋಕ್ತಿಯಲ್ಲ. ಆದರೆ ಬಸವಣ್ಣನವರು ಹನ್ನೆರಡನೇ ಶತಮಾನದಲ್ಲಿಯೇ ಇದನ್ನು ಆಗುಮಾಡಿದವರು.

> ಎಮ್ಮ ತಾಯಿ ನಿಂಬಿಯವ್ವೆ ನೀರನೆರೆದುಂಬಳು
> ಎಮ್ಮಯ್ಯ ಚೆನ್ನಯ್ಯ ರಾಯಕಂಪಣವ ಹೇರುವ
> ಎಮಗೆ ಆರೂ ಇಲ್ಲವೆಂಬಿರಿ
> ಎಮ್ಮಕ್ಕ ಕಂಚಿಯಲ್ಲಿ ಬಾಣಸವ ಮಾಡುವಳು
> ಎಮಗೆ ಆರೂ ಇಲ್ಲವೆಂಬಿರಿ
> ಎಮ್ಮ ಅಜ್ಜರ ಅಜ್ಜರು ಹಡೆದ ಭಕ್ತಿಯ ನಿಮ್ಮ ಕೈಯಲು ಕೊಂಬೆ
> ಕೂಡಲಸಂಗಮದೇವಾ

ಓದುವುದು, ಓದಿಸುವುದು, ಆಳುವುದಷ್ಟೇ ಸಾಮಾಜಿಕ ಗೌರವದ ಸ್ಥಾನವೆನಿಸಿದ್ದ ಸಂದರ್ಭದಲ್ಲಿ ಬಸವಣ್ಣನವರು ನಿಂಬವ್ವೆ ನೀರು ಹಾಕಿ ಬಂದ ಕೂಲಿಯಿಂದ ಉಣ್ಣುವುದು ಸಾಮಾಜಿಕ ಶುದ್ಧ ಕಾಯಕದ ಮೌಲ್ಯವೆಂದು ಅಭಿಮಾನದಿಂದ, ಹೆಮ್ಮೆಯಿಂದ ಹೇಳಿರುವುದು ಅವರ ಹೃದಯಶ್ರೀಮಂತಿಕೆಯನ್ನು ತೋರಿಸುತ್ತದೆ.

ಶರಣೆ ಗೊಗ್ಗವೆಯಂಥ ಒಬ್ಬ ಸಾಮಾನ್ಯ ಮಹಿಳೆ ಖಾಸಗಿ ಆಸ್ತಿಯ ಮೂಲಭೂತ ಪರಿಕಲ್ಪನೆಯನ್ನೇ ಪ್ರಶ್ನಿಸುತ್ತಾಳೆ. ಹೆಣ್ಣು ಗಂಡಿನ ಅಧೀನದಲ್ಲಿಯೇ ಇರುವುದು ಸುರಕ್ಷಿತವೆನ್ನುತ್ತಿದ್ದ ಸಮಾಜವನ್ನು ಪ್ರಶ್ನಿಸುತ್ತ, ಪ್ರತಿಭಟಿಸುತ್ತ ಸಮಾಜಕ್ಕೆ ಹೊಸ ಕಲ್ಪನೆಯನ್ನು ಕಟ್ಟಿಕೊಟ್ಟ ಶರಣರ ಕಾರ್ಯ ಮಾದರಿಯಾದುದು.

> ಗಂಡು ಮೋಹಿಸಿ ಹೆಣ್ಣು ಹಿಡಿದಡೆ
> ಅದು ಒಬ್ಬರ ಒಡವೆ ಎಂದು ಅರಿಯಬೇಕು

ಹೆಣ್ಣು ಮೋಹಿಸಿ ಗಂಡ ಹಿಡಿದಡೆ
ಉತ್ತರವಾವುದೆಂದರಿಯಬೇಕು
ಈ ಎರಡರ ಉಭಯವ ಕಳೆದು ಸುಖ ತಾನಾಗಬಲ್ಲದೆ
ನಾಸ್ತಿನಾಥನು ಪರಿಪೂರ್ಣನೆಂಬೆ

ಇದು ಗೊಗ್ಗವ್ವೆಯ ಪ್ರಶ್ನೆ. ಗಂಡಿನ ಅಧೀನದಲ್ಲಿ ಹೆಣ್ಣಿದ್ದರೆ ಅದು ಅವನ ಆಸ್ತಿ ಎಂದು ಕರೆಯುವುದಾದರೆ, ಹೆಣ್ಣಿನ ಅಧೀನದಲ್ಲಿ ಗಂಡಿದ್ದರೆ ಏನೆಂದು ಕರೆಯಬೇಕು, ಭಾವಿಸಬೇಕು ಎಂದು ಪ್ರಶ್ನಿಸುತ್ತಾಳೆ. ಅವಳ ಸಮಾಜಮುಖಿ ಚಿಂತನೆ ಅನುಕರಣೀಯವಾದುದು. ನೀಲಮ್ಮನಂಥವರು ಕೂಡ ಹೆಣ್ಣು ಗಂಡಿನ ಬಗ್ಗೆ ಗಂಭೀರವಾಗಿ ಮಾತನಾಡಿದ್ದಾರೆ. ಗಂಡನ ಹೆಸರಿನೊಂದಿಗೆ ಗುರುತಿಸಿಕೊಳ್ಳುವ ಹೆಂಡತಿ ಎನ್ನುವುದರಲ್ಲಿಯೇ ಸಾರ್ಥಕ್ಯ ಹೊಂದುವ ಮಹಿಳೆಯರ ಮಧ್ಯದಲ್ಲಿ ನೀಲಮ್ಮ ತನ್ನ ಸ್ವಂತ ಅಸ್ತಿತ್ವವನ್ನು ಎತ್ತಿ ಹಿಡಿಯುತ್ತಾಳೆ. ಪ್ರತಿಯೊಬ್ಬ ಯಶಸ್ವಿ ಪುರುಷ ಹಿಂದೆ ಮಹಿಳೆ ಇರುತ್ತಾಳೆ ಎಂದು ಹೇಳಿದ ಸಮಾಜದ ನೀತಿಯನ್ನು ಪ್ರಶ್ನಿಸಬೇಕಾಗುತ್ತದೆ. ಹಿಂದೆ ಇರುವ ಮಹಿಳೆ ಸಮಾನ ನೆಲೆಗೆ ಬರುವ, ತರುವ ಅನಿವಾರ್ಯತೆಯನ್ನು ತೋರಿಸಿಕೊಡುವಂತೆ ವಚನದ ಮೂಲಕ ತಮ್ಮ ಚಿಂತನೆಯನ್ನು ಅಭಿವ್ಯಕ್ತಿಪಡಿಸಿದ್ದಾಳೆ.

ಮಡಿ ಎನಲಾಗದು ಬಸವಂಗೆ ಎನ್ನನು
ಪುರುಷನೆನಲಾಗದು ಬಸವನ ಎನಗೆ
ಉಭಯದ ಕುಳದ ಹರಿದು ಬಸವಂಗೆ ಶಿಶುವಾದೆನು
ಬಸವನೆನ್ನ ಶಿಶುವಾದನು

ಗಂಡ–ಹೆಂಡತಿಯರಿಬ್ಬರು. ಪರಸ್ಪರ ಪೂರಕವೇ ವಿನಾ ಒಬ್ಬರಿಗೊಬ್ಬರು ಭಾರವಾಗಿ, ಶೋಷಕ ಶಕ್ತಿಯಾಗಿ ಜೀವನ ನಡೆಸಲಾಗದು ಎಂಬುದನ್ನು ಸ್ಪಷ್ಟಪಡಿಸಿದ್ದಾಳೆ.

ವೈರಾಗ್ಯಮೂರ್ತಿ ಅಲ್ಲಮಪ್ರಭುವಿನಂಥ ಶರಣ ಚಳವಳಿಯ ನೇತಾರರೂ ಕೆಲವು ಸಲ ವೈದಿಕ ಧರ್ಮದ ಸಾಮಾಜಿಕ ಮೌಲ್ಯಗಳನ್ನು ಮೀರಲು ಸಾಧ್ಯವಾಗದ ಮನಃಸ್ಥಿತಿಯಲ್ಲಿರುತ್ತಾರೆ. ಅನುಭವಮಂಟಪದಲ್ಲಿ ಎಲ್ಲರಿಗೂ ಮುಕ್ತ ಅವಕಾಶವಿತ್ತು. ಅದು ಶರಣಸಿದ್ಧಾಂತದಲ್ಲಿ ನಂಬುಗೆ ಇರುವವರೆಲ್ಲರಿಗೂ ಅನ್ವಯಿಸಿತ್ತು. ಆದರೆ ಅಕ್ಕಮಹಾದೇವಿ ಕುಟುಂಬದ ಬಂಧನವನ್ನು ಕಳಚಿಕೊಂಡು ಸಮುದಾಯದ ನೆಲೆಗೆ ಬರಲು ಆಶಿಸಿದಾಗ ಎದ್ದ ಪ್ರಶ್ನೆಗಳು ಇಂದಿಗೂ ಹೆಣ್ಣನ್ನು ಕಾಡುತ್ತಿವೆ. ಶರಣರ ನಿಲುವನ್ನು ನಂಬಿಕೊಂಡು ರಾಜ ಆಳ್ವಿಕೆ ಹಾಗೂ ಪುರುಷ ಆಳ್ವಿಕೆಯನ್ನು ಧಿಕ್ಕರಿಸಿ ಬಂದ ಅಕ್ಕಮಹಾದೇವಿಗೆ ಅನುಭವಮಂಟಪದಲ್ಲಿಯೂ ಮುಕ್ತ ಪ್ರವೇಶ ದೊರೆಯಲಿಲ್ಲ. ಪ್ರಭುದೇವರು ಸೇರಿದಂತೆ ಶರಣರು ತಮ್ಮ ಅನೇಕ ಪ್ರಶ್ನೆಗಳಿಗೆ ಉತ್ತರ ನೀಡಿ ಪ್ರವೇಶ ಪಡೆಯಲು ಅಕ್ಕ ಯಶಸ್ವಿಯಾದುದು ಆಕೆಯ ಘನವ್ಯಕ್ತಿತ್ವಕ್ಕೆ ಭಾಷ್ಯ ಬರೆದಂತಿದೆ.

ಉದಮದದ ಯೌವನವನ್ನೊಳಗೊಂಡ ಸತಿ
ನೀನು ಇತ್ತಲೇಕೆ ಬಂದೆಯವ್ವಾ?
ಸತಿ ಎಂದಡೆ ಮುನಿವರು ನಮ್ಮ ಶರಣರು
ನಿನ್ನ ಪತಿಯ ಕುರುಹ ಹೇಳಿದಡೆ ಬಂದು ಕುಳ್ಳಿರು
ಅಲ್ಲದಡೆ ತೊಲಗು ತಾಯೆ
ನಮ್ಮ ಮಹೇಶ್ವರನ ಶರಣರಲ್ಲಿ
ಸಂಗಸುಖ ಸನ್ನಿಹಿತವ ಬಯಸುವಡೆ
ನಿನ್ನ ಪತಿ ಯಾರೆಂಬುದ ಹೇಳು ಎಲೆ ಅವ್ವಾ!

ಎಂದು ಅಕ್ಕನನ್ನು ಪ್ರಶ್ನಿಸುತ್ತಾರೆ. ಪ್ರಭುವಿನಂಥವರಿಗೂ ಪುರುಷಪ್ರಧಾನ ಸಂಸ್ಕೃತಿಯಲ್ಲಿ ಗಂಡನಿಗೆ ಇದ್ದ ಗೌರವವನ್ನು ನಿರಾಕರಿಸಲು ಆಗಿಲ್ಲ. ಅಕ್ಕಮಹಾದೇವಿಯ ಮುಂದೆ ಪ್ರಭುದೇವರು ಎತ್ತಿದ ಪ್ರಶ್ನೆಗಳು ಆಗಿನ ಕಾಲದಲ್ಲಿ ಪ್ರಸ್ತುತವಾಗಿತ್ತೇ ಎಂಬುದು ಚಿಂತನೆ ಮಾಡುವಂತಹದು. ಮನು ಹೇಳಿದಂತೆ ಹೆಣ್ಣನ್ನು ಬಾಲ್ಯದಲ್ಲಿ ತಂದೆಯ, ಯೌವನದಲ್ಲಿ ಗಂಡನ, ಮುಪ್ಪಿನಲ್ಲಿ ಗಂಡುಮಕ್ಕಳ ಆಶ್ರಯ – ಇವುಗಳಿಂದ ಗುರುತಿಸುವ ರೀತಿಯನ್ನು ಮೀರಲು ಆಗಿಲ್ಲ. ಬಹುಶಃ ಅಕ್ಕಮಹಾದೇವಿಯ ಮಾನಸಿಕ ದೃಢತೆಯನ್ನು ಒರೆಹಚ್ಚಿ ಲೋಕಕ್ಕೆ ಆಕೆಯ ವ್ಯಕ್ತಿತ್ವವನ್ನು ಪರಿಚಯ ಮಾಡಿಕೊಡುವ ಉದ್ದೇಶದಿಂದಲೇ ಪ್ರಭುವಿನಂಥ ಶರಣರು ಪ್ರಯತ್ನಿಸಿರಬೇಕು ಎಂಬುದನ್ನು ಅಲ್ಲಗಳೆಯುವಂತಿಲ್ಲ.

ಇವತ್ತಿನ ಕಾಲಮಾನದಲ್ಲಿ ಮಹಿಳೆಯ ಬಿಡುಗಡೆಯನ್ನು ಸ್ವತಃ ಮಹಿಳೆಯರೇ ಬಯಸಬೇಕು ಮತ್ತು ಅವರೇ ಬಿಡುಗಡೆ ಪಡೆಯಬೇಕೆಂಬ ಮಾತು ಹೆಚ್ಚು ವಾಸ್ತವವಾದದ್ದು. ಶತಶತಮಾನಗಳಿಂದ ನೆಲವನ್ನು ನೋಡಿಕೊಂಡು ಬಂದ ಹೆಣ್ಣು ಧೈರ್ಯದಿಂದ ತಲೆ ಎತ್ತಿ ನಿಲ್ಲಲು, ನೋಡುವಂತಾಗಲು ಶತಶತಮಾನಗಳೇ ಉರುಳಿಹೋದುವು. ಆಕೆ ಈ ಸುದೀರ್ಘ ಕಾಲಾವಧಿಯಲ್ಲಿ ಯಾತನೆ, ಅವಮಾನಗಳನ್ನು ಸಹಿಸಿಕೊಂಡೇ ಬಂದವಳು. ಆಕೆಯ ಸ್ವಾಭಿಮಾನ ಜಾಗೃತವಾಗಿ ಪ್ರತಿಭಟಿಸಲು ಸಾಧ್ಯವಾದದ್ದು 12ನೇ ಶತಮಾನದಲ್ಲಿ ಶರಣರು ನೀಡಿದ ವಾಕ್‌ಸ್ವಾತಂತ್ರ್ಯ ಹಾಗೂ ಅವರು ಮೂಡಿಸಿದ ಅರಿವಿನಿಂದ ಎಂಬುದನ್ನು ಇಲ್ಲಿ ಮುಖ್ಯವಾಗಿ ಗಮನಿಸಬೇಕು. ಈ ಸಂದರ್ಭದಲ್ಲಿ ಶರಣೆ ಅಮುಗೆಯ ರಾಯಮ್ಮ ತನ್ನ ಚಿಂತನೆಗಳನ್ನು ವಚನದ ಮೂಲಕ ಅಭಿವ್ಯಕ್ತಪಡಿಸಿದ್ದಾಳೆ.

ಎನ್ನ ಕಣ್ಣೊಳಗಣ ಕಟ್ಟಿಗೆಯ ಮುರಿದವರನಾರನೂ ಕಾಣೆ
ಎನ್ನ ಕಾಲೊಳಗಣ ಮುಳ್ಳ ತೆಗೆದವರನಾರನೂ ಕಾಣೆ
ಎನ್ನ ಅಂಗದಲ್ಲಿದ್ದ ಅಹಂಕಾರವ ಸುಡುವವರನಾರನೂ ಕಾಣೆ
ಎನ್ನ ಮನದಲ್ಲಿದ್ದ ಮಾಯಾಪ್ರಪಂಚುವ
ಕೆಡಿಸುವವರನಾರನೂ ಕಾಣೆನಯ್ಯಾ
ಆದ್ಯರ ವೇದ್ಯರ ವಚನಂಗಳಿಂದ
ಅರಿದೆನೆಂಬುವರು ಅರಿಯಲಾರರು ನೋಡಾ
ಎನ್ನ ಕಣ್ಣೊಳಗಣ ಕಟ್ಟಿಗೆಯ ನಾನೆ ಮುರಿಯಬೇಕು
ಎನ್ನ ಕಾಲೊಳಗಣ ಮುಳ್ಳ ನಾನೆ ತೆಗೆಯಬೇಕು

ಎನ್ನ ಅಂಗದಲ್ಲಿದ್ದ ಅಹಂಕಾರವ ನಾನೇ ಸುಡಬೇಕು
ಎನ್ನ ಮನದಲ್ಲಿದ್ದ ಮಾಯಾಪ್ರಪಂಚುವ ನಾನೇ ಕಳೆಯಬೇಕು
ಅಮುಗೇಶ್ವರ ಲಿಂಗವ ನಾನೇ ಅರಿಯಬೇಕು

ಬಿಡುಗಡೆಯಾಗಬಯಸುವರೆಲ್ಲರೂ ಅರಿವಿನ ಹಿನ್ನೆಲೆಯಿಂದ ಮೇಲೆದ್ದರೆ ಅದಕ್ಕೊಂದು ಅರ್ಥ ಬರುತ್ತದೆ ಎಂಬುದನ್ನು ವಾಸ್ತವ ನೆಲೆಗಟ್ಟಿನಲ್ಲಿ ನಿಂತು ಅಮುಗೆ ರಾಯಮ್ಮ ಹೇಳಿರುವುದು ಅರ್ಥಪೂರ್ಣವಾಗಿರುವುದಲ್ಲದೆ, ಚಿಂತನೆಗೆ ಒಳಗು ಮಾಡುವಂತಿದೆ. ಈ ಹಿನ್ನೆಲೆಯಿಂದ ನೋಡಿದಾಗ ಬಸವಾದಿ ಶರಣರು ನಡೆಸಿದ ಚಳವಳಿ ಬರೀ ಭಕ್ತಿ ಚಳವಳಿಯಲ್ಲ, ಅದೊಂದು ಸಾಮಾಜಿಕ ಸುಧಾರಣೆಯ, ಆರ್ಥಿಕ ಚಿಂತನೆಯ, ರಾಜಕೀಯ ಪರಿಕಲ್ಪನೆಯ ಮೂಲದಿಂದ ಹೊರಟ ಚಳವಳಿ ಎಂಬುದರಲ್ಲಿ ಎರಡು ಮಾತಿಲ್ಲ. ಹನ್ನೆರಡನೆಯ ಶತಮಾನದಲ್ಲಿಯ ಸಮಾಜವು ಧರ್ಮ ಮತ್ತು ಪ್ರಭುತ್ವದಿಂದ ನಿಯಂತ್ರಿಸಲ್ಪಡುತ್ತಿತ್ತು. ಅಂತಹ ಪರಿಸ್ಥಿತಿಯಲ್ಲಿ ಬದಲಾವಣೆ ಬಯಸುವ ಯಾವುದೇ ಶಕ್ತಿ, ಸಂಘಟನೆ, ಚಳವಳಿಗಳು ಧರ್ಮ ಮತ್ತು ಪ್ರಭುತ್ವದ ಮೂಲದಿಂದಲೇ ಪ್ರಾರಂಭವಾಗಬೇಕಾಗಿತ್ತು. ಶರಣರು ಧಾರ್ಮಿಕ ಮೂಲದಿಂದಲೇ ಸುಧಾರಣೆ ತಂದವರು, ಸ್ತ್ರೀಯರಿಗೆ ಸಂಬಂಧಿಸಿದಂತೆ ಅತ್ಯಂತ ವೈಚಾರಿಕ, ವಾಸ್ತವಿಕ ಗ್ರಹಿಕೆಯ ಹಿನ್ನೆಲೆಯಿಂದ, ಮುಕ್ತ ಮನಸ್ಸಿನಿಂದ ಮಾತನಾಡಿದವರೆಂದರೆ ಬಸವಾದಿ ಶರಣರು. ಶರಣರ ಸ್ತ್ರೀಪರ ಧೋರಣೆ, ಕಾಳಜಿ ಇಂದಿನ ಸ್ತ್ರೀಚಳವಳಿಗೆ ಮಾರ್ಗಸೂಚಿಯಾದರೆ ನಾವು ಹೊರಟ ಹಾದಿ ಅರ್ಥ ಪಡೆದುಕೊಳ್ಳುವುದರಲ್ಲಿ ಸಂದೇಹವಿಲ್ಲ.

ಆಧುನಿಕ ಯುಗದಲ್ಲಿ ಮಹಿಳೆ ಬರೀ ಕೇವಲ ಕುಟುಂಬಕ್ಕೆ ಮಾತ್ರ ಸೀಮಿತವಾಗಿರದೆ ಕುಟುಂಬದ ಹೊರಗೂ ದುಡಿಯಲು ಮುಂದಾಗಿದ್ದಾಳೆ. ಸಮಾಜದ ಎಲ್ಲ ಕ್ಷೇತ್ರಗಳಲ್ಲಿಯೂ ತೊಡಗಿಸಿಕೊಳ್ಳುತ್ತಿರುವ ಮಹಿಳೆ ತನ್ನ ಗೃಹಿಣಿ ಜೀವನದೊಂದಿಗೆ ಹೊರಜಗತ್ತಿನ ಚಟುವಟಿಕೆಗಳಲ್ಲೂ ತೊಡಗಿಕೊಳ್ಳುವ ಅನಿವಾರ್ಯತೆ ಹೆಚ್ಚಾಗಿದೆ. ಆಕೆ ಒಳಗೂ, ಹೊರಗೂ ದುಡಿಯುತ್ತಾ ಹಲವು ರೀತಿಯ ಸಮಸ್ಯೆಗಳನ್ನು ಎದುರಿಸುತ್ತಿದ್ದಾಳೆ. ಉದ್ಯೋಗಸ್ಥ ಮಹಿಳೆ ಒತ್ತಡಕ್ಕೆ ಸಿಲುಕಿದ್ದು, ಇದರಿಂದ ಆಕೆಗೆ ನೆಮ್ಮದಿ ಇಲ್ಲದಂತಾಗಿದೆ. ದುಡಿಮೆಯಿಂದ ಮಹಿಳೆಗೆ ಹಾಗೂ ಕುಟುಂಬಕ್ಕೆ ಹೆಚ್ಚಿನ ಆರ್ಥಿಕ ಭದ್ರತೆಯೂ ದೊರಕಬೇಕು. ಇಂತಹ ಇಕ್ಕಟ್ಟಿನ ಪರಿಸ್ಥಿತಿಯಿಂದ ತತ್ತರಿಸುವ ಆಕೆ ಕುಟುಂಬ ಧರ್ಮವನ್ನು ಸಂಕುಚಿತಗೊಳಿಸಲು, ಸಾಮಾಜಿಕ ಸಂಬಂಧವನ್ನು ಕಡಿದುಹಾಕಲು ಸಿದ್ಧಳಿಲ್ಲ. ಇದರಿಂದ ನಮಗರಿವಿಲ್ಲದೆಯೇ ಸಾಮಾಜಿಕ ಮೌಲ್ಯಗಳು ಕುಸಿಯುತ್ತಿವೆ. ಇಂಥಹ ಸಂದಿಗ್ಧ ಪರಿಸ್ಥಿತಿಯಲ್ಲಿ ಪುರುಷರ ಹೃದಯವೈಶಾಲ್ಯ, ಸಹಭಾಗಿತ್ವ ಮುಖ್ಯವಾಗುತ್ತವೆ. ಶರಣ ಜೇಡರ ದಾಸಿಮಯ್ಯನವರು ಹೇಳಿರುವಂತೆ "ಸತಿಪತಿಗಳೊಂದಾದ ಭಕ್ತಿ ಹಿತವಪ್ಪುದು ಶಿವಂಗೆ" ಎಂಬ ಸಂದೇಶವನ್ನು ಜೀವನದಲ್ಲಿ ಅಳವಡಿಸಿಕೊಂಡು ಮುನ್ನಡೆದರೆ ಸುಖ, ಶಾಂತಿ, ನೆಮ್ಮದಿ ನಮ್ಮದಾಗುತ್ತದೆ.

□

# ಕೇತಹಳ್ಳಿ ಗ್ರಾಮದೇವತೆ

**ಕೆ.ಎಸ್. ಮಹದೇವಪ್ರಸಾದ್**

ಭಾರತ ದೇಶದಲ್ಲಿ ಗ್ರಾಮಗಳ ಇತಿಹಾಸವು ಬಹಳ ಮಹತ್ವವನ್ನು ಹೊಂದಿರುತ್ತದೆ. ಏಕೆಂದರೆ, ಇದು ನಮ್ಮ ಸಂಸ್ಕೃತಿ, ಪರಂಪರೆ ಮತ್ತು ಸಾಮಾಜಿಕ ವ್ಯವಸ್ಥೆಯನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತದೆ. ಗ್ರಾಮಗಳ ಇತಿಹಾಸದ ಮೂಲಕ ಅಲ್ಲಿನ ಸಂಪ್ರದಾಯಗಳು, ಹಬ್ಬಗಳು ಮತ್ತು ಜನರ ಜೀವನಶೈಲಿಯನ್ನು ಕುರಿತು ತಿಳಿದುಕೊಳ್ಳಬಹುದು. ವೈವಿಧ್ಯತೆಗೆ ಹೆಸರುವಾಸಿಯಾಗಿರುವಂತಹ ನಮ್ಮ ದೇಶದಲ್ಲಿ ಪ್ರತಿ ಮೈಲಿಗೂ ಜನರು ಬದುಕುವ ಶೈಲಿ, ಆಚರಣೆಗಳ ಪದ್ಧತಿ, ಆರಾಧಿಸುವ ದೈವ ಮತ್ತು ಆಹಾರ ಪದ್ಧತಿಗಳು ವಿಭಿನ್ನವಾಗಿರುತ್ತವೆ. ಇಂತಹ ವೈವಿಧ್ಯತೆಯನ್ನು ಹೊಂದಿರುವ ದೇಶದಲ್ಲಿ ಹುಟ್ಟಿರುವ ನಾವು ಕನಿಷ್ಠಪಕ್ಷ ನಾವು ಹುಟ್ಟಿ ಬೆಳೆದಿರುವ ಸ್ಥಳದ ಬಗ್ಗೆ ಅಲ್ಪ ಪ್ರಮಾಣದ ಮಾಹಿತಿಯನ್ನು ತಿಳಿದುಕೊಳ್ಳಬೇಕಾದುದು ಅವಶ್ಯಕ. ಇದಕ್ಕೆ ಪೂರಕವಾಗಿ ನಾನು ಹುಟ್ಟಿ ಬೆಳೆದಿರುವಂತಹ ಗ್ರಾಮವಾದ ಕೇತಹಳ್ಳಿಯ ಇತಿಹಾಸ ಮತ್ತು ನಮ್ಮೂರ ಗ್ರಾಮದೇವತೆಯಾದ ಶ್ರೀ ಹೊನ್ನಾದೇವಿ ಅಮ್ಮನವರ ದೇವಸ್ಥಾನದ ಇತಿಹಾಸ ಹಾಗೂ ಆಚರಣೆಗಳ ಬಗ್ಗೆ ತಿಳಿಸಿಕೊಡುವ ಒಂದು ಸಣ್ಣ ಪ್ರಯತ್ನ ಇದಾಗಿದೆ.

ಮೊದಲಿಗೆ ಕೇತಹಳ್ಳಿ ಗ್ರಾಮವನ್ನು ಭೂಪಟದಲ್ಲಿ ಗುರುತಿಸುವುದಾದರೆ, ಇದು ಹಳೆ ಮೈಸೂರು ಭಾಗದಲ್ಲಿ ಈಗಿನ ಚಾಮರಾಜನಗರ ಜಿಲ್ಲೆ ಮತ್ತು ತಾಲ್ಲೂಕಿನಲ್ಲಿ ಇರುವ ಹರವೆ ಹೋಬಳಿ ವ್ಯಾಪ್ತಿಗೆ ಸೇರಿದ ಒಂದು ಪುಟ್ಟ ಗ್ರಾಮ. ನಮ್ಮ ಗ್ರಾಮ ಎಷ್ಟು ಪುಟ್ಟ ಗ್ರಾಮವೆಂದು ಸಂಖ್ಯಾಬಲದಲ್ಲಿ ನೋಡುವುದಾದರೆ ಈ ಗ್ರಾಮವು ಕೇವಲ ನಾಲ್ಕು ಎಕರೆ ಜಾಗದಲ್ಲಿ ವ್ಯಾಪಿಸಿದೆ. ಇಲ್ಲಿ ಸುಮಾರು 120 ಮನೆಗಳಿವೆ; ಸುಮಾರು 500 ರಿಂದ 600 ಜನಸಂಖ್ಯೆ ಇದೆ. ಇಲ್ಲಿನ 99% ಜನರು ಜೀವನೋಪಾಯಕ್ಕಾಗಿ ವ್ಯವಸಾಯವನ್ನು ಅವಲಂಬಿಸಿದ್ದಾರೆ. ತೆಂಗು, ಬಾಳೆ, ತರಕಾರಿಗಳು, ರೇಷ್ಮೆ ಮತ್ತು ಹೈನುಗಾರಿಕೆ ಮೊದಲಾದುವು ಪ್ರಮುಖ ಕೃಷಿ ಚಟುವಟಿಕೆಗಳಾಗಿರುತ್ತವೆ. ಗ್ರಾಮಕ್ಕೆ ಜೀವನಾಡಿಗಳಾಗಿ ಎರಡು ಕೆರೆಗಳಿವೆ. ಅವುಗಳಲ್ಲಿ ಒಂದು ನೈಸರ್ಗಿಕವಾಗಿ ನಿರ್ಮಿತಗೊಂಡಿರುವ ಕ್ಯಾತನಕಟ್ಟೆ ಎಂಬ ಕೆರೆ. ಇನ್ನೊಂದು ಸುಮಾರು ಒಂದು ದಶಕಗಳ ಹಿಂದೆ ಸರ್ಕಾರದ ಸಹಾಯದಿಂದ ನಿರ್ಮಿಸಲ್ಪಟ್ಟ ಕೆರೆ. ಈ ಕೆರೆ ಹೊನ್ನಾದೇವಿ ದೇವಸ್ಥಾನದ ಹಿಂಬದಿಯಲ್ಲಿದೆ. ಈ ಎರಡು ಕೆರೆಗಳಿಂದ ಗ್ರಾಮದ ಅಂತರ್ಜಲ ಸುಭಿಕ್ಷೆಯಿಂದ ಕೂಡಿದ್ದು, ಕುಡಿಯುವ ನೀರಿಗಾಗಲಿ,

ಕೃಷಿ ಚಟುವಟಿಕೆಗಾಗಲಿ ಯಾವುದೇ ರೀತಿಯ ತೊಂದರೆ ಇರುವುದಿಲ್ಲ. ಇದಿಷ್ಟು ಪ್ರಸ್ತುತ ಕೇತುಹಳ್ಳಿ ಗ್ರಾಮದ ಸದ್ಯದ ಚಿತ್ರಣ.

ಇಂತಹ ಚಿಕ್ಕ ಗ್ರಾಮದ ಇತಿಹಾಸವನ್ನು ನೋಡುವುದಾದರೆ, ಆಶ್ಚರ್ಯವೆಂಬಂತೆ ಇದಕ್ಕೆ ಸುಮಾರು 600 ವರ್ಷಗಳ ಇತಿಹಾಸವಿದೆ. ಇದಕ್ಕೆ ಸಾಕ್ಷಿ ಎಂದರೆ ಗ್ರಾಮದಲ್ಲಿರುವ ಎರಡು ಕಲ್ಲಿನ ಶಾಸನಗಳು. ಮೊದಲನೇ ಶಾಸನವು 1452ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟಿದೆ. ಈ ಶಾಸನದಲ್ಲಿ ಕೇತಹಳ್ಳಿ ಗ್ರಾಮವನ್ನು ದಾನವಾಗಿ ಅಥವಾ ಇನಾಮಾಗಿ ಕೊಟ್ಟಿರುವ ಬಗ್ಗೆ ಉಲ್ಲೇಖಿಸಲಾಗಿದೆ. ವಿಜಯನಗರ ಸಾಮ್ರಾಜ್ಯದ ಆಳ್ವಿಕೆಗೆ ಒಳಪಟ್ಟಿದ್ದ ಸಮಯದಲ್ಲಿ ರಾಜಪ್ರತಿನಿಧಿಯಾಗಿದ್ದ ಮಲ್ಲಪ್ಪನಾಯಕ ಎಂಬುವವರು ತಗಡೂರಿನ ನಾಯಕನಾಗಿದ್ದ ಚಿಕ್ಕಮಲ್ಲ ಒಡೆಯನೆಂಬುವನಿಗೆ ಆತನ ನಾಯಕತ್ವವನ್ನು ಮೆಚ್ಚಿ ಈ ಗ್ರಾಮವನ್ನು ದಾನವಾಗಿ ಕೊಟ್ಟಿರುತ್ತಾರೆ.

ಇನ್ನು ಎರಡನೇ ಶಾಸನವು 1590ರಲ್ಲಿ ಸ್ಥಾಪಿಸಲ್ಪಟ್ಟಿದೆ. ಈ ಶಾಸನದಲ್ಲಿಯೂ ಕೂಡ ದಾನದ ಬಗ್ಗೆ ಉಲ್ಲೇಖವಿದೆ. ಆ ಕಾಲಘಟ್ಟದಲ್ಲಿ ಮೈಸೂರು ಸಾಮ್ರಾಜ್ಯದ ರಾಜಮಾತೆಯಾಗಿದ್ದ ಅಮೃತಮ್ಮನವರು ಈ ಕೇತಹಳ್ಳಿ ಗ್ರಾಮವನ್ನು ಒಳಗೊಂಡಂತೆ ಹಲವು ಗ್ರಾಮಗಳನ್ನು ಆಗ ತಾನೇ ನೂತನವಾಗಿ ನಿರ್ಮಿಸಿದ್ದಂತಹ ಮಹಂತಿನ ಸಂಸ್ಥೆಗೆ ದಾಸೋಹಕಾರ್ಯಕ್ಕೆ ಸಹಾಯವಾಗಲೆಂದು ದಾನ ಮಾಡಿರುತ್ತಾರೆ. ಅಂದರೆ, ದಾನವಾಗಿ ಕೊಟ್ಟಿದ್ದ ಗ್ರಾಮಗಳಲ್ಲಿ ಸಂಗ್ರಹವಾಗುವ ತೆರಿಗೆಯನ್ನು ಸಂಸ್ಥೆಯ ದಾಸೋಹಕಾರ್ಯಕ್ಕೆ ಉಪಯೋಗಿಸಲಾಗುತ್ತಿತ್ತು. ಆಗಿನ ಮಹಂತಿನ ಸಂಸ್ಥೆ ಈಗಿನ ಬೆಂಗಳೂರಿನ ಚಿಕ್ಕಪೇಟೆಯಲ್ಲಿರುವ ಮಹಾಂತನ ಮಠವಾಗಿರಬಹುದು. ಒಟ್ಟಿನಲ್ಲಿ ಈ ಎರಡು ಶಾಸನಗಳು ಕೇತಹಳ್ಳಿ ಎಂಬ ಪುಟ್ಟ ಗ್ರಾಮವು 600 ವರ್ಷಗಳ ಹಿಂದೆ ಅಸ್ತಿತ್ವದಲ್ಲಿ ಇದ್ದು ಸಾಕ್ಷಿಯಾಗಿ ನಿಂತಿದೆ. ಈ ಕುರುಹುಗಳನ್ನು ಹೊರತುಪಡಿಸಿದರೆ ಸುಮಾರು ಮೂರು ದಶಕಗಳ ಹಿಂದೆ ಗ್ರಾಮದ ಅಂಕಸ್ಥಾಪನೆಯ ಅಂಗವಾಗಿ ಶಿಲಾಶಾಸನ ನಿಲ್ಲಿಸಿರುವುದನ್ನು ಕಾಣಬಹುದು. ಇದಿಷ್ಟು ಕೇತಹಳ್ಳಿ ಗ್ರಾಮದ ಇತಿಹಾಸಕ್ಕೆ ಇರುವ ಲಿಖಿತ ರೂಪದ ದಾಖಲೆ.

ಈ ಗ್ರಾಮದ ದೇವತೆಯಾಗಿ ನೆಲೆಸಿರುವ ಶ್ರೀ ಹೊನ್ನಾದೇವಿ ಅಮ್ಮನ ದೇವಸ್ಥಾನದ ಇತಿಹಾಸವನ್ನು ನೋಡುವುದಕ್ಕಿಂತ ಮುಂಚೆ ಹೊನ್ನಾದೇವಿಯ ಬಗ್ಗೆ ಒಂದು ಸಣ್ಣ ಕಿರು ಪರಿಚಯ ಮಾಡಬೇಕಾಗಿದೆ. ನಮ್ಮೆಲ್ಲರಿಗೂ ತಿಳಿದಿರುವ ಹಾಗೆ ಹೊನ್ನಾದೇವಿ ಪಾರ್ವತಿಯ ಒಂದು ಅವತಾರ. 'ಹೊನ್ನಾ' ಎಂಬ ಪದದ ಅರ್ಥ ಹೊನ್ನು ಅಥವಾ ಚಿನ್ನವೆಂಬುದನ್ನು ಸೂಚಿಸುತ್ತದೆ. ಇಲ್ಲಿ ಚಿನ್ನವೆಂದರೆ ಆಭರಣಗಳನ್ನು ಮಾಡುವ ಲೋಹವಲ್ಲ. ಚಿನ್ನವೆಂಬುದು ಸಮೃದ್ಧಿಯ ಸಂಕೇತ 'ಸಮೃದ್ಧಿ' ಎಂದರೆ ಕಾಲಕಾಲಕ್ಕೆ ಮಳೆಯಾಗುವುದು, ಬೆಳೆಯಾಗುವುದು, ಕೆರೆಕಟ್ಟೆಗಳು ತುಂಬಿ ಸಂತೋಷದಿಂದ ಬದುಕುವುದು. ಇಂತಹ ಸಮೃದ್ಧಿಯನ್ನು ಹೊಂದಲು ಗ್ರಾಮದ ಜನರು ದೇವರ ಮೊರೆ

ಹೋಗುತ್ತಿದ್ದರು ಮತ್ತು ಬೇಡಿಕೊಳ್ಳುತ್ತಿದ್ದರು. ಅಂತಹ ಸಮೃದ್ಧಿಯನ್ನು, ಜನರ ಹಿತಾಸಕ್ತಿಯನ್ನು, ಅವರ ಬೇಡಿಕೆಗಳನ್ನು ಈಡೇರಿಸುವ ನೂರಾರು ದೇವರುಗಳಲ್ಲಿ ಶ್ರೀ ಹೊನ್ನಾದೇವಿಯೂ ಪ್ರಮುಖ ದೇವತೆ. ಕರ್ನಾಟಕದಲ್ಲಿ ಸುಮಾರು 9 ರಿಂದ 10 ಹೊನ್ನಾದೇವಿಯ ದೇವಸ್ಥಾನಗಳು ಕಾಣಸಿಗುತ್ತವೆ. ವಿಶೇಷವೆಂದರೆ ಈ ಎಲ್ಲಾ ದೇವಸ್ಥಾನಗಳು ದಕ್ಷಿಣ ಕರ್ನಾಟಕದಲ್ಲೇ ಇದೆ. ಚಾಮರಾಜನಗರ ಜಿಲ್ಲೆಯಲ್ಲಿ ಸಿಗುವ ಏಕೈಕ ಹೊನ್ನಾದೇವಿ ದೇವಸ್ಥಾನವೆಂದರೆ ಅದು ಕೇತಹಳ್ಳಿ ಗ್ರಾಮದಲ್ಲಿ ಇರುವುದು. ಇದನ್ನು ಹೊರತುಪಡಿಸಿ ಮೈಸೂರು ಮತ್ತು ತುಮಕೂರು ಜಿಲ್ಲೆಗಳಲ್ಲಿ ಬರುವ ಸೋಸಲೆ, ನಾಗಮಂಗಲ, ಕೊರಟಗೆರೆ, ಮಾಗಡಿ ಮತ್ತು ಯಡಿಯೂರು ಗ್ರಾಮಗಳಲ್ಲಿ ಅಥವಾ ಗ್ರಾಮಗಳ ಆಸುಪಾಸಿನಲ್ಲಿ ಹೊನ್ನಾದೇವಿ ದೇವಸ್ಥಾನವನ್ನು ನೋಡಬಹುದು. ವಿಷಾದಕರ ಸಂಗತಿ ಎಂದರೆ ಕೇತಹಳ್ಳಿ ಗ್ರಾಮದಲ್ಲಿ ಇರುವ ಹೊನ್ನಾದೇವಿ ದೇವಸ್ಥಾನಕ್ಕೆ ಯಾವುದೇ ರೀತಿಯ ಲಿಖಿತ ದಾಖಲೆಗಳು ಕಂಡುಬಂದಿಲ್ಲ. ಆದರೆ ಗ್ರಾಮದ ಹಿರಿಯರು ತಮ್ಮ ಪೂರ್ವಜರು ಮೌಖಿಕವಾಗಿ ಹೇಳಿರುವ ಮಾಹಿತಿಗಳನ್ನು ಗಮನಿಸಿದರೆ ಕೇತಹಳ್ಳಿ ಗ್ರಾಮದ ಹೊನ್ನಾದೇವಿ ದೇವಸ್ಥಾನಕ್ಕೆ ಅಂದಾಜು 150 ರಿಂದ 200 ವರ್ಷಕ್ಕೂ ಹಿಂದಿನ ಇತಿಹಾಸ ಇರಬಹುದು.

ಗ್ರಾಮದ ಹಿರಿಯರು ಹೇಳುವ ಪ್ರಕಾರ, ಮೊದಮೊದಲು ಒಂದು ಬೇವಿನ ಮರದ ಕೆಳಗೆ ಮೂರ್ತಿರೂಪದಲ್ಲಿ ನೆಲೆಸಿದ್ದ ಹೊನ್ನಾದೇವಿಗೆ ಪೂಜೆ–ಪುರಸ್ಕಾರಗಳು ಸಲ್ಲುತ್ತಿದ್ದವು. ನಂತರ ದಿನಗಳಲ್ಲಿ ತೆಂಗಿನಗರಿಯಿಂದ ಒಂದು ಗುಡಿಸಲನ್ನು ನಿರ್ಮಿಸಲಾಗಿತ್ತು. ಕಾಲಕ್ರಮೇಣ ಮಣ್ಣಿನ ಗೋಡೆ ಕಟ್ಟಿ ಕೈಹೆಂಚಿನಿಂದ ಗುಡಿಯನ್ನು ಕಟ್ಟಲಾಯಿತು. ಅನಂತರ ಆಧುನಿಕತೆಗೆ ತಕ್ಕಂತೆ 1962ರಲ್ಲಿ ಸೀಮೆಹಂಚಿನಿಂದ ಕಟ್ಟಲಾಯಿತು. ಅಲ್ಲಿಂದ ಇಲ್ಲಿಯವರೆಗೂ ಅಂದರೆ 1962 ರಿಂದ 2026ರವರೆಗೂ ಸುಮಾರು 64 ವರ್ಷಗಳ ಕಾಲ ಹೊನ್ನಾದೇವಿಗೆ ಆ ಒಂದು ಮಣ್ಣಿನ ಗೋಡೆ ಸೀಮೆ ಹೆಂಚಿನಿಂದ ನಿರ್ಮಿತವಾದ ಗುಡಿಯಲ್ಲಿ ಪೂಜೆ ಸಲ್ಲುತ್ತಿದೆ.

2023 ಮಾರ್ಚ್ ತಿಂಗಳ ಆಸುಪಾಸಿನಲ್ಲಿ ಕೇತಹಳ್ಳಿ ಗ್ರಾಮದ ಹಿರಿಯರು ಮತ್ತು ಯುವ ಜನಾಂಗವು ದೇವಸ್ಥಾನವನ್ನು ಮರುನಿರ್ಮಾಣ ಮಾಡಲು ಐತಿಹಾಸಿಕ ನಿರ್ಣಯವನ್ನು ತೆಗೆದುಕೊಂಡರು. ಕಳೆದ ಮೂರು ವರ್ಷಗಳಿಂದ ಶ್ರಮ ದಾನಿಗಳ ಸಹಾಯ, ಗುರುಗಳ ಆಶೀರ್ವಾದ, ಭಕ್ತವೃಂದದ ಕೊಡುಗೆ ಮತ್ತು ತಾಯಿ ಹೊನ್ನಾದೇವಿಯ ಕೃಪೆಯಿಂದ ಅತ್ಯಂತ ಭವ್ಯವಾದ ದೇವಸ್ಥಾನವನ್ನು ನಿರ್ಮಿಸಲಾಯಿತು. ಹೊಸದಾಗಿ ನಿರ್ಮಾಣಗೊಂಡ ದೇವಸ್ಥಾನದ ಉದ್ಘಾಟನೆಯನ್ನು 21 ಮತ್ತು 22ನೇ ಫೆಬ್ರವರಿ 2026ರಂದು ವಿಜೃಂಭಣೆಯಿಂದ ನೆರವೇರಿಸಲಾಯಿತು. ಸಮಾರಂಭದ ಅಂಗವಾಗಿ ಏರ್ಪಡಿಸಿದ್ದ ಧಾರ್ಮಿಕ ಸಭೆಯಲ್ಲಿ ಕರ್ನಾಟಕದ ವಿವಿಧ ಭಾಗಗಳಿಂದ

ಆಗಮಿಸಿದ್ದ ಹರಗುರುಚರಮೂರ್ತಿಗಳು ಭಾಗವಹಿಸಿ ಆಶೀರ್ವದಿಸಿದರು. ಒಂದು ವಿಶೇಷವೆಂದರೆ, ಅಂದಿನ ಧಾರ್ಮಿಕ ಸಭೆಯ ದಿವ್ಯ ಸಾನ್ನಿಧ್ಯವನ್ನು ವಹಿಸಿಕೊಂಡಿದ್ದ ಮತ್ತು ಮೂರು ದಶಕಗಳ ಹಿಂದೆ ಇದೇ ಗ್ರಾಮದಲ್ಲಿ ನಡೆದ ಅಂಕಸ್ಥಾಪನೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿಕೊಂಡಿದ್ದವರು ಒಬ್ಬರೇ. ಅವರೇ ಸುತ್ತೂರು ಶ್ರೀಕ್ಷೇತ್ರದ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು. ಈ ಪುಟ್ಟ ಗ್ರಾಮದಲ್ಲಿ ಮೂರು ದಶಕಗಳ ಅಂತರದಲ್ಲಿ ನಡೆದಿರುವ ಬಹು ದೊಡ್ಡ ಧಾರ್ಮಿಕ ಸಭೆಯಲ್ಲಿ ಪೂಜ್ಯರು ಭಾಗವಹಿಸಿ ಆಶೀರ್ವದಿಸಿದ್ದು ಕೇತಹಳ್ಳಿ ಗ್ರಾಮಸ್ಥರ ಸೌಭಾಗ್ಯವೇ ಆಗಿತ್ತು. ಪೂಜ್ಯರು. ಗ್ರಾಮದ ಮೇಲೆ ವಿಶೇಷ ಪ್ರೀತಿ, ಕಾಳಜಿ ಹೊಂದಿದ್ದಾರೆ ಎಂಬುದಕ್ಕೆ ಇದು ನಿದರ್ಶನ. ಲಕ್ಷಾಂತರ ಹಳ್ಳಿಗಳು ಕರ್ನಾಟಕದಲ್ಲಿ ಇದ್ದರೂ ಕೂಡ ಕೇತಹಳ್ಳಿ ಎಂಬ ಒಂದು ಸಣ್ಣ ಗ್ರಾಮವನ್ನು ಮಾದರಿ ಗ್ರಾಮವನ್ನಾಗಿ ಮಾಡಲು 2010ರಲ್ಲಿ ಆಯ್ಕೆ ಮಾಡಿಕೊಂಡಿದ್ದರು. ಅವರ ಪ್ರೀತಿಗೆ, ಕಾಳಜಿಗೆ ಕೇತಹಳ್ಳಿ ಗ್ರಾಮಸ್ಥರು ಚಿರಋಣಿಗಳು. ಅವರ ಆಶೀರ್ವಾದ ಹೀಗೆಯೇ ಇರಲೆಂಬುದು ನಮ್ಮ ಅಪೇಕ್ಷೆ.

ಕೊನೆಯದಾಗಿ, ಹೊನ್ನಾದೇವಿಗೆ ನಡೆಯುವ ಪೂಜೆ ಪದ್ಧತಿಗಳನ್ನು ಗಮನಿಸುವುದಾದರೆ ದೇವರಿಗೆ ಪೂಜೆ ಸಲ್ಲಿಸಲು ವಾರಗಳು ಮಂಗಳವಾರ, ಗುರುವಾರ, ಮತ್ತು ಭಾನುವಾರ ವಿಶೇಷ ಸಂದರ್ಭಗಳಾಗಿವೆ. ಇದನ್ನು ಹೊರತುಪಡಿಸಿ ನಮ್ಮೂರ ಗ್ರಾಮದೇವತೆ ಯಾವುದೇ ರೀತಿಯ ಕಠಿಣ ಕಟ್ಟುಪಾಡುಗಳನ್ನು ಹೊಂದಿಲ್ಲ. ವರ್ಷಕ್ಕೆ ಒಂದು ಸಲ ಸುಗ್ಗಿ ಕಾಲದಲ್ಲಿ ಜಾತ್ರಾ ಮಹೋತ್ಸವವನ್ನು ಹಮ್ಮಿಕೊಳ್ಳಲಾಗುತ್ತದೆ. ಹಿಂದೆ ಜಾತ್ರೆಯ ದಿನದಂದು ಚಿಲುಮೆ ಗುಳಿಯನ್ನು ತೆಗೆದು ಅದರಿಂದ ಬರುವಂತಹ ನೀರನ್ನು ಯಾವುದೇ ರೀತಿಯಲ್ಲಿಯೂ ಕಲುಷಿತಗೊಳಿಸದೆ, ಅಂದರೆ, ಆಡು ಭಾಷೆಯಲ್ಲಿ ಕಪ್ಪೆ ಮುಟ್ಟದ ನೀರನ್ನು ತೆಗೆದು ಸ್ನಾನ ಮಾಡಿದ ವ್ಯಕ್ತಿಯ ಮೇಲೆ ಶ್ರೀ ಹೊನ್ನಾದೇವಿಯು ಆವಿರ್ಭವಿಸುತ್ತಾಳೆ. ಬಳಿಕ ಆರ್ಭಟಿಸಿ ಕುಣಿಯುತ್ತ ಕುಪ್ಪಳಿಸುತ್ತ ದೇವಸ್ಥಾನದ ಗರ್ಭಗುಡಿಯನ್ನು ಸೇರುತ್ತಾಳೆ. ದೇವಿಯ ಆಗಮನ ಆರ್ಭಟ ಕುಣಿತಗಳನ್ನು ನೋಡುವುದೇ ಒಂದು ರೋಮಾಂಚಕಾರಿ ದೃಶ್ಯ. ನಂತರ ದೇವಿಗೆ ಹರಕೆ ಹೊತ್ತಿರುವ ಭಕ್ತರು ಕೆಂಡ ತುಳಿದು ಹರಕೆಯನ್ನು ತೀರಿಸುವ ಪದ್ಧತಿಯು ರೂಢಿಯಲ್ಲಿದೆ. ಕೊಂಡೋತ್ಸವ ನೆರವೇರಿದ ನಂತರ ದೇವಿಯ ಅಲಂಕೃತ ವಿಗ್ರಹ ಗ್ರಾಮದ ಬೀದಿಬೀದಿಗಳಲ್ಲಿ ವೈಭವದಿಂದ ಮೆರವಣಿಗೆಯಲ್ಲಿ ಹೋಗುತ್ತದೆ. ಕೇತಹಳ್ಳಿ ಗ್ರಾಮದ ಮತ್ತು ಶ್ರೀ ಹೊನ್ನಾದೇವಿ ಅಮ್ಮನವರ ದೇವಸ್ಥಾನ ಹಾಗೂ ಪೂಜಾ ಪದ್ದತಿ ಆಚರಣೆಗಳ ಮಾಹಿತಿ.

□

# ಏಕೋಭಾವದ ಅನುಭಾವಿಗಳ ಸಂಘದಿಂದ ಪರಮಸುಖ

**ಸ.ರಾ. ಸುಳಕೂಡೆ**

ಜೀವಸಂಕುಲದೊಳಗಿನ ವಿವಿಧ ಪ್ರಭೇದಗಳು ಏಕಾಂಗಿಯಾಗಿ, ಒಂಟಿಯಾಗಿ ಬದುಕುವುದರಿಂದ ಹೊರತಾಗಿವೆ. ಪಶು, ಪಕ್ಷಿ, ಪ್ರಾಣಿ ಜೀವಜಂತುಗಳಲ್ಲಿ ಬೆರೆತು ಅತ್ಯಂತ ಶಕ್ತಿ–ಯುಕ್ತಿಶಾಲಿಯಾಗಿರುವ ಮನುಷ್ಯನು ಸಂಘಜೀವಿಯೂ ಹೌದು, ಸಮಾಜ ಜೀವಿಯೂ ಹೌದು. ಮನುಷ್ಯನು ಇತರ ಪಶು, ಪಕ್ಷಿ, ಜೀವಜಂತುಗಳಂತೆ ಸಂಘ, ಸಮಾಜಜೀವಿಯಾಗಿದ್ದರೂ ಅವನ ಬದುಕಿನ ಉದ್ದೇಶ, ಗುರಿ, ಜವಾಬ್ದಾರಿ, ನಿಯಮ, ನಿಯತ್ತು, ಶೋಧ, ಸಾಹಸಗಳೆಲ್ಲವೂ ಭಿನ್ನವಾಗಿವೆ. ಪ್ರಕೃತಿಯ ಅದ್ಭುತ ಸೃಷ್ಟಿಯಾಗಿರುವ ಮನುಷ್ಯ ಒಂದು ತೆರನಾಗಿ ಪ್ರತಿಸೃಷ್ಟಿಯ ರೂವಾರಿ ಯಾದದ್ದು ಗಮನಾರ್ಹ ಸಂಗತಿ.

ಆದಿಕಾಲದ ಮನುಷ್ಯನು ಪ್ರಾಣಿಗಳಂತೆಯೇ ಜೀವಿಸುತ್ತಿದ್ದ. ಅವನು ತನ್ನ ಭಾವನೆಗಳನ್ನು ಸಂಜ್ಞೆ, ಆಂಗಿಕ ಚಲನವಲನ, ಭಂಗಿಗಳ ಮೂಲಕವೇ ವ್ಯಕ್ತಗೊಳಿಸುತ್ತಿದ್ದ. ಬರಬರುತ್ತಾ ತನ್ನ ಅನಿಸಿಕೆಗಳನ್ನೆಲ್ಲ ನಿರ್ದಿಷ್ಟ ಮಾತುಗಳ ಮಾಧ್ಯಮದೊಂದಿಗೆ ಜೋಡಿಸಿಕೊಂಡು, ಮಾತಿಗೊಂದು ಭಾಷಾ ಸ್ವರೂಪ ಕೊಟ್ಟ. ಆದಿಮಾನವ ಒಂದೆಡೆ ನಿಂತು ತನ್ನ ಮಾತಿನ ಭಾಷೆಯನ್ನು ಅನುಕರಿಸುತ್ತಾ ಅದಕ್ಕೊಂದು ಲಿಪಿ ನಿರ್ಮಿಸಿಕೊಂಡ. ನೆಲ, ಭಾಷೆ, ಭಾಷೆಗೊಂದು ಲಿಪಿ, ಆಹಾರ, ಬಟ್ಟೆಗಾಗಿ ಕೃಷಿ, ಕರಕುಶಲ ಕೈಗಾರಿಕೆಗಳಿಗೆಲ್ಲ ಸವ್ಯವಸ್ಥೆ ಮಾಡಿಕೊಂಡ. ಮನುಷ್ಯನು ವಿಸ್ತರಿಸಿಕೊಂಡ ಜೀವನವಿಧಾನ ರೋಚಕವಾಗಿದೆ. ಬೆಂಕಿಯ ಆವಿಷ್ಕಾರ ಒಂದು ಅರ್ಥದಲ್ಲಿ ಮನುಷ್ಯನ ಸಂಘಟಿತನಕ್ಕೆ ಕಾರಣವೆಂದು ಹೇಳಬಹುದು.

ಮನುಷ್ಯನು ಸುರಕ್ಷಿತ ಇರುವಿಕೆಗಾಗಿ ವಸತಿಗಳನ್ನು ನಿರ್ಮಿಸಿಕೊಂಡದ್ದು ಮತ್ತು ಕುಟುಂಬ ವ್ಯವಸ್ಥೆ ರೂಢಿಸಿಕೊಂಡದ್ದೆಲ್ಲವೂ ಸಂಘ, ಸಂಘಟನೆಗಳಿಗೆಲ್ಲಕ್ಕೂ ಪೂರಕವಾಗಿ ಹೊರಹೊಮ್ಮಿದ್ದು ಒಂದು ಇತಿಹಾಸವೇ ಆಗಿದೆ. ಮನುಷ್ಯನು ಮಾತಿನೊಂದಿಗೆ ಅನೇಕ ಆಚಾರ–ವಿಚಾರಗಳನ್ನೆಲ್ಲಾ ಪಸರಿಸುವ ಮೂಲಕ ಸಂಘದಲ್ಲಿ ಒಗ್ಗೂಡಿಕೊಂಡು ಬಾಳುವ ಪದ್ಧತಿಗೆ ನಾಂದಿ ಹಾಡಿದನು. ಸಮಾಜಶಾಸ್ತ್ರಜ್ಞರು ಮನುಷ್ಯನ ಸಾಮಾಜೀಕರಣ ಸ್ವಭಾವ ಮತ್ತು ಪ್ರವೃತ್ತಿಯನ್ನು ಗಮನಿಸಿಯೇ ಮಾನವ ಸಂಘಜೀವಿ, ಸಮಾಜಜೀವಿ ಎಂದು ಗುರುತಿಸಿದ್ದಾರೆ. ಮಾನವನಾಗಿ ಜನ್ಮ ಪಡೆಯುವುದು ಒಂದು ಅಸಾಮಾನ್ಯ ಘಟನೆ, ಮುಖ್ಯವಾದ ಸಂಗತಿ ಎಂದು ಹೇಳಲಾಗುತ್ತಿದೆ. ಮನುಷ್ಯನಾಗಿ ಜನ್ಮ ತಾಳುವುದು ಅಪರೂಪದ ಸಂಗತಿ ಎನ್ನುವ ಮಾತಿನಲ್ಲಿ ಮಾನವಜನ್ಮದ ಮಹತ್ವವೇ ಅಡಗಿದೆ.

ಮಾನವ ಜೀವನ ಒಂದು ವ್ಯವಸ್ಥೆ, ಸೂತ್ರಕ್ಕೆ ಒಳಗೊಂಡಿದೆ. ಪಶು, ಪ್ರಾಣಿಗಳಂತೆ ಆತ ಸ್ವಚ್ಛಂದವಾಗಿ ಬದುಕಲು ಸಾಧ್ಯವಿಲ್ಲ. ಪ್ರತಿಯೊಂದು ಮಗುವೂ ತಾನು ಜನಿಸಿದ ಮನೆಯ ಪರಂಪರೆ, ರೀತಿ, ರಿವಾಜುಗಳನ್ನು ಅನುಸರಿಸಬೇಕಾಗುತ್ತದೆ. ಕುಟುಂಬದ ನಂಬಿಕೆಗಳು ಮತ್ತು ಬದುಕುವ ವಿಧಾನಗಳು ಭಿನ್ನಭಿನ್ನವಾಗಿವೆ. ಹೀಗಾಗಿ ಮಗು, ಸಮಾಜಶಾಸ್ತ್ರಜ್ಞರು ಹೇಳುವಂತೆ, ಪರಿಸರದ ಕೂಸಾಗಿ ಬೆಳೆಯಬೇಕಾಗುತ್ತದೆ. ಮಗುವಿನ ಆಚಾರ, ವಿಚಾರ, ನಡವಳಿಕೆ, ಮಾತು ಎಲ್ಲವೂ ತಾನು ಜನಿಸಿದ ಕುಟುಂಬ, ನೆರೆಹೊರೆಯವರ ಅನುಕರಣೆ, ಅನುಸರಣೆ ಆಗಿರುತ್ತದೆ. ಮಗುವಿನ ವ್ಯಕ್ತಿತ್ವ, ಪ್ರವೃತ್ತಿ ಹಾಸ್ಯ ಪರಿಹಾಸ್ಯಗಳೆಲ್ಲವೂ ಪರಿಸರದ ಮೇಲೆಯೇ ಅವಲಂಬಿಸಿರುತ್ತವೆ. ಹೀಗೆ ಪರಿಸರದ ಪರಿಣಾಮವೇ ಬದುಕಾಗುತ್ತದೆ, ಬೆಳವಣಿಗೆಯಾಗಿ ಪರಿವರ್ತನೆಗೊಳ್ಳುತ್ತದೆ.

ಮಾನವನು ಮೂಲತಃ ಅನುಕರಣೆಯಿಂದಲೇ ರೂಪಿತಗೊಳ್ಳುತ್ತಾ ಹೋಗುವುದು ಸಹಜವಾಗಿದೆ. ಈ ಅನುಕರಣಗಳು ಸಕಾರಾತ್ಮಕವಾಗಿದ್ದರೆ ಬದುಕಿಗೊಂದು ಭವ್ಯತೆ ತನ್ನ ಬರುತ್ತದೆ. ಒಂದು ವೇಳೆ ಅನುಕರಣೆ ನಕಾರಾತ್ಮಕವಾದರೆ ಮತ್ತು ಬದುಕಿನೊಂದಿಗೆ ಕೌಟುಂಬಿಕ, ಸಾಮಾಜಿಕ, ಆರ್ಥಿಕ ಅಭಿವೃದ್ಧಿ ವಿಕಾಸಗಳಿಗೆಲ್ಲ ಸಂಕಟ ಎದುರಾಗುತ್ತದೆ.

ಮನುಷ್ಯನ ಬದುಕು ಅಮೂಲ್ಯ, ಅನನ್ಯವೆಂಬುದು ಎಲ್ಲರೂ ಕಂಡುಕೊಂಡ ಸತ್ಯ. ಈ ಅಮೂಲ್ಯ ಅನನ್ಯತೆಗಳನ್ನು ಉಳಿಸುವ ಬೆಳೆಸುವ ಪ್ರಬಲ ಮಾಧ್ಯಮವೇ ಸಂಘ ಎಂದು ಹೇಳಬಹುದು. ಪ್ರತಿ ಮಗು ಬದುಕನ್ನು ಸುಸಂಗತವಾಗಿ ಕೂಡಿಕೊಂಡಿರುವಂತೆ ಸಜ್ಜಾಗಿಸುವ ಸಂಘ ಸುಸಂಸ್ಕೃತ ಸಜ್ಜನಿಕೆಯಿಂದ ಸಂಪದ್ಭರಿತವಾಗಬೇಕಾಗುತ್ತದೆ. ಮಾನವನ ಬದುಕನ್ನು ಸದಾಕಾಲ ಪ್ರಭಾವಿಸುವ ಸಂಘ ಸರಿಯಾಗಿ ಇರಬೇಕೆಂಬುದು ಸರ್ವಸಮ್ಮತ ಅಭಿಪ್ರಾಯವಾಗಿದೆ. ಅದಕ್ಕಾಗಿ ಬಸವಾದಿ ಶರಣರು ಸತ್ಯಶುದ್ಧ ಕಾಯಕದ ಆಧಾರದಲ್ಲಿ ಸಮಾಜ ಕುಟುಂಬ ಗಟ್ಟಿಗೊಳಿಸಲು ಶ್ರಮಿಸಿದರು.

ಶರಣರು ಈ ಭಾವವನ್ನು ಸಜ್ಜನಿಕೆ, ಸದಾಚಾರ, ಸೂಳ್ನುಡಿಗಳ ಬೀಡನ್ನಾಗಿ ಮಾಡುವ ಕಾರ್ಯವನ್ನು ಎಲ್ಲಾ ತರದ ಜನರಿಗೂ ವಿಸ್ತರಿಸಿದರು. ಜನಜೀವನದಲ್ಲಿದ್ದ ಭೇದಭಾವದ ಮನಃಸ್ಥಿತಿಯನ್ನು ಬೇರುಸಮೇತ ಕಿತ್ತುಹಾಕಿದರು. ನಡೆನುಡಿಗಳನ್ನು ಒಂದಾಗಿಸುವ ನಡಾವಳಿಗಳನ್ನು ರೂಢಿಸಿಕೊಂಡಿದ್ದ ಶರಣರು, ಅಯ್ಯಾ ಎಂದರೆ ಸ್ವರ್ಗ, ಎಲವೋ ಎಂದರೆ ನರಕವೆಂದು ಜನಕ್ಕೆ ಸ್ಪಷ್ಟಗೊಳಿಸಿದರು. ಅವರು ತಮ್ಮ ಸುತ್ತಮುತ್ತ ಶರಣರೇ ಇರುವಂತೆ, ಶರಣರ ಸಂಗವೇ ದೊರೆಯುವಂತೆ ವ್ಯವಸ್ಥೆ ಮಾಡಿಕೊಂಡಿದ್ದು ವಿಶೇಷ.

> ಆಡುವುದು ಹಾಡುವುದು ಹೇಳುವುದು ಕೇಳುವುದು
> ನಡೆವುದು ನುಡಿವುದು
> ಸರಸ ಸಮ್ಮೇಳವಾಗಿಪ್ಪುದಯ್ಯಾ ಶರಣರೊಡನೆ.
> ಚೆನ್ನಮಲ್ಲಿಕಾರ್ಜುನಯ್ಯಾ, ನೀ ಕೊಟ್ಟ ಆಯುಷ್ಯವುಳ್ಳನ್ನಕ್ಕರ
> ಲಿಂಗಸುಖಿಗಳ ಸಂಗದಲ್ಲಿ ದಿನಗಳ ಕಳೆವೆನು (ವ. 1126)

ಶರಣ-ಶರಣೆಯರ ಸಂಕುಲಕ್ಕೆ ಹಿರಿಯಳಾದ ಅಕ್ಕಮಹಾದೇವಿ ತನ್ನ ಇಡೀ ಆಯುಷ್ಯವನ್ನು ಲಿಂಗಸುಖಿಗಳ ಸಂಗದೊಳಗೆ ಕಳೆಯುವ ಅಭಿಲಾಷೆಯು ಸಂಗದ ಮಹತ್ವವನ್ನು ಬಿಂಬಿಸುತ್ತದೆ. ಮಾನವನ ಮನಸ್ಸು ಈ ಜಗತ್ತು ತಡೆದುಕೊಳ್ಳಲಾಗದ ವಾಸನಾಪ್ರಪಂಚದೊಳಗಿರಲು ಬಯಸುತ್ತದೆ. ಅಲ್ಲದ ಮಾತು ಕೇಳುವುದು, ಇಲ್ಲದ ಮಾತು ಹೇಳುವುದು, ಕದ್ದು ಕದ್ದು ಹೇಳುವುದು, ಕೇಳುವುದು, ಅಲ್ಲಸಲ್ಲದ ನಡೆನುಡಿಯೊಳಗೆ ತೊಡಗುವುದೆಲ್ಲವೂ ವಿರಸವನ್ನೇ ತರುತ್ತದೆ. ಇಂಥ ವಿರಸ ಸಂಗದೊಳಗೆ ನಾವಿದ್ದರೆ ಮಾನವನ ಬದುಕಿಗೆ ಯಾವ ಸುಖವೂ ದೊರೆಯುವುದಿಲ್ಲ. ಆಯುಷ್ಯವು ವ್ಯರ್ಥವಾಗಿಯೂ ಹೋಗುತ್ತದೆ.

ಆಡುವಡೆ ಸದಾಚಾರಿಗಳ ಕೂಡೆ ಆಡುವದು
ನುಡಿವಡೆ ಜಂಗಮಪ್ರೇಮಿಯ ಕೂಡೆ ನುಡಿವುದು
ಮಾತಾಡುವಡೆ ಪ್ರಸಾದಿಯ ಕೂಡೆ ಮಾತನಾಡುವದು
ಭಕ್ತಿಹೀನನ ಕಂಡಡೆ ಮನ ಮುನಿಸ ಮಾಡಿಸಾ
ರೇಕಣ್ಣಪ್ರಿಯ ನಾಗಿನಾಥಾ (ವ. 1833)

ಶರಣರು ಸದಾಚಾರ ನಡೆ-ನುಡಿಗಳನ್ನು ಅಳವಡಿಸಿಕೊಂಡು ಬದುಕುವುದನ್ನು ರೂಢಿಸಿಕೊಂಡಿದ್ದರು. ಅವರು ಅದಕ್ಕಾಗಿ ಸದಾ ಸದಾಚಾರಿಗಳಳೊಂದಿಗೆ ನುಡಿಯುವುದು, ನಲಿಯುವುದಕ್ಕೆ ಅವಕಾಶ ಮಾಡಿಕೊಳ್ಳುತ್ತಿದ್ದರು. ಶರಣರು ಭಕ್ತಿಯನ್ನು ಒಳ್ಳೆಯ ಸಂಗದಲ್ಲಿಯೇ ಕಂಡರಲ್ಲದೆ ಒಡಲಿನ ನಡೆನುಡಿಗಳೊಂದಿಗೆ ಬೆಸೆದುಕೊಂಡರು. ಸದಾಚಾರದ ನಡೆನುಡಿಗಳಲ್ಲಿ ನಿರಂತರಾಗದವರನ್ನು ಸರಿದಾರಿಗೆ ತರುವ ನಿಟ್ಟಿನಲ್ಲೂ ಶರಣರು ಶ್ರಮಿಸಿದರು. ಶರಣರು ಇಹದ ಬದುಕು ಸರ್ವತ್ರವೂ ಸುರಕ್ಷಿತತೆಯ, ರಕ್ಷಿತದ ಜೊತೆಗೆ ಯಾವುದೇ ತರತಮಭಾವವಿಲ್ಲದೆ ಬಂಧುತ್ವ ಹೊಂದುವ ಸತ್ಸಂಗವನ್ನು ನಂಬಿಕೊಂಡವರಾಗಿದ್ದರು. ಅವರ ಬದುಕು ಕಾಯಕ ದಾಸೋಹಗಳಿಂದ ಸ್ವಾವಲಂಬಿ, ಸ್ವಾಭಿಮಾನಕ್ಕೆ ಒಗ್ಗಿಕೊಂಡಂತೆಯೇ ಸತ್ಸಂಗದೊಳಗೆ ಚೈತನ್ಯಶೀಲವಾಗಿತ್ತು. ಅವರೆಂದು ಇತರರಿಗೆ ಕೇಡಾಗುವಂತೆ ಬದುಕಿದವರಲ್ಲ. ಅವರ ಬದುಕು ಮಾನವೀಯ ಗುಣವಿಶೇಷತೆಯಿಂದ ಕೂಡಿತ್ತು. ಯಾವುದು ಮಾನವ ಬದುಕಿಗೆ ಶ್ರೇಯಸ್ಸೋ ಅದನ್ನೇ ಆಯ್ದುಕೊಂಡು ಶರಣರು ಸದಾಚಾರದ ಮುತ್ತುರತ್ನಗಳಂತಿದ್ದಾರೆ.

ಸಾರ, ಸಜ್ಜನರ ಸಂಗ ಲೇಸು ಕಂಡಯ್ಯಾ
ದೂರ, ದುರ್ಜನರ ಸಂಗವದು ಭಂಗವಯ್ಯಾ
ಸಂಗವೆರಡುಂಟು: ಒಂದ ಹಿಡಿ, ಒಂದ ಬಿಡು
ಮಂಗಳಮೂರ್ತಿ ನಮ್ಮ ಕೂಡಲಸಂಗನ ಶರಣರ (ವ. 383)

ಮಾನವನ ಬದುಕು ಒಳಿತು, ಕೆಡುಕುಗಳ ಕೊನೆಮೊದಲಿಲ್ಲದ ಒಂದು ಹೋರಾಟವಾಗಿದೆ. ನಾವು ಒಳಿತಿಗಾಗಿ, ಒಳ್ಳೆಯದಕ್ಕಾಗಿ, ಸತತ ಎಚ್ಚರವಿರುವುದೇ ಸತ್ಸಂಗದ

ಸಾರಸಜ್ಜನಿಕೆ ಆಗಿದೆ. ಬಸವಣ್ಣನವರಂತೂ ಯಾವಾಗಲೂ ತಮ್ಮನ್ನು ತಾವು ಪರೀಕ್ಷಿಸಿಕೊಂಡು ಬದುಕು ನಡೆಸಿದವರು. ಅವರು ಶರಣರ ಒಡನಾಟವಿಲ್ಲದೆ ಉಳಿದವರಲ್ಲ. ಶರಣರೇ ಅವರ ಬದುಕಿನ ಅವಿಭಾಜ್ಯ ಅಂಗವಾಗಿದ್ದರು. ನಿರಂತರ ಶರಣ ಸಂಪರ್ಕದಲ್ಲಿದ್ದ ಬಸವಣ್ಣನವರು "ಶರಣರ ಬರವೆಮಗೆ ಪ್ರಾಣ ಜೀವಾಳ"ವೆಂದು ಹೇಳಿದ್ದು ಮನನಯೋಗ್ಯವಾಗಿದೆ. ಅವರು ತಮ್ಮ ಒಡನಾಟಕ್ಕೆ ಬಂದವರನ್ನು ಮಾನವೀಯ ಗುಣಗಳಿಂದ ನಡೆದುಕೊಳ್ಳಲು ಪ್ರೇರಣೆ ನೀಡಿದರಲ್ಲದೆ ಸಾರಸಜ್ಜನರೊಂದಿಗೆ ಬದುಕುವ ಪರಿಸರವನ್ನು ಪರಿಚಯಿಸಿದರು. ಅದನ್ನೇ ಸತ್ಸಂಗವೆಂದು ಕರೆದರು.

ಸಾರ, ಸಜ್ಜನರ ಸಂಗವ ಮಾಡುವುದು
ದೂರ, ದುರ್ಜನರ ಸಂಗ ಬೇಡವಯ್ಯಾ
ಆವ ಹಾವಾದಡೇನು? ವಿಷವೊಂದೆ
ಅಂತವರ ಸಂಗ ಬೇಡವಯ್ಯಾ
ಅಂತರಂಗ ಶುದ್ಧವಿಲ್ಲದವರ ಸಂಗವು
ಸಿಂಗಿ ಕಾಳಕೂಟ ವಿಷವೋ ಕೂಡಲಸಂಗಯ್ಯಾ (ವ. 384)

ಮನುಷ್ಯತ್ವದ ಅರಿವು ಹೊಂದಿ ಬೆರೆತು ಬಾಳುವ ಸುಸಂಗತವಿರುವೆಡೆಯಲ್ಲಿ ಸಮಯ ಕಳೆಯಬೇಕು. ಇದು ಬದುಕಿಗೆ ಶಾಂತಿ, ನೆಮ್ಮದಿ ತರುತ್ತದೆ. ತಪ್ಪಿಯೂ ಬದುಕಿನಲ್ಲಿ ವಿವಾದ ಸೃಷ್ಟಿಸಬಾರದು. ಸಜ್ಜನರ ಸಹವಾಸದೊಳಗೆ ಬದುಕಿನ ಕ್ಷಣಗಳನ್ನು ತೊಡಗಿಸಿದಷ್ಟೂ ವಿಷಮತೆಯು ದೂರವಾಗುವುದು. ಇನ್ನು ದುರ್ಜನರ ಸಹವಾಸದಿಂದ ದೂರವಿದ್ದಷ್ಟೂ ಬದುಕಿನ ಏಳ್ಗೆಯ ದಾರಿ ಸುಗಮಗೊಳ್ಳುತ್ತದೆ. ಅಪ್ಪಿತಪ್ಪಿ ದುರ್ಜನರ ಸಹವಾಸ ಮಾಡುವ ಪ್ರಸಂಗ ಬಂದಾಗ ಎಚ್ಚರಿಕೆಯಿಂದ ವ್ಯವಹರಿಸಿ ಪಾರಾಗಿ ಸತ್ಸಂಗದ ಸಜ್ಜನರನ್ನು ಕೂಡಿಕೊಳ್ಳಬೇಕು. ಇದೇ ದುರ್ಜನರ ಸಹವಾಸ ಬಿಡುವ ಕ್ರಮವೆನ್ನಬಹುದಾಗಿದೆ.

ಮಾನವನ ಬದುಕಿನೊಳಗೆ ಸಜ್ಜನರು ದುರ್ಜನರು ಇರುವುದು ಎಲ್ಲರೂ ಬಲ್ಲ ಸತ್ಯವಾಗಿದೆ. ಒಂದು ತನಗೂ ಇತರರಿಗೂ ಒಳಿತನ್ನು ತರುತ್ತದೆ. ಇನ್ನೊಂದು ತನಗೂ ಇತರರಿಗೂ ಕಂಟಕ ಸೃಷ್ಟಿಸುವ ಶಕುನಿಯಾಗಿದೆ. ಇಲ್ಲಿ ಯಾರೊಡನೆ ನಾವು ವ್ಯವಹರಿಸಬೇಕು ಒಡನಾಟವನ್ನು ಹೊಂದಿರಬೇಕೆಂಬುದನ್ನು ನಿಶ್ಚಯಿಸುವಷ್ಟು ಬುದ್ಧಿವಂತರಾಗಬೇಕು. ಈ ಬುದ್ಧಿವಂತಿಕೆಯು ಅಂತರಂಗಶುದ್ದಿಯಿಂದಲೂ ಕೂಡಿರ ಬೇಕೆಂಬುದು ಮುಖ್ಯ. ಸ್ವಾರ್ಥ, ಲೋಭ, ಸ್ವಲಾಭ, ಶ್ರಮರಹಿತ ಫಲ ಪ್ರಾಪ್ತಿ ಇವೆಲ್ಲವೂ ಕೇಡಿನ ಕೇಂದ್ರವೆಂದು ಅರಿತುಕೊಂಡು ದೂರವಿರುವುದೇ ಲೇಸು.

ಪಟ್ಟಣದ ಸೂಳೆಯ ಕೂಡೆ ಪರಬ್ರಹ್ಮವ ನುಡಿಯಲೇಕೆ?
ಸಂತೆಗೆ ಬಂದವರ ಕೂಡೆ ಸಹಜವ ನುಡಿಯಲೇಕೆ?
ಕತ್ತೆಯನೇರುವರ ಕೂಡೆ ನಿತ್ಯರೆಂದು ನುಡಿಯಲೇಕೆ?
ಹೊತ್ತುಹೋಕರ ಕೂಡೆ ಕರ್ತನ ಸುದ್ದಿಯ ನುಡಿಯಲೇಕೆ?

ಅಮುಗೇಶ್ವರಲಿಂಗವನರಿದ ಶರಣಂಗೆ
ಹತ್ತುಸಾವಿರವನೋದಲೇಕೆ?
ಹತ್ತುಸಾವಿರವ ಕೇಳಲೇಕೆ?
ಭ್ರಷ್ಟರ ಕೂಡೆ ನುಡಿಯಲೇಕೆ? (ವ. 127)

ಸಹವಾಸ, ವ್ಯವಹಾರ, ವಿಚಾರವಿನಿಮಯ ಎಲ್ಲವೂ ಸರಳರೊಂದಿಗೆ, ಸತ್ಯವಂತರೊಂದಿಗೆ ಇರಬೇಕೆಂಬುದು ಶರಣರ ಒಮ್ಮತದ ಅನುಭವ. ಶರಣೆ ಅಮುಗೆ ರಾಯಮ್ಮ ಸಜ್ಜನಿಕೆಯನ್ನು ರೂಢಿಸಿಕೊಳ್ಳಬೇಕಾದರೆ ಸಂಸಾರ ಸಂತೆಯೊಳಗೆ ಹೇಗೆ ಎಚ್ಚರಿಕೆಯಿಂದ ಇರಬೇಕೆಂಬುದು ಹೇಳಿರುವುದು ಬದುಕಿನ ಯಶಸ್ಸಿನ ಸೂತ್ರದಂತಿದೆ. ಸತ್ಸಂಗ ಸಮಾಲೋಚನೆ ಮಾತುಕತೆ ಸಂವಾದಗಳೆಲ್ಲವೂ ಮನುಷ್ಯನ ವ್ಯಕ್ತಿತ್ವವನ್ನು ಅರಳಿಸುವಂತಿರಬೇಕು. ನಾವು ಯಾರೊಂದಿಗಾದರೂ ಸಲುಗೆ ಬೆಳೆಸಿಕೊಳ್ಳುವ ಮುನ್ನ ಸಾರಾಸಾರ ವಿಚಾರಿಸಬೇಕು. ಬದುಕಿನ ದಾರಿ ತಪ್ಪಿಸುವ ಬದುಕಿಗೆ ವ್ಯತಿರೇಕವುಳ್ಳ, ಸಂಕಟ, ಕಂಟಕ ಉಂಟು ಮಾಡುವವರ ಸಂಗದಿಂದ ದೂರವಿರುವುದೇ ಸಭ್ಯತೆಯಾಗಿದೆ. ಪ್ರತಿ ವ್ಯಕ್ತಿಯು ತನ್ನ ಬದುಕನ್ನು ಸರಿದಾರಿಯೊಳಗೆ ನಡೆಸಬೇಕೆಂದು ಬಯಸಿದ್ದರೂ ಕೆಟ್ಟವರ ಸಹವಾಸದಿಂದ ಏನು ಮಾಡಬಾರದಿತ್ತೋ ಅದನ್ನು ಮಾಡುತ್ತಾ, ಆಡುತ್ತಾ ಮತ್ತೊಂದನ್ನೆಲ್ಲ ನೋಡುತ್ತಾ ಹೋಗುತ್ತಿರುವುದು ನಿತ್ಯದ ಮಾತಾಗಿದೆ. ಅಲ್ಲದೆ, ಕೆಲಸ ಕಾರ್ಯದೊಳಗೆ ತೊಡಗಿದವರನ್ನು ಸರಿದಾರಿಗೆ ತರುವುದಕ್ಕಾಗಿಯೇ ಸಾವೋಪಾಯ ದಂಡೋಪಾಯಗಳನ್ನು ಅನುಸರಿಸಲಾಗುತ್ತಿದೆ. ಅಂಥವರನ್ನು ಎಚ್ಚರಿಸುವ ಕಾರ್ಯವನ್ನು ಕುಟುಂಬದ ಸದಸ್ಯರು, ಸಮಾಜದ ಮುಖಂಡರು, ನೀತಿವಂತರು, ಹೃದಯವಂತರು ಮಾಡುತ್ತಲೇ ಬಂದಿದ್ದಾರೆ. ಅದರಲ್ಲಿ 12ನೇ ಶತಮಾನದ ಶರಣರು ಸರ್ವರನ್ನು ಒಗ್ಗೂಡಿಸಿ ಕಾಯಕ ದಾಸೋಹದೊಳಗೆ ತೊಡಗಿಸಿ ಸತ್ಸಂಗವನ್ನು ಬೋಧಿಸಿದ್ದು ವಿಶೇಷ.

ಮಾನವನು ತನ್ನನ್ನು ತಿಳಿದುಕೊಂಡು ಸಹಜೀವನ, ಸಭ್ಯಜೀವನ ಸಜ್ಜನಿಕೆಯೊಳಗೆ ನೆಲೆನಿಂತು ಜೀವಿಸುವ ಚಲಗಾರಿಕೆಯನ್ನು ಬೆಳೆಸಿಕೊಳ್ಳಲು ಬೇಕಾದ ಮಾರ್ಗಗಳನ್ನು ಶರಣರು ಪರಿಚಯಿಸಿದರು. ಅವರು ಬರಿಯ ಉಪದೇಶಕ್ಕೆ ಕಟ್ಟಿಬೀಳಲಿಲ್ಲ. ಕೇವಲ ಹಾಗೆ ಹೀಗಿರಬೇಕೆಂದು ಹೇಳಿ ತಮ್ಮ ಉಪಜೀವನಕ್ಕೆ ದಾರಿ ಮಾಡಿಕೊಳ್ಳಲಿಲ್ಲ. ಅವರು ಒಳಿತಿನ ಮಾರ್ಗದೊಳಗೆ ನಡೆಯುವ, ಕೇಡಿನ ಮಾರ್ಗವನ್ನು ತೊರೆಯುವ ವಿಜ್ಞಾನವನ್ನು ಜನಜೀವನದ ಭಾಗವನ್ನಾಗಿಸಿದರು. ಅವರು ಸತ್ಯಶುದ್ಧ ಕಾಯಕದ ಮೂಲಕ ಸ್ವಾವಲಂಬಿಗಳಾದರು ಮತ್ತು ಸಹಜೀವಿಗಳಾದರು, ಇತರರೂ ಸ್ವಾವಲಂಬಿಗಳಾಗಲು ಸಹಕರಿಸಿದರು. ಅವರ ಪ್ರತಿ ಹೆಜ್ಜೆಯೊಳಗೆ ಸುಶೀಲತೆ, ಪ್ರಾಮಾಣಿಕತೆ, ಸತ್ಯದ ನಡೆ ನುಡಿಗಳೆ ನೀನದಿಸಿದವು.

ವೇಸಿಯ ಸಂಗ ದ್ರವ್ಯದ ಕೇಡು
ದಾಸಿಯ ಸಂಗ ಮಾನಹಾನಿಗೆ ಮೊದಲು

ನಿಮ್ಮ ಶರಣರ ಸಂಗ ಕರಣಂಗಳ ಕೇಡು
ಇಂತೀ ಆಗುಚೇಗೆಯನರಿ ನಿನ್ನ ನೀ
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ (ವ. 1639)

ಶರಣರು ಜಗತ್ತಿನ ವ್ಯವಹಾರಗಳನ್ನು ಪರಾಮರ್ಶಿಸಿ ಮಾನವನ ಬದುಕಿನ ಸ್ವರೂಪವನ್ನು ವಿರೂಪಗೊಳಿಸುವ ಸಂಗತಿಗಳನ್ನು ಜನಮನಕ್ಕೆ ತಟ್ಟುವಂತೆ ನಿವೇದಿಸಿದರು. ಅವರ ವಚನಗಳಲ್ಲಿ ಮಾನವೀಯತೆಯ ಘನತೆ, ಗೌರವದ ವಿಶಾಲತೆಯ ಸೊಬಗಿದೆ, ಸತ್ಯವಿದೆ. ಮಾನವರಲ್ಲಿರುವ ದುರ್ನಡತೆ ದುರ್ವ್ಯವಹಾರಗಳು ಬಯಲಾಗಬೇಕಾದರೆ ಭಕ್ತಿಯ ನೆಲೆಯು ಆಗುಬೇಗೆಯನರಿಯುವಂತಿರಬೇಕು. ನಾವು ಯಾರೊಡನೆ ಸಖ್ಯ ಬೆಳೆಸಬೇಕಾದರೂ ಅವರ ಪೂರ್ವಾಪರ, ಆಚಾರ, ವಿಚಾರಗಳನ್ನು ಚೆನ್ನಾಗಿ ತಿಳಿದುಕೊಂಡಿರಬೇಕು. ಅವರ ಪೂರ್ವಾಪರವು ಮಾನಹಾನಿಗೆ, ದ್ರವ್ಯದ ಕೇಡಿಗೆ ಕಾರಣವಾಗುವಂತಿದ್ದರೆ ಅತ್ತ ಕಡೆ ಕಣ್ಣೆತ್ತಿಯೂ ನೋಡದಂತಿರಬೇಕು. ಈ ತೆರನಾದ ದೃಢತೆ ಹೊಂದಬೇಕು. ಶರಣರು ಅನುಭವ ಹಂಚಿಕೊಂಡಿರುವುದು ನಮ್ಮನ್ನು ನಾವು ಅರಿತು ಬೆರೆಯುವ ಸೂತ್ರದಂತಿದೆ.

ಲೋಕಜೀವನದಲ್ಲಿ ಮನುಷ್ಯನು ಸಂಘಜೀವಿಯಾಗಿಯೇ ಬದುಕಬೇಕಾಗುತ್ತದೆ. ಅವನ ವ್ಯಕ್ತಿತ್ವಕ್ಕೆ ಸಮಾಜ ಅನೇಕ ಪೂರಕವಾದ ಅಗತ್ಯಗಳನ್ನು, ವಿನಿಮಯವನ್ನು ಮಾಡುತ್ತಲೇ ಇರುತ್ತದೆ. ವ್ಯಕ್ತಿಗತ ಬದುಕು ಒಂದೇ ತೆರನಾಗಿ ಜಗ್ಗಾಡಿದರೂ ಮಾನವನು ಸಮಾಜದ ರೀತಿ ನೀತಿ ವ್ಯವಹಾರದೊಳಗೆ ಭಾಗವಹಿಸದೆ ಇರಲಾಗದು. ಮಾನವನು ತನ್ನ ಅನೇಕ ಆಸೆ ಆಕಾಂಕ್ಷೆಗಳನ್ನು ಸಮಾಜದ ನಿಯಮಗಳನ್ನು ಪಾಲಿಸುತ್ತಲೇ ಮುಂದುವರೆಸಿಕೊಂಡು ಹೋಗಬೇಕಾಗುತ್ತದೆ. ಕೌಟುಂಬಿಕ ವ್ಯವಸ್ಥೆಯು ಅದೆಷ್ಟೋ ಸಾತ್ವಿಕ ಸಜ್ಜನಿಕೆಯಿಂದ ಕೂಡಿದ್ದರೂ ಕುಟುಂಬದ ಎಲ್ಲರೂ ನಿಯತ್ತು, ಮಾನವೀಯ ಮಮತೆಯಿಂದ ವರ್ತಿಸುತ್ತಾರೆಂದು ಹೇಳಲಿಕ್ಕಾಗದು. ಇದಕ್ಕೆ ಮುಖ್ಯ ಕಾರಣ ವ್ಯಕ್ತಿಯ ಮೇಲೆ ಅನೇಕ ದುರುಳರ ನೆರಳು ಬಿದ್ದು ಅಜ್ಞಾನ, ತಪ್ಪುಗ್ರಹಿಕೆ, ಇಲ್ಲಸಲ್ಲದ ಸಂಶಯ ಎನ್ನಬಹುದಾಗಿದೆ. ಮಾನವನ ನಡವಳಿಕೆಗಳು ಹೀಗೆ ಎಂದೂ ನಿರ್ಧರಿಸಲಾಗದ ಸಂಗತಿಯಾಗಿದೆ. ಜಗತ್ತು ಒಡ್ಡುವ ಆಸೆ ಆಮಿಷಗಳಂತೂ ಮಾನವನ ಬದುಕಿನಲ್ಲಿ ತೀವ್ರತಮ ಬದಲಾವಣೆ ತರುವಲ್ಲಿ ನಿರಂತರ ಶ್ರಮಿಸುತ್ತಿವೆ. ಈ ಎಲ್ಲ ಪ್ರಲೋಭನೆಗಳನ್ನೂ ದಾಟಿ ನಾವೆಲ್ಲರೂ ಒಳಿತಿನ ಸಂಗ ಮಾಡಿಕೊಂಡು ವಿಧಾಯಕ ಕಾರ್ಯದೊಳಗೆ ನಮ್ಮನ್ನು ತೊಡಗಿಸಿಕೊಳ್ಳುವ ಅಗತ್ಯವಿದೆ. ಈ ದಿಕ್ಕಿನಲ್ಲಿ ಸತತ ಕಾಳಜಿ ಹೊಂದಿರಬೇಕಾಗುತ್ತದೆ.

ಆರಾರ ಸಂಗವೇನೇನ ಮಾಡದಯ್ಯಾ
ಕೀಡೆ ಕೊಂಡಲಿಗನಾಗದೆ ಅಯ್ಯಾ
ಚಂದನದ ಸನ್ನಿಧಿಯಲ್ಲಿ ಪರಿಮಳ ತಾಗಿ

ಬೇವು, ಬೊಬ್ಬುಲಿ, ತರಿಯ ಗಂಧಂಗಳಾಗವೆ
ನಮ್ಮ ಕೂಡಲಸಂಗನ ಶರಣರ ಸನ್ನಿಧಿಯಿಂದ
ಕರ್ಮ ನಿರ್ಮಳವಾಗದಿಹುದೆ (ವ. 50)

ಒಳಿತಿನೊಳಗೆ ಬದುಕಿ, ಒಳಿತಿಗಾಗಿ ಬದುಕಿ, ಒಳ್ಳೆಯವರೊಂದಿಗೆ ಬದುಕಿ, ಬಾಳಿ ಎಂಬುದು ಬಸವಾದಿ ಶರಣರ ಬದುಕಿನ ಸಂದೇಶವಾಗಿದೆ. ಶರಣ ಜೀವನವೂ ರೂಪುಗೊಂಡಿರುವುದು. ಸದಾಚಾರ ಸಂಪನ್ನರಿಂದ ಸತ್ಸಂಗಿಗಳಿಂದ ಎಂಬುದನ್ನು ನಾವೆಲ್ಲರೂ ಅರಿತು ಉತ್ತಮರ ಸಂಗ ಮಾಡಿಕೊಳ್ಳಬೇಕು. ಇದನ್ನೇ ಬಸವಣ್ಣನವರು ತಮ್ಮ ಅನುಭವವಾಗಿಸಿ ವಚನದೊಳಗೆ ಬಿಂಬಿಸಿದ್ದಾರೆ. ಶರಣರ ಸನ್ನಿಧಿಯಿಂದ ಎಲ್ಲಾ ಕೆಲಸ ಕಾರ್ಯಗಳು ಸುಗಮಗೊಳ್ಳುತ್ತವೆ ಎಂಬುದಕ್ಕೆ ಸಂಗವೇ ಮೂಲವೆಂದು ತಿಳಿದು ಸತ್ಸಂಗದೊಳಗಿರುವುದೇ ವಿಹಿತ.

ಅರಿಯದವರೊಡನೆ ಸಂಗವ ಮಾಡಿದಡೆ
ಕಲ್ಲ ಹೊಯ್ದು ಕಿಡಿಯ ತೆಗೆದುಕೊಂಬಂತೆ
ಬಲ್ಲವರೊಡನೆ ಸಂಗವ ಮಾಡಿದಡೆ
ಮೊಸರ ಹೊಸೆದು ಬೆಣ್ಣೆಯ ತೆಗೆದುಕೊಂಬಂತೆ
ಚೆನ್ನಮಲ್ಲಿಕಾರ್ಜುನಯ್ಯಾ, ನಿಮ್ಮ ಶರಣರ ಸಂಗವ ಮಾಡಿದಡೆ
ಕರ್ಪುರದ ಗಿರಿಯನುರಿ ಕೊಂಬಂತೆ (ವ. 1122)

ಬದುಕು ಸರಾಗ, ಸರಳಗೊಳ್ಳಬೇಕಾದರೆ ನಮ್ಮ ಒಡನಾಟ, ವ್ಯವಹಾರ, ಸಂಬಂಧ, ಬಾಂಧವ್ಯಗಳೆಲ್ಲವೂ ಒಳಿತಿನಿಂದ ಕೂಡಿರಬೇಕಾಗುತ್ತದೆ. ಅದು ತಪ್ಪಿ ನಮ್ಮ ಬದುಕು ಅರಿಯದವರೊಂದಿಗೆ, ಅಲ್ಲದವರೊಂದಿಗೆ ಬೆಸೆದುಕೊಂಡಿದ್ದರೆ ಅದು ಯಾತನೆಗೆ ಕಾರಣವಾಗುತ್ತದೆ. ಅಲ್ಲದೆ ಅವ್ಯವಹಾರ, ದ್ರೋಹ, ದೋಷಗಳಿಂದ ಮುಕ್ತವಾಗದಿರದು. ಶರಣರು ನಿಶ್ಚಯಿಸಿ ಹೇಳಿದಂತೆ ಬಲ್ಲವರೊಂದಿಗೆ ಸಂಗ ಮಾಡಿಕೊಂಡು ಬದುಕಿಗೆ ಘನತೆ ತಂದುಕೊಳ್ಳುವುದು ಸರ್ವರ ಆದ್ಯ ಕರ್ತವ್ಯವಾಗಿದೆ. ಬದುಕಿನೊಳಗೆ ಏಕಾಂಗಿತನವು ಇರಲಾರದೆಂಬುದನ್ನು ಅರಿತುಕೊಂಡು ಸಂಗದೊಳಗಿದ್ದೂ ನಿಸ್ಸಂಗಿಯಾಗಿ ಹೊರಹೊಮ್ಮುವ ಮಾರ್ಗವು ಶರಣರ ಅನುಭವದೊಳಗಿದೆ. ಶರಣರು ವಿವಿಧ ಕಾಯಕಗಳಿಂದ ಗುರುತಿಸಿಕೊಂಡಿದ್ದರೂ. ಅವರ ಆಚಾರ ವಿಚಾರದೊಳಗೆ ಏಕತಾಭಾವವಿದೆ. ಈ ಏಕತೆಯ ಭಾವ ಅನುಭವ, ಅನುಭವದೊಳಗೆ ಸಂಗದ ಪ್ರಭೆ ಇದೆ. ಶರಣರು ನಿತ್ಯವೂ ಸತ್ಸಂಗದೊಳಗೆ ಬೆರೆತು ಹೊಸಹೊಸ ವಿಚಾರಗಳನ್ನು ಅಭಿವ್ಯಕ್ತಗೊಳಿಸಿ ಅನುಭವದ ನೆಲೆಯನ್ನು ವಿಸ್ತರಿಸಿದರು. ಅಂದು ಅವರು ಹೊಳವು ಹಾಕಿದ ಅನುಭವ ಇಂದಿಗೂ ಎಂದಿಗೂ ವಿಸ್ತಾರಗೊಳ್ಳುತ್ತಾ ಜನಜೀವನದೊಳಗೆ ಬೆರೆತು ಅವರಲ್ಲಿ ಜೀವನಪ್ರೀತಿ ಹೆಚ್ಚುತ್ತದೆಂಬುದು ಸರ್ವವಿದಿತ ಸಂಗತಿಯಾಗಿದೆ. ಏಕೆಂದರೆ ಅವರ ಅನುಭವ ಸಂಗದಲ್ಲಿ ನಿಸ್ಸಂಗದೊಳಗೆ ಅರಳಿಕೊಂಡಿದೆ.

ಆಕಾಶದಲ್ಲಾಡುವ ಪಟಕ್ಕಾದಡೆಯೂ ಮೂಲಸೂತ್ರವಿರಬೇಕು
ಕಲಿಯಾದಡೆಯೂ ಕಜ್ಜವಿಲ್ಲದೆ ಆಗದು
ಭೂಮಿಯಿಲ್ಲದೆ ಬಂಡಿ ನಡೆವುದೆ?
ಅಂಗಕ್ಕೆ ಲಿಂಗವಿಲ್ಲದೆ ನಿಸ್ಸಂಗವಾಗಬಾರದು
ಕೂಡಲಚೆನ್ನಸಂಗಮದೇವರಲ್ಲಿ
ಸಂಗವಿಲ್ಲದೆ ನಿಸ್ಸಂಗಿಯೆಂದು ನುಡಿಯಬಹುದೆ ಪ್ರಭುವೆ? (ವ. 688)

ಶರಣರು ಮಾನವ ಜೀವನದ ನಿರ್ವಹಣೆಯ ವೈವಿಧ್ಯತೆಯನ್ನು ಒಪ್ಪಿಕೊಂಡು ಸಂಘಜೀವನವನ್ನು ವಿಸ್ತರಿಸಿಕೊಂಡವರು. ಬಸವಣ್ಣನವರು ಪರಿಭಾಷಿಸಿದಂತೆ "ಆಕಾಶದಲ್ಲಾಡುವ ಪಟಕ್ಕಾದಡೆಯೂ ಮೂಲಸೂತ್ರವಿರಬೇಕು" ಎಂಬುದು ಅವರು ಕಂಡುಕೊಂಡ ಸೂತ್ರವೇ ಆಗಿದೆ. ದಾರವನ್ನು ಹಿಡಿದುಕೊಳ್ಳುವ ಆಧಾರವಿಲ್ಲದೆ ಪಟವು ಹಾರದು. ಆದರೆ ಪಟ ಆಕಾಶದೊಳಗೆ ಹಾರಾಡುತ್ತಾ ಹಾರಾಡುತ್ತಾ ದಾರದ ಹಿಡಿತವನ್ನು ಹರಿದುಕೊಂಡು ನಿಸ್ಸಂಗಗೊಂಡು ಹಾರಾಡುತ್ತಾ ಹೋಗುವುದು ಸಹ ಸ್ವಾಭಾವಿಕ ಸಂಗತಿ ಆಗಿದೆ. ಈ ಜಗತ್ತಿನೊಳಗೆ ಮನುಷ್ಯನು, ಎಲ್ಲಾ ಅನುಕೂಲ ಪ್ರತಿಕೂಲಗಳನ್ನೆಲ್ಲ ನಿಭಾಯಿಸಿಕೊಂಡು ಬದುಕನ್ನು ಕಟ್ಟಿಕೊಂಡಿದ್ದರೂ ಸದಾ ಒಂದರೊಳಗೇ ಆಸಕ್ತನಾಗಿ ಕುಳಿತಿಲ್ಲ. ಅವನು ತನ್ನ ಬುದ್ಧಿಶಕ್ತಿ, ಪ್ರತಿಭೆ, ಪ್ರಭಾವದಿಂದ ಅನೇಕ ರಹಸ್ಯಗಳನ್ನು ಭೇದಿಸಿ ನಿಸ್ಸಂಗವಾಗಿ ವರ್ತಿಸಿದ್ದು ಸರ್ವ ಶ್ರುತವೇ ಆಗಿದೆ. ಮಾನವ ಬದುಕಿನ ಅಂದಿನ ಬದುಕಿನ ಜಡತ್ವ, ಅಂಧಾನುಕರಣೆ ಕಂದಾಚಾರ, ಶ್ರೇಷ್ಠತೆಯ ಅಹಂಕಾರ, ಇದೇ ಶ್ರೇಷ್ಠ ದೇವರು, ದರ್ಶನ, ಧರ್ಮವೆಂದು ಅಂತರವನ್ನು ಸೃಷ್ಟಿಸಿದ ಸನ್ನಿವೇಶವನ್ನು ಗಮನಿಸಿದ ಶರಣರು, ಮಾನವ–ಮಾನವರಲ್ಲಿ ಭೇದಭಾವವನ್ನು ತೊಡೆದುಹಾಕಿದ್ದು. ಸಂಗ, ಸತ್ಸಂಗ ಎಂಬ ಸೂತ್ರದಿಂದ ಎಂಬುದನ್ನು ಅರಿತು ಅನುಸರಿಸಬೇಕಾದ ಕಾಲ ಇದಾಗಿದೆ. ಜೀವನದ ಪರಮ ಸತ್ಯವನ್ನು ಸರ್ವರಿಗೂ ದಕ್ಕುವಂತೆ ಶರಣರು ಅಂದು ಪಸರಿಸಿದ ಸಂಗ ಸತ್ಸಂಗಗಳು ಇನ್ನಿಲ್ಲದ ಘನತೆಗೆ ಸಾಕ್ಷಿಯಾಗಿವೆ.

ಐವರ ಸಂಗದಿಂದ ಬಂದೆ ನೋಡಯ್ಯಾ
ಐವರ ಸಂಗದಿಂದ ನಿಂದೆ ನೋಡಯ್ಯಾ
ಈ ಐವರೂ ತಮ್ಮ ತಮ್ಮ ಬಟ್ಟೆಯಲ್ಲಿ ಹೋದರು
ನಾನೊಬ್ಬನೆ ನಿಸ್ಸಂಗಿಯಾಗಿ ಉಳಿದೆನಲ್ಲಾ !
ಗುಹೇಶ್ವರನೆಂಬ ನಿತ್ಯನಿರಂಜನ ರೂಹಿಲ್ಲದ ಘನವ ಕಂಡೆನಯ್ಯಾ (ವ. 52)

ಅಲ್ಲಮಪ್ರಭುದೇವರು ಸಂಗ, ಸತ್ಸಂಗದ ಕೊನೆಯ ಘಟ್ಟದ ಸ್ಥಿತಿಗತಿಗಳನ್ನು ಕಂಡ ಅನುಭವವೆಲ್ಲವೂ ಜಗದ ಭಾರವನ್ನು ಸರಳ ಸಹಜತೆಯಿಂದ ಇಳಿಸಿಕೊಂಡು ನಿರಾಳಗೊಳ್ಳುವುದೇ ಆಗಿದೆ. ಮಾನವನ ಸೃಷ್ಟಿಯು ಸಂಘದಿಂದಲೇ ರೂಪು ತಾಳುವುದು, ಸಂಘದಿಂದಲೇ ನಿರಾಳತೆಗೂ ತಲುಪುವುದೆಂಬುದು ಅಲ್ಲಮಪ್ರಭುವಿನ ಸ್ಪಷ್ಟತೆಯಾಗಿದೆ.

ಜೀವಸೃಷ್ಟಿಯ ಈ ಐವರ ಸಂಘದಿಂದ ಬಂದ ಮಾನವನು ತನ್ನ ಬದುಕನ್ನು ಸಾರ್ಥಕತೆಗೆ ಒಯ್ಯುವ ಮಾರ್ಗವೇ ಸತ್ಸಂಗ. ಪಂಚಮಹಾಭೂತಗಳೊಂದಿಗೆ ವ್ಯವಹರಿಸುತ್ತಾ ಪಂಚಮಹಾಭೂತಗಳ ಅಧೀನಕ್ಕೆ ಒಳಗಾಗಿ ಗುಲಾಮನಾಗಿ ಅವು ಕರೆದತ್ತ ಹೋದರೆ ಬದುಕು ಇಹಕ್ಕೆ ಯೋಗ್ಯಗೊಳ್ಳದು. ಪಂಚಮಹಾಭೂತಗಳೆಲ್ಲವೂ ಸತ್ಸಂಗಕ್ಕೆ ಸಂಗತವಾಗಬೇಕೆಂಬುದೇ ಪ್ರಭುದೇವರ ನಿಲುವಾಗಿದೆ. ಶರಣರು ಸಂಘವನ್ನು ರೂಹಿಲ್ಲದ ಘನತ್ವಕ್ಕೆ ತಂದಿರಿಸಿದ, ಅನುಭವದೊಳಗೆ ಬದುಕಿನ ನಿಜತ್ವವನ್ನು ಅರಿತುಕೊಂಡು ಪ್ರತಿಯೊಬ್ಬರೂ ಪರಸ್ಪರ ಸಹಕರಿಸುವ ಸಂಗಾತಿಗಳಾಗಬೇಕೆಂಬ ಕಳಕಳಿ ಇದೆ.

ಅಕ್ಕಮಹಾದೇವಿಯವರು ತಮ್ಮ ಒಂದು ವಚನದೊಳಗೆ ಹೇಳಿದಂತೆ, "ಶರಣರ ಸಂಗವ ಮಾಡಿದಡೆ ಕರ್ಪೂರ ಗಿರಿಯನುರಿಕೊಂಬಂತೆ". ಆಕೆಯ ಉಡುತಡಿಯಿಂದ ಕಲ್ಯಾಣದವರೆಗೆ, ಕಲ್ಯಾಣದಿಂದ ಶ್ರೀಶೈಲದ ಕದಳಿಯವರೆಗೆ ನಡೆದ ಜೀವನಯಾತ್ರೆ ಒಂದು ಅರ್ಥದಲ್ಲಿ ಸಂಗ, ಸತ್ಸಂಗ, ನಿಸ್ಸಂಗದ ಪ್ರತಿರೂಪವೇ ಆಗಿದೆ. ಮಾನವ ಬದುಕು ಶರಣತತ್ವದೊಳಗೆ ಅಡಕಗೊಳ್ಳುವುದೆಂದರೆ, ಕಾಯಕ ದಾಸೋಹ ಸತ್ಸಂಗದೊಳಗೆ ತೊಡಗಿ ನಿರಾಳತೆ ಪರಮ ಸುಖ ಸರಳಗೊಂಡು ಸರ್ವರೊಳಗೆ ಬೆಸೆದುಕೊಳ್ಳುವುದಾಗಿದೆ.

ಶಿವಾಚಾರ ಘನವೆಂಬುದ ಕೇಳಿ, ಭವಿಜಾತವಳಿದು
ಪುನರ್ಜಾತನಾಗಿ, ಅಂಗದ ಮೇಲೆ ಲಿಂಗವ ಧರಿಸಿ
ಆ ಲಿಂಗಜಂಗಮವನಾರಾಧಿಸಿ, ಪ್ರಸಾದವ ಕೊಂಡು
ಭಕ್ತರಾಗಿ ಮುಕ್ತಿಯ ಪಡೆದೆನೆಂಬವರ ಹೆದರಿಸಿ
ಜರೆದು ಝುಂಕಿಸಿ ಕೆಡೆನುಡಿದು, ಆಚಾರವ ಬಿಡಿಸಿ
ಅವರ ಹಿಂದಣ ಭವಿಶೈವದೈವಂಗಳ ಹಿಡಿಸಿ
ತಮ್ಮಂತೆ ನರಕದೊಳಗಾಳಬೇಕೆಂದು
ನಿಮ್ಮ ಮುನ್ನಿನ ಹಿರಿಯರ ಬೆನ್ನ ಬಳಿವಿಡಿದು ಬಂದ
ಕುಲದೈವ ಮನೆದೈವ ಬಿಟ್ಟು
ಈ ಲಿಂಗಜಂಗಮಭಕ್ತಿಯ ಮಾಡಬೇಡೆಂದು
ಹೇಳುವ ಕುನ್ನಿಗಳ ನುಡಿಯ ಕೇಳಲಾಗದೆಂದ, ಕಲಿದೇವಯ್ಯ

**ಮಡಿವಾಳ ಮಾಚಿದೇವ**

# ವಾರ್ತಾವಿಹಾರ

**ಕುಮಾರಸ್ವಾಮಿ ವಿರಕ್ತಮಠ**

**ಚಾಮರಾಜನಗರ ಜಿಲ್ಲೆ ಪ್ರಾಕೃತಿಕವಾಗಿ ಧಾರ್ಮಿಕವಾಗಿ ಶ್ರೀಮಂತವಾಗಿದೆ**

ಚಾಮರಾಜನಗರ ಜಿಲ್ಲೆ ಪ್ರಾಕೃತಿಕ, ಧಾರ್ಮಿಕ ಹಾಗೂ ಆಧ್ಯಾತ್ಮಿಕವಾಗಿ ಭಕ್ತರ ಭಕ್ತಿಯ ಶ್ರೀಮಂತಿಕೆಯ ಮೂಲ ಸ್ಥಳವಾಗಿದೆ ಎಂದು ಪರಮಪೂಜ್ಯ ಜಗದ್ಗುರುಗಳವರು ಮಾರ್ಚ್ 5ರಂದು ಗುಂಡ್ಲುಪೇಟೆ ತಾಲ್ಲೂಕು ಸೋಮಹಳ್ಳಿ ಗ್ರಾಮದಲ್ಲಿ ಸದ್ಗುರು ಷಟ್‌ಸ್ಥಲ ಚಕ್ರವರ್ತಿ ಶ್ರೀ ಸಿದ್ಧಮಲ್ಲಿಕಾರ್ಜುನ ಸ್ವಾಮಿಗಳ 76ನೇ ವಾರ್ಷಿಕ ಆರಾಧನೆ ಮತ್ತು ಶಿಲಾ ಮಠದ ನೂತನ ಕಟ್ಟಡ ಲೋಕಾರ್ಪಣೆಯ ಅಂಗವಾಗಿ ಆಯೋಜಿಸಿದ್ದ ಧಾರ್ಮಿಕ ಸಭೆಯ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಭಾರತ ಆಧ್ಯಾತ್ಮಿಕವಾಗಿ ಸಂಪದ್ಭರಿತ ದೇಶ. ಪ್ರಸ್ತುತ ಜಗತ್ತಿನ ಸ್ಥಿತಿ ಅಲ್ಲೋಲ ಕಲ್ಲೋಲವಾಗಿರುವುದನ್ನು ನೋಡಿದರೆ ಹಿಂದೆ ನಡೆದ ಎರಡನೇ ಮಹಾಯುದ್ಧ ನೆನಪಿಗೆ ಬರುತ್ತದೆ. ಜಪಾನ್ ದೇಶದ ಹಿರೋಶಿಮಾ ಹಾಗೂ ನಾಗಸಾಕಿಗಳ ಮೇಲೆ ಅಣುಬಾಂಬ್ ಬಿದ್ದಿದ್ದು ನೋಡಿದರೆ ಜಗತ್ತಿನ ಕಣ್ಣು ತೆರೆಯಬೇಕು. ಭಾರತ ಅಣುಬಾಂಬ್‌ಗಳಿಗಿಂತ ಆತ್ಮಸ್ಥೈರ್ಯದ ಮೇಲೆ ನಿಂತಿದೆ ಎಂದು ಹೇಳಿದರು.

ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ಬಸವಣ್ಣನವರು ಹೇಳಿದಂತೆ ದಯವೇ ಧರ್ಮದ ಮೂಲವಯ್ಯ ಎಂಬ ಮೌಲ್ಯವನ್ನು ಪರಿಪಾಲಿಸುವುದು ಹಾಗೂ ಧರ್ಮಗಳ ಸಂರಕ್ಷಣೆ ಮಾಡುವುದು ಸಮಾಜದ ಕರ್ತವ್ಯವಾಗಬೇಕು. ಧರ್ಮವನ್ನು ಉಳಿಸಲು ಎಲ್ಲರೂ ಕಂಕಣಬದ್ಧರಾಗಬೇಕು. ಸಾಕಷ್ಟು ಸಹಕಾರ ಹಾಗೂ ಬೆಂಬಲ ನೀಡಿದಾಗ ಮಾತ್ರ ಧರ್ಮ, ಸಂಸ್ಕೃತಿ, ಪರಂಪರೆಗಳು ತಾನಾಗಿಯೇ ಉಳಿಯುತ್ತವೆ. ಜಾತಿ, ಮತ ಒಂದಾಗಿಸುವುದೇ ಲಿಂಗಾಯಿತ ಧರ್ಮದ ಸಾರ ಎಂದು ಅವರು ಹೇಳಿದರು.

ಸಿದ್ದಗಂಗಾ, ಸೋಮಹಳ್ಳಿ, ಕನಕಪುರ, ದೇವನೂರು ಮಠಗಳ ಶ್ರೀಗಳು ಹಾಗೂ ಶಾಸಕರಾದ ಶ್ರೀ ಹೆಚ್.ಎಂ. ಗಣೇಶ್‌ಪ್ರಸಾದ್, ಮಾಜಿ ಶಾಸಕರಾದ ಶ್ರೀ ಸಿ.ಎಸ್. ನಿರಂಜನ್‌ಕುಮಾರ್, ಕಾಡಾ ಮಾಜಿ ಅಧ್ಯಕ್ಷರಾದ ಶ್ರೀ ಎಚ್.ಎಸ್. ನಂಜಪ್ಪ ಮಾತನಾಡಿದರು. ಮಾಜಿ ಶಾಸಕ ಶ್ರೀ ಎಸ್. ಬಾಲರಾಜ್, ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷರಾದ ಶ್ರೀ ಎಚ್.ಎಸ್. ನಂಜುಂಡಪ್ರಸಾದ್, ಕೆಆರ್‌ಐಡಿಲ್ ಮಾಜಿ ಅಧ್ಯಕ್ಷರಾದ ಶ್ರೀ ಎಂ. ರುದ್ರೇಶ್, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾಧ್ಯಕ್ಷರಾದ ಶ್ರೀ ಮೂಡ್ಲುಪುರ ನಂದೀಶ್ ಮೊದಲಾದವರು ಉಪಸ್ಥಿತರಿದ್ದರು.

**ಉಕ್ಕಿನಕಂತೆ ಮಠ ಭಕ್ತರ ಕಷ್ಟಗಳನ್ನು ಪರಿಹರಿಸುವ ಶಕ್ತಿ ಕೇಂದ್ರ**

ಮಾದಹಳ್ಳಿ ಶ್ರೀ ಉಕ್ಕಿನಕಂತೆ ಮಠವು ಆರು ಶತಮಾನಗಳ ಇತಿಹಾಸ ಹೊಂದಿದ್ದು, ಮಠದ ಆರಾಧ್ಯದೈವ ಬೂದಿಸ್ವಾಮಿಗಳು ಸಮಾಜ ಸುಧಾರಕರಾಗಿದ್ದರು ಎಂದು ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ಮಾರ್ಚ್ 7ರಂದು ಹುಣಸೂರು ತಾಲ್ಲೂಕು ಮಾದಹಳ್ಳಿ ಶ್ರೀ ಉಕ್ಕಿನಕಂತೆ ಮಠದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಶ್ರೀ ಗುರು ಬೂದಿಸ್ವಾಮಿಗಳ 397ನೇ ಆರಾಧನೆ, ಶ್ರೀಮಠದ ನೂತನ ಕಟ್ಟಡ, ಹದಿನಾರು ನವೀಕೃತ ಗದ್ದುಗೆಗಳು ಹಾಗೂ ಶತಾಯುಷಿ ಶ್ರೀ ಸಿದ್ದಲಿಂಗ ಸ್ವಾಮಿಗಳ ಸಭಾಂಗಣ ಉದ್ಘಾಟಿಸಿ ಮಾತನಾಡುತ್ತಾ ತಿಳಿಸಿದರು. ಶ್ರೀಮಠವು ದಾಸೋಹದ ಜೊತೆಗೆ ಭಕ್ತರ ಕಷ್ಟಗಳಿಗೆ ಭಸ್ಮದ ರೂಪದಲ್ಲಿ ಪ್ರಸಾದ ವಿತರಿಸುವ ಮೂಲಕ ಪರಿಹಾರ ಸೂಚಿಸುವ ಮಹಾನ್ ಶಕ್ತಿಕೇಂದ್ರವಾಗಿದೆ. ಹಿಂದಿನ ಮಠಾಧೀಶರು ಮಾತ್ರವಲ್ಲದೆ, ಇಂದಿನ ಶ್ರೀ ಸಾಂಬಸದಾಶಿವ ಸ್ವಾಮಿಗಳು ಕೂಡ ಅನ್ನ, ಅಕ್ಷರ ದಾಸೋಹದ ಮೂಲಕ ಮಕ್ಕಳಿಗೆ ಶಿಕ್ಷಣ ನೀಡುತ್ತಿರುವುದು ಪ್ರಶಂಸನೀಯ ಎಂದರು.

ಕನಕಪುರ, ಬೆಟ್ಟದಪುರ, ಗಾವಡಗೆರೆ, ಸಾಲೂರು ಮಠಗಳ ಶ್ರೀಗಳು, ಮಾಜಿ ಶಾಸಕರಾದ ಶ್ರೀ ಎಚ್.ಪಿ. ಮಂಜುನಾಥ್ ಮೊದಲಾದವರು ಉಪಸ್ಥಿತರಿದ್ದರು. ಶ್ರೀ ರಮೇಶ್‌ಕುಮಾರ್ ಸ್ವಾಗತಿಸಿದರು. ಶ್ರೀ ಸಾಂಬಸದಾಶಿವ ಸ್ವಾಮಿಗಳು ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀ ಕೆ.ಹೆಚ್. ವೀರಭದ್ರಪ್ಪ ವಂದಿಸಿದರು. ಶ್ರೀಮತಿ ಸವಿತಾ ಶಿವಕುಮಾರ್ ಕಾರ್ಯಕ್ರಮ ನಿರೂಪಿಸಿದರು.

**ಸೌಹಾರ್ದತೆಯ ಜೀವನ ಮರುಸ್ಥಾಪನೆ ಮಠಗಳಿಂದ ಮಾತ್ರ ಸಾಧ್ಯ**

ಈ ನೆಲದ ಸಂಸ್ಕೃತಿ, ಪರಂಪರೆ, ಸೌಹಾರ್ದತೆ ಮತ್ತು ಕುಟುಂಬ ಜೀವನವನ್ನು ಮರುಸ್ಥಾಪಿಸಲು ಮಠಮಾನ್ಯಗಳಿಂದ ಮಾತ್ರ ಸಾಧ್ಯವಿದೆ ಎಂದು ಕೇಂದ್ರ ಸಚಿವರಾದ ಶ್ರೀ ಹೆಚ್.ಡಿ. ಕುಮಾರಸ್ವಾಮಿಯವರು ಮಾರ್ಚ್ 7ರಂದು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಹುಣಸೂರು ತಾಲ್ಲೂಕು ಮಾದಹಳ್ಳಿ ಶ್ರೀ ಉಕ್ಕಿನಕಂತೆ ಮಠದ ಶ್ರೀ ಗುರು ಬೂದಿಸ್ವಾಮಿಗಳ 397ನೇ ಆರಾಧನೆ, 63 ಪ್ರಮಥರ ಪೂಜೆ, ಶ್ರೀಮಠದ ನೂತನ ಕಟ್ಟಡ ಮತ್ತು ಬಸವ ದ್ವಾರ ಉದ್ಘಾಟನಾ ಸಮಾರಂಭದ ಅಂಗವಾಗಿ ನಡೆದ ಧಾರ್ಮಿಕ ಸಭೆಯಲ್ಲಿ ಮಾತನಾಡುತ್ತಾ ತಿಳಿಸಿದರು. ಮಾದಹಳ್ಳಿಯಂತಹ ಪುಟ್ಟ ಹಳ್ಳಿಯಲ್ಲಿ ನಮ್ಮೆಲ್ಲರ ಆರಾಧ್ಯದೈವ ಶ್ರೀ ಮಲೆ ಮಹದೇಶ್ವರ ಸ್ವಾಮಿಯ ಪಾದಸ್ಪರ್ಶ ಆಗಿದೆ ಎನ್ನುವುದೇ ಈ ನೆಲದ ಮಹಿಮೆಯನ್ನು ತಿಳಿಸುತ್ತದೆ. ಈ ಹಿಂದೆ ನಮ್ಮ ಗ್ರಾಮೀಣರ ಬದುಕು ಯಾವುದೇ ಮೂಲಸೌಕರ್ಯಗಳಿಲ್ಲದೆಯೂ ಸುಂದರವಾಗಿತ್ತು. ಎಲ್ಲ ಸೌಕರ್ಯಗಳನ್ನು ಹೊಂದಿ ಆಡಂಬರದ ಜೀವನ ನಡೆಸುವ ಇಂದಿನ ದಿನಮಾನಗಳಲ್ಲಿ ಗ್ರಾಮಗಳಲ್ಲಿ ಒಂದೇ ಧ್ವನಿಯಿಂದ ತೀರ್ಮಾನಗಳನ್ನು ತೆಗೆದುಕೊಳ್ಳಲಾಗದ ಪರಿಸ್ಥಿತಿ ಇದೆ ಎಂದರು.

ಸಚಿವರಾದ ಡಾ. ಹೆಚ್.ಸಿ. ಮಹದೇವಪ್ಪನವರು ಬಸವಣ್ಣನವರ ವಚನ ಸಾಹಿತ್ಯ ಚಳುವಳಿ ಲಿಂಗತಾರತಮ್ಯದ ವಿರುದ್ಧ ಸಮಸಮಾಜದ ಸೃಷ್ಟಿಯ ಪರಿಕಲ್ಪನೆಯನ್ನು ನೀಡಿತು. ಸಂವಿಧಾನಶಿಲ್ಪಿ ಅಂಬೇಡ್ಕರ್‌ರವರು ಅದನ್ನೇ ಹಿಂದೂ ಕೋಡ್ ಬಿಲ್ ಮೂಲಕ ಪ್ರತಿಪಾದಿಸಿದರು. ಬಸವಣ್ಣನವರು ಅನುಭವ ಮಂಟಪದಲ್ಲಿ ಸಮಸಮಾಜದ ಪರಿಕಲ್ಪನೆಯೊಂದಿಗೆ ಎಲ್ಲರಿಗೂ ಪ್ರಾತಿನಿಧ್ಯ ನೀಡಿದರು. ಸಮಾನತೆ, ಭ್ರಾತೃತ್ವ ಇಂದು ನಮಗೆ ಬೇಕಿದೆ. ಶ್ರಮ ಮತ್ತು ವಿತರಣೆಯೊಂದಿಗೆ ಸಹೋದರತ್ವ, ಸಮಾನತೆಯನ್ನು ನೀಡುವ ಉದ್ದೇಶವನ್ನು ಲಿಂಗಾಯತ ಧರ್ಮ ಹೊಂದಿದೆ ಎಂದರು.

ಸಚಿವರಾದ ಶ್ರೀಮತಿ ಲಕ್ಷ್ಮೀ ಆರ್. ಹೆಬ್ಬಾಳ್ಕರ್‌ರವರು ಗುರುಕುಲ ಪರಂಪರೆ ನಮ್ಮ ನೆಲದ ಅಸ್ಮಿತೆಯಾಗಿತ್ತು. ತ್ರೇತಾಯುಗ ಮತ್ತು ದ್ವಾಪರಯುಗಗಳಲ್ಲಿ ಗುರುಗಳು ಶಿಷ್ಯರಿಗೆ ವಿದ್ಯೆ ಕಲಿಸುವ ವೇಳೆ ಜೀವನಪಾಠವನ್ನೂ ಹೇಳುತ್ತಿದ್ದರು. ಆದರೆ ಇಂದು ಗುರು ಶಿಷ್ಯ ಸಂಬಂಧಗಳು ತಲೆಕೆಳಗಾಗಿವೆ. ಜನಪ್ರತಿನಿಧಿಗಳಾಗಿ ನಾವು ಸ್ವಾರ್ಥದಿಂದಲೇ ಕಾರ್ಯ ನಡೆಸುತ್ತೇವೆ. ಆದರೆ ಸಾವಿರಾರು ವರ್ಷಗಳಿಂದ ನಿಸ್ವಾರ್ಥವಾಗಿ ದುಡಿಯುವ ಕೇಂದ್ರಗಳೆಂದರೆ ಮಠಮಾನ್ಯಗಳಾಗಿದ್ದು, ಈಗಲೂ ಮಠಮಾನ್ಯಗಳೇ ಈ ಸಮಾಜಕ್ಕೆ ದಾರಿ ತೋರಬೇಕಿದೆ ಎಂದರು.

ಶ್ರೀ ಸಿದ್ಧಗಂಗಾ, ಮಾದಹಳ್ಳಿ, ಗಾವಡಗೆರೆ, ಕೆ.ಆರ್. ನಗರದ ಕಾಗಿನೆಲೆ ಶಾಖಾಮಠ, ಕುಂದೂರು ಮಠಗಳ ಶ್ರೀಗಳು, ಶಾಸಕರಾದ ಶ್ರೀ ಜಿ.ಡಿ. ಹರೀಶ್‌ಗೌಡ, ಶ್ರೀ ದಿನೇಶ್ ಗೂಳಿಗೌಡ, ಶ್ರೀ ಡಿ. ರವಿಶಂಕರ್, ಶ್ರೀ ಸಿ.ಎನ್. ಮಂಜೇಗೌಡ, ಮಾಜಿ ಸಚಿವರಾದ ಶ್ರೀ ಸಾ.ರಾ. ಮಹೇಶ್, ಮಾಜಿ ಶಾಸಕರಾದ ಶ್ರೀ ಅಯನೂರು ಮಂಜುನಾಥ್, ಶ್ರೀ ಅಶ್ವಿನ್‌ಕುಮಾರ್, ಶ್ರೀ ಎಚ್.ಎಸ್. ರಮೇಶ್, ಶ್ರೀ ಯು.ಎಸ್. ಶೇಖರ್ ಮೊದಲಾದವರು ಉಪಸ್ಥಿತರಿದ್ದರು. ಶ್ರೀ ಶ್ರೀನಿವಾಸ್ ಮತ್ತು ತಂಡದವರು ಪ್ರಾರ್ಥಿಸಿದರು. ಶ್ರೀ ಹೆಚ್.ಎಸ್. ಸೋಮಶೇಖರ್ ಸ್ವಾಗತಿಸಿದರು. ಡಾ. ವೃಷಭೇಂದ್ರಸ್ವಾಮಿ ಪ್ರಾಸ್ತಾವಿಕವಾಗಿ ಮಾತನಾಡಿದರು.

**ಅಂಕ ಪ್ರತಿಷ್ಠಾಪನೆಯಿಂದ ಸಾತ್ವಿಕ ಭಾವನೆ ವೃದ್ಧಿ**

ಅಂಕ ಪ್ರತಿಷ್ಠಾಪನೆಯನ್ನು ಮಾಡುವುದರಿಂದ ಸಾತ್ವಿಕ ಭಾವನೆ ಬೆಳೆಯುತ್ತದೆ ಎಂದು ಪರಮಪೂಜ್ಯ ಜಗದ್ಗುರುಗಳವರು ಮಾರ್ಚ್ 8ರಂದು ಗುಂಡ್ಲುಪೇಟೆ ತಾಲ್ಲೂಕು ಶಿಂಡನಪುರದಲ್ಲಿ ಅಂಕ ಪ್ರತಿಷ್ಠಾಪನೆ ಮತ್ತು ಶ್ರೀ ಸ್ಕಂದಗಿರಿ ಪಾರ್ವತಾಂಬ ಹಾಗೂ ಗ್ರಾಮದೇವತೆ ಮಾರಮ್ಮನ ಮಹಾದ್ವಾರ ಉದ್ಘಾಟನೆ ಮಹೋತ್ಸವದ ದಿವ್ಯ ಸಾನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಪ್ರತಿ ಗ್ರಾಮಗಳಲ್ಲೂ ಅಂಕ ಪ್ರತಿಷ್ಠಾಪನೆ ಮಾಡುವುದರಿಂದ ಒಂದು ಸಾತ್ವಿಕ ಬದ್ಧತೆಯನ್ನು ಆ ಗ್ರಾಮಕ್ಕೆ ಕೊಟ್ಟಂತಾಗುತ್ತದೆ. ಯಾವುದೇ ಒಂದು ಕಾರ್ಯವನ್ನು ಮಾಡಬೇಕೆನ್ನುವ ಮನಸ್ಸಿದ್ದರೆ ಸೋಮೇಶ್ವರ ಪಾರ್ವತಾಂಬ ದೇವಾಲಯಕ್ಕೆ ಭೇಟಿ ನೀಡಿ ಪೂಜಾ ಪುರಸ್ಕಾರಗಳನ್ನು ಮಾಡಬೇಕು ಎನ್ನುವ ಪ್ರತೀತಿ ಮೊದಲಿನಿಂದಲೂ ಇಲ್ಲಿ ನಡೆದುಕೊಂಡು ಬಂದಿದೆ. ಹಾಗಾಗಿ ಅಕ್ಕಪಕ್ಕದ

ಗ್ರಾಮಸ್ಥರು ಹಾಗೂ ಚಾಮರಾಜನಗರ ಜಿಲ್ಲೆಯ ಸುತ್ತಮುತ್ತಲ ಭಕ್ತಾದಿಗಳು ಮಹಾಪಾರ್ವತಿ ಬೆಟ್ಟಕ್ಕೆ ಬಂದು ಪೂಜಾ ಕೈಂಕರ್ಯಗಳನ್ನು ನೆರವೇರಿಸಿಕೊಂಡು ಹೋಗುತ್ತಿದ್ದಾರೆ ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಕು. ಎನ್. ಸಿಂಚನರವರು ನಂಬಿಕೆ ಮತ್ತು ಪೌರಾಣಿಕ ಮಹಿಮೆ ಒಂದೇ ಸ್ಥಳದಲ್ಲಿ ಸೇರುವ ಅದ್ಭುತ ಕ್ಷೇತ್ರವೆಂದರೆ ಕಂದೇಗಾಲದ ಸೋಮೇಶ್ವರ ಸಹಿತ ಪಾರ್ವತಾಂಭ ದೇವಾಲಯ. ಈ ಪವಿತ್ರ ಕ್ಷೇತ್ರದ ಮಹಿಮೆ, ಇತಿಹಾಸ ಮತ್ತು ವಿಶೇಷತೆಯನ್ನು ಹಂಚಿಕೊಳ್ಳಲು ನಿಮ್ಮ ಎದುರಿಗೆ ನಿಂತಿದ್ದೇನೆ. ಸೃಷ್ಟಿಯ ಲಯಕರ್ತನಾದ ಪರಮೇಶ್ವರನು ಪಾರ್ವತಿಯ ಜೊತೆಗೂಡಿ ತನ್ನನ್ನು ನಂಬಿರುವ ಭಕ್ತರನ್ನು ಬೆಂಬಿಡದೆ ಪೊರೆಯುತ್ತಿದ್ದಾನೆ. ಇಡೀ ಜಗತ್ತಿಗೆ ತಂದೆ–ತಾಯಿಯಾಗಿರುವ ಶಿವ–ಪಾರ್ವತಿಯರು ಆದರ್ಶ ದಂಪತಿಗಳ ಸ್ವರೂಪವೂ ಹೌದು. ಇದೇ ಕಾರಣದಿಂದಾಗಿಯೇ ಮದುವೆ ಮಹೋತ್ಸವಗಳ ಸಂದರ್ಭದಲ್ಲಿ ಗೌರಿ ಪೂಜೆಯನ್ನು ಮಾಡಿಸಲಾಗುತ್ತದೆ. ಕಲ್ಲು ಬಂಡೆಗಳಿಂದ ಆವೃತವಾಗಿರುವ ಸುಂದರವಾದ ಪ್ರದೇಶವನ್ನು ಹೊಂದಿರುವ ಕಂದೇಗಾಲದಲ್ಲಿ ಪುರಾತನವಾದ ಸೋಮೇಶ್ವರ ಸಹಿತ ಪಾರ್ವತಾಂಭ ದೇವಿಯ ಸನ್ನಿಧಾನವಿದ್ದು ಈ ದೇಗುಲವು ಸುಂದರವಾದ ಗೋಪುರ, ಪ್ರದಕ್ಷಿಣಪಥ, ನವರಂಗವನ್ನು ಒಳಗೊಂಡಿದೆ. ಈ ಸ್ಥಳವನ್ನು ಸ್ಕಂದಗಿರಿ ಕಂದೇಗಾಲಬೆಟ್ಟ ಎಂಬ ಹೆಸರಿನಿಂದ ಕರೆಯುತ್ತಾರೆ. ಬೊಮ್ಮರಸ ಮತ್ತು ತಿಮ್ಮರಸರ ಕಾಲದಲ್ಲಿ ಈ ದೇವಾಲಯವು ನಿರ್ಮಾಣವಾಗಿದೆ ಎಂದು ಹೇಳಲಾಗುತ್ತದೆ. ಈ ಕ್ಷೇತ್ರದಲ್ಲಿ ಪರಮೇಶ್ವರ ಸ್ವಯಂಭುವಾಗಿ ನೆಲೆನಿಂತಿದ್ದು ಪಾರ್ವತಿದೇವಿಯ ವಿಗ್ರಹವನ್ನು ಅಗಸ್ತ್ಯ ಮುನಿಗಳು ಪ್ರತಿಷ್ಠಾಪಿಸಿ ಪೂಜಿಸಿದರೆಂದು ಪ್ರತೀತಿ ಇದೆ. ಇನ್ನು ವಿಂಧ್ಯಪರ್ವತದ ಅಹಂಕಾರವನ್ನು ದೂರ ಮಾಡಲೆಂದು ದಕ್ಷಿಣ ದಿಕ್ಕಿನತ್ತ ಪ್ರಮಾಣ ಮಾಡುತ್ತ ಬಂದ ಅಗಸ್ತ್ಯರು ಇಲ್ಲಿನ ಪ್ರಶಾಂತವಾದ ವಾತಾವರಣಕ್ಕೆ ಮನಸೋತು ಈ ಪ್ರದೇಶದಲ್ಲಿ ಪಾರ್ವತಿ ಪರಮೇಶ್ವರರ ಕುರಿತಾಗಿ ತಪಸ್ಸನ್ನು ಆಚರಿಸಿದರು. ಆಗ ಅವರ ತಪಸ್ಸಿಗೆ ಮೆಚ್ಚಿ ಪರಮೇಶ್ವರನು ಪಾರ್ವತಿ ದೇವಿ ಸಮೇತನಾಗಿ ಅಗಸ್ತ್ಯರಿಗೆ ದರ್ಶನವನ್ನು ನೀಡಿದನು. ಶಿವನು ಇಲ್ಲಿ ಸ್ವಯಂಭುವಾಗಿ ನೆಲೆಸಿದನು ಎಂದು ಇಲ್ಲಿನ ಸ್ಥಳ ಮಹಾತ್ಮೆಯಲ್ಲಿ ತಿಳಿಸಲಾಗಿದೆ. ನಂತರ ಅಗಸ್ತ್ಯರು ತಾವು ಯಾವ ರೂಪದಲ್ಲಿ ಪಾರ್ವತಿದೇವಿಯನ್ನು ಕಣ್ತುಂಬಿಕೊಂಡರೋ ಅದೇ ರೂಪದಲ್ಲಿ ದೇವಿಯ ವಿಗ್ರಹವನ್ನು ಕೆತ್ತಿಸಿ ಈ ಕ್ಷೇತ್ರದಲ್ಲಿ ಪ್ರತಿಷ್ಠಾಪಿಸಿದರೆಂದು ಪ್ರತೀತಿ ಇದೆ. ಅಲ್ಲೆ, ಅಗಸ್ತ್ಯರ ಅಪೇಕ್ಷೆ ಮೇರೆಗೆ ಪಾರ್ವತಿ ಪರಮೇಶ್ವರರು ಮತ್ತೊಮ್ಮೆ ವಿವಾಹವಾದರೆಂಬ ನಂಬಿಕೆ ಇದೆ. ಹೀಗಾಗಿ ವಿವಾಹ ವಿಳಂಬ ಸಮಸ್ಯೆ ಇರುವವರು ಈ ಕ್ಷೇತ್ರಕ್ಕೆ ಬಂದು ಕಲ್ಯಾಣೋತ್ಸವ ಸೇವೆಯನ್ನು ಮಾಡಿದರೆ ಅವರಿಗೆ ಕಂಕಣಬಲ ಕೂಡಿ ಬರುತ್ತದೆ ಎಂದು ಹೇಳಲಾಗುತ್ತದೆ. ಇವಷ್ಟು ಸಂಗತಿಗಳಲ್ಲದೆ, ತಾರಕಾಸುರನನ್ನು ಸಂಹರಿಸಿದ ಬಳಿಕ ಈ ಸ್ಥಳದಲ್ಲಿ ಸುಬ್ರಹ್ಮಣ್ಯಸ್ವಾಮಿಯು ತಪಸ್ಸನ್ನಾಚರಿಸಿದ ಸ್ಥಳವಾದ್ದರಿಂದ ಇಲ್ಲಿರುವ ಬೆಟ್ಟವನ್ನು ಸ್ಕಂದಗಿರಿ ಎಂಬ ಹೆಸರಿನಿಂದಲು ಕರೆಯುತ್ತಾರೆ ಎಂದು ಸ್ಥಳ ಮಹಿಮೆಯ ಬಗ್ಗೆ ತಿಳಿಸಿದರು.

ಸಿದ್ಧಗಂಗಾ ಮಠದ ಕಿರಿಯ ಶ್ರೀಗಳು, ಪಡುಗೂರು, ದೇವನೂರು, ಸೋಮಹಳ್ಳಿ, ಹಂಗಳ, ಗೋಪಾಲಪುರ, ಮೂಡುಗೂರು, ಬೊಮ್ಮನಹಳ್ಳಿ, ಚಿಕ್ಕತುಪ್ಪೂರು, ಮರಿಯಾಲ ಮಠಗಳ ಶ್ರೀಗಳು ಶಾಸಕರಾದ ಶ್ರೀ ಹೆಚ್.ಎಂ. ಗಣೇಶ್‌ಪ್ರಸಾದ್, ಮಾಜಿ ಶಾಸಕರಾದ ಶ್ರೀ ಸಿ.ಎಸ್. ನಿರಂಜನ್‌ಕುಮಾರ್, ಶ್ರೀ ಎಸ್.ಸಿ. ಶಿವಮೂರ್ತಿ ಮೊದಲಾದವರು ಉಪಸ್ಥಿತರಿದ್ದರು.

**ಗ್ರಾಮೀಣ ವಿದ್ಯಾರ್ಥಿಗಳಿಂದ ಹೆಚ್ಚು ಸಾಧನೆ**

ಸಣ್ಣ ಕೈಗಾರಿಕೆ, ಕೃಷಿಯಿಂದ ಹಿಡಿದು ಅಂತರರಾಷ್ಟ್ರೀಯ ಮಟ್ಟದ ಬೃಹತ್ ಕಂಪನಿಗಳನ್ನೂ ಕೂಡ ಮುನ್ನಡೆಸುವ ಮೂಲಕ ತಾವು ಸಮರ್ಥರು ಎಂಬುದನ್ನು ಮಹಿಳೆಯರು ನಿರೂಪಿಸಿದ್ದಾರೆ ಎಂದು ಪರಮಪೂಜ್ಯ ಜಗದ್ಗುರುಗಳವರು ಮಾರ್ಚ್ 10ರಂದು ಮೈಸೂರು ಶ್ರೀ ಶಿವರಾತ್ರಿ ರಾಜೇಂದ್ರ ಭವನದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಮಹಿಳಾ ಘಟಕದ ವತಿಯಿಂದ ಆಯೋಜಿಸಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಈ ಹಿಂದೆ ಮಹಿಳೆಯರು ಎಂದರೆ ಮಕ್ಕಳನ್ನು ಓದಿಸಬೇಕು, ಮನೆಯ ಕೆಲಸ ಮಾಡಿಕೊಂಡಿರಬೇಕು ಎಂಬ ಮಾತಿತ್ತು. ಆದರೆ ಇಂದು ಕೆಲ ಮನೆಗಳಲ್ಲಿ ಹೊರಗೆ ಕೆಲಸ ಮಾಡಿಕೊಂಡು ಪತಿ ಸೇರಿದಂತೆ ಇಡೀ ಕುಟುಂಬವನ್ನು ಮುನ್ನಡೆಸುತ್ತಿರುವುದು ಸಂತಸದ ಸಂಗತಿ. ಇಂದು ಸಾಕಷ್ಟು ವಿಶ್ವವಿದ್ಯಾಲಯಗಳಲ್ಲಿ ನಡೆಯುವ ಘಟಿಕೋತ್ಸವಗಳಲ್ಲಿ ಶೇ. 80 ವಿದ್ಯಾರ್ಥಿನಿಯರೇ ಚಿನ್ನದ ಪದಕ ಪಡೆಯುವವರಲ್ಲಿ ಮೊದಲಿಗರಾಗಿರುತ್ತಾರೆ. ಅದರಲ್ಲಿಯೂ ಗ್ರಾಮೀಣ ಭಾಗದ ವಿದ್ಯಾರ್ಥಿಗಳೇ ಹೆಚ್ಚು ಸಾಧನೆ ಮಾಡುತ್ತಿದ್ದಾರೆ ಎಂದರು.

ಇದೇ ಸಂದರ್ಭದಲ್ಲಿ ಜೆಎಸ್‌ಎಸ್ ಡೆಂಟಲ್ ಕಾಲೇಜಿನ ಸಹ ಪ್ರಾಧ್ಯಾಪಕರಾದ ಡಾ. ಬೃಂದಾ ಸುಹಾಸ್ ಗೋದಿ ಹಾಗೂ ಬಿಎಸ್ಸಿ ಪದವಿಯಲ್ಲಿ ಚಿನ್ನದ ಪದಕ ಪಡೆದಿರುವ ಕು. ಕೀರ್ತನಾ ಅವರುಗಳನ್ನು ಸನ್ಮಾನಿಸಲಾಯಿತು.

ಅಪರ ಜಿಲ್ಲಾಧಿಕಾರಿಗಳಾದ ಡಾ. ಪಿ. ಶಿವರಾಜು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷರಾದ ಶ್ರೀ ಹೆಚ್.ವಿ. ಬಸವರಾಜು ಅಧ್ಯಕ್ಷತೆ ವಹಿಸಿದ್ದರು. ಬಸವ ಬಳಗಗಳ ಒಕ್ಕೂಟದ ಸಮಿತಿ ಅಧ್ಯಕ್ಷರಾದ ಶ್ರೀ ಎಂ. ಚಂದ್ರಶೇಖರ್ ಉಪಸ್ಥಿತರಿದ್ದರು. ಮಹಿಳಾ ಘಟಕದ ಅಧ್ಯಕ್ಷರಾದ ಶ್ರೀಮತಿ ಧನ್ಯ ಸತ್ಯೇಂದ್ರಮೂರ್ತಿ ಸ್ವಾಗತಿಸಿದರು. ಶ್ರೀಮತಿ ಮಲ್ಲಿಕಾ ಮಹದೇವಸ್ವಾಮಿ ಕಾರ್ಯಕ್ರಮ ನಿರೂಪಿಸಿದರು.

**ಗವಾಯಿದ್ವಯರು ಅಂಧರ ಪಾಲಿನ ನೇತ್ರಗಳಾಗಿದ್ದರು**

ಅಂಧರು–ಅನಾಥರಿಗೆ ಎರಡು ನೇತ್ರಗಳ ಹಾಗೆ ಪ್ರಜ್ವಲಮಾನವಾಗಿ ಬೆಳಗಿ ಬೆಳಕನ್ನು ನೀಡಿದ ಪುಣ್ಯ ಪುರುಷರು ಗವಾಯಿದ್ವಯರು ಎಂದು ಪರಮಪೂಜ್ಯ ಜಗದ್ಗುರುಗಳವರು ಮಾರ್ಚ್ 15ರಂದು ಮೈಸೂರು ಸರಸ್ವತಿಪುರಂನ ಜೆಎಸ್‌ಎಸ್ ಮಹಿಳಾ ಕಾಲೇಜಿನ

ನವಜ್ಯೋತಿ ಸಭಾಂಗಣದಲ್ಲಿ ಶ್ರೀ ಗಾನಯೋಗಿ ಕಲಾ ಟ್ರಸ್ಟ್ ವತಿಯಿಂದ ಏರ್ಪಡಿಸಿದ್ದ ಗಾನಯೋಗಿ ಪಂಡಿತ ಪಂಚಾಕ್ಷರಿ ಗವಾಯಿಗಳ 135ನೇ ಹಾಗೂ ಪದ್ಮಭೂಷಣ ಡಾ. ಪುಟ್ಟರಾಜ ಗವಾಯಿಗಳ 112ನೇ ಜಯಂತ್ಯುತ್ಸವ, ಪ್ರಶಸ್ತಿ ಪ್ರದಾನ ಹಾಗೂ ಸಂಗೀತೋತ್ಸವದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಹಾನಗಲ್ ಶ್ರೀ ಕುಮಾರ ಸ್ವಾಮಿಗಳ ಶಿಷ್ಯರಾಗಿದ್ದ ಪಂಚಾಕ್ಷರಿ ಗವಾಯಿಗಳು ಸಂಗೀತ ಕಲಿಯುವ ಸಮಯದಲ್ಲಿ ಸಾಂಸಾರಿಕ ಜೀವನಕ್ಕೆ ಕಾಲಿಡುವ ಅಭಿಲಾಷೆ ಹೊಂದಿದ್ದರು. ಆದರೆ ಅವರು ಆ ಅಭಿಲಾಷೆಯನ್ನು ಬಿಟ್ಟು ದೃಢವಾದ ಒಂದು ನಿರ್ಧಾರ ಮಾಡಿದ್ದರಿಂದ ಸಂತರಾಗುವುದಕ್ಕೆ ಸಾಧ್ಯವಾಯಿತು. ಜೀವನದಲ್ಲಿ ನಡೆಯುವಂತಹ ಒಂದೊಂದು ಘಟನೆಯೂ ಬದುಕಿನಲ್ಲಿ ಹೇಗೆ ತಿರುವು ನೀಡುತ್ತದೆ ಎನ್ನುವುದಕ್ಕೆ ಆ ಒಂದು ಘಟನೆ ಸಾಕ್ಷಿಯಾಗುತ್ತದೆ. ಒಂದು ವೇಳೆ ಅವರ ಮನಸ್ಸು ಸ್ವಲ್ಪ ವ್ಯತ್ಯಯವಾಗಿ ಇಂತಹ ಸಾಧನೆ ಸಾಧ್ಯವಾಗುತ್ತಿರಲಿಲ್ಲ. ಪುಟ್ಟರಾಜ ಗವಾಯಿಗಳು, ವೀರೇಶ್ವರ ಪುಣ್ಯಾಶ್ರಮದ ಈಗಿನ ಗುರುಗಳಾದ ಕಲ್ಲಯ್ಯಜ್ಜನವರೂ ಇರುತ್ತಿರಲಿಲ್ಲ. ಒಂದು ನಿರ್ಧಾರ ಸಂಗೀತ ಪರಂಪರೆಯನ್ನು ಹೇಗೆ ಬೆಳೆಸಿಕೊಂಡು ಬಂತು ಎನ್ನುವುದಕ್ಕೆ ಇದು ಒಂದು ಉದಾಹರಣೆ. ಪಂಡಿತ ಪಂಚಾಕ್ಷರ ಗವಾಯಿಗಳು ಹಾಗೂ ಪಂಡಿತ ಪುಟ್ಟರಾಜ ಗವಾಯಿಗಳು ಅಂಧ ಮಕ್ಕಳ ಪಾಲಿಗೆ ಎರಡು ಕಣ್ಣುಗಳಿದ್ದ ಹಾಗೆ. ಗವಾಯಿಗಳು ಯಾವುದೇ ಶ್ರೀಮಂತ ಕುಟುಂಬದಲ್ಲಿ ಜನಿಸಿದವರಲ್ಲ. ಅವರಲ್ಲಿ ಅಂತರ್ಗತವಾಗಿದ್ದ ಪ್ರತಿಭೆಯನ್ನು ವಿಕಾಸ ಮಾಡಿಕೊಂಡು ತಾವೂ ಬೆಳೆದು, ತಮ್ಮಂತಹ ಮಕ್ಕಳನ್ನು ಬೆಳಸಿದ ಶ್ರೇಯಸ್ಸು ಅವರಿಗೆ ಸಲ್ಲುತ್ತದೆ. ಗವಾಯಿಗಳ ವೀರೇಶ್ವರ ಪುಣ್ಯಾಶ್ರಮಕ್ಕೆ ಯಾವುದೇ ಆಸ್ತಿ ಇಲ್ಲ. ಭಿಕ್ಷಾಜೋಳಿಗೆಯೇ ಅವರ ಆಸ್ತಿ. ವಚನ ಸಾಹಿತ್ಯವನ್ನು ಸಂಗೀತಕ್ಕೆ ಅಳವಡಿಸಿದ ಕೀರ್ತಿ ಅವರ ಪರಂಪರೆಗೆ ಸಲ್ಲುತ್ತದೆ. ಅವರ ಶಿಷ್ಯರು ಸಂಗೀತ ಕಛೇರಿಗಳಲ್ಲಿ ವಚನ ಹಾಡುವುದಕ್ಕೆ ಪ್ರಾರಂಭಿಸಿದರು. ಹೀಗಾಗಿ ಪ್ರಸ್ತುತ ದಿನಮಾನದಲ್ಲಿ ವಚನ ಸಾಹಿತ್ಯವನ್ನೇ ಆಧರಿಸಿ ಪೂರ್ಣ ಪ್ರಮಾಣದ ಕಛೇರಿ ಮಾಡುವಂತಾಗಿರುವುದು ಸಂತೋಷಕರ ವಿಷಯವಾಗಿದೆ ಎಂದು ಹೇಳಿದರು.

ಪಂಡಿತ ಎಂ. ವೆಂಕಟೇಶಕುಮಾರ್‌ರವರಿಗೆ ಗಾನಯೋಗಿ ಪ್ರಶಸ್ತಿ ಪ್ರದಾನ ಮಾಡಲಾಯಿತು. ಡಾ. ರಮಾ ವಿ. ಬೆಣ್ಣೂರುರವರು ರಚಿಸಿರುವ ನಾದಯೋಗಿಯ ಪಯಣ ಮತ್ತು ಗುರು ನಡೆದ ಹಾದಿಯಲ್ಲಿ ಕೃತಿಗಳನ್ನು ಬಿಡುಗಡೆಗೊಳಿಸಲಾಯಿತು. ವಿಶೇಷಚೇತನರಿಗೆ ಪರಿಕರಗಳನ್ನು ವಿತರಿಸಲಾಯಿತು.

ಶ್ರೀ ವೀರೇಶ್ವರ ಪುಣ್ಯಾಶ್ರಮದ ಶ್ರೀ ಕಲ್ಲಯ್ಯಜ್ಜನವರು, ಪಂಡಿತ ಎಂ. ಕಲ್ಲಿನಾಥಶಾಸ್ತ್ರಿ ಅಡ್ನೂರರವರು ಮಾತನಾಡಿದರು. ಶ್ರೀ ಕುಂದೂರು ಮಠದ ಡಾ. ಶ್ರೀ ಶರತ್‌ಚಂದ್ರ ಸ್ವಾಮಿಗಳು ಹಾಗೂ ಮುಡಿಗುಂಡದ ಶ್ರೀ ಶ್ರೀಕಂಠ ಸ್ವಾಮಿಗಳು ಕೃತಿಗಳ ಕುರಿತು ಮಾತನಾಡಿದರು. ಮಾಜಿ ಶಾಸಕರಾದ ಶ್ರೀ ತೋಂಟದಾರ್ಯ ಉಪಸ್ಥಿತರಿದ್ದರು. ಪಂ. ಪಂಚಾಕ್ಷರಿ ಗವಾಯಿಗಳ ಸಂಗೀತ ಶಾಲೆಯ ವಿದ್ಯಾರ್ಥಿಗಳು ಪ್ರಾರ್ಥಿಸಿದರು. ಶ್ರೀ ಮ.ಗು. ಸದಾನಂದಯ್ಯ ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀ ಎಚ್.ಎನ್. ಲೋಕೇಶಪ್ಪ

ಸ್ವಾಗತಿಸಿದರು. ಶ್ರೀ ಬಿ.ಎನ್. ನಂದೀಶ್ ವಂದಿಸಿದರು. ಪ್ರೊ. ಡಿ.ಎಸ್. ಸದಾಶಿವಮೂರ್ತಿ ಕಾರ್ಯಕ್ರಮ ನಿರೂಪಿಸಿದರು.

**ಕೃಷಿಕರಿಗೆ ಉಪಕಾರಿಯಾಗಿದ್ದ ಡಾ. ಎಂ. ಮಹದೇವಪ್ಪ**

ಅನೇಕ ಹೊಸ ಭತ್ತದ ತಳಿಗಳನ್ನು ಸಂಶೋಧಿಸುವ ಮೂಲಕ ಡಾ. ಮಹದೇವಪ್ಪನವರು ಕೃಷಿಕರಿಗೆ ಉಪಕಾರಿಯಾಗಿದ್ದರು ಎಂದು ಪರಮಪೂಜ್ಯ ಜಗದ್ಗುರುಗಳವರು ಮಾರ್ಚ್ 16ರಂದು ಮೈಸೂರು ಸರಸ್ವತಿಪುರಂ ಜೆಎಸ್ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಕೆಂದಾವರೆ ಮಹದೇವಪ್ಪ ಸೇವಾ ಟ್ರಸ್ಟ್ ವತಿಯಿಂದ ಏರ್ಪಡಿಸಿದ್ದ ಪದ್ಮಭೂಷಣ ಡಾ. ಎಂ. ಮಹದೇವಪ್ಪನವರ ಜೀವನಾಧರಿತ 'ಕೃಷಿ ಋಷಿ ನಡೆದು ಬಂದ ದಾರಿ' ಕೃತಿ ಲೋಕಾರ್ಪಣೆಯ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಅಧಿಕ ಇಳುವರಿ ನೀಡುವ ಭತ್ತದ ತಳಿಯ ಸಂಶೋಧನೆ ನಡೆಸಿ ರೈತರಿಗೆ ಉಪಕಾರಿಯಾಗಿದ್ದರು. ವಿಷಯುಕ್ತ ಪಾರ್ಥೇನಿಯಂ ಸಸ್ಯಕ್ಕೆ ಜೈವಿಕ ಪ್ರತಿರೋಧ ಒಡ್ಡುವಂಥ ಸಸ್ಯಗಳನ್ನು ಬೆಳೆಸಬೇಕೆಂಬ ಅವರ ಯೋಜನೆ ದೂರದರ್ಶಿತ್ವ ದಿಂದ ಕೂಡಿತ್ತು. ಅದರಲ್ಲಿ ಯಶಸ್ವಿಯೂ ಆಗಿದ್ದರು ಎಂದರು.

ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರಾದ ಗೌ.ನ್ಯಾ. ಶ್ರೀ ವಿ. ರಾಮಸುಬ್ರಮಣಿಯನ್‌ರವರು ಭಾರತೀಯ ಪರಂಪರೆಯಲ್ಲಿ ಅನ್ನಕ್ಕೆ ಅತ್ಯುನ್ನತ ಸ್ಥಾನ ನೀಡಲಾಗಿದೆ. ಇದು ನಮ್ಮ ದೇಶದ ಸಂಸ್ಕೃತಿಯಾಗಿದೆ. ಕೃತಿಯಲ್ಲಿ ಕೃಷಿಯೊಂದಿಗೆ ಸಾಗಿಬಂದ ಹಾದಿಯ ಚಿತ್ರಣ ಕಟ್ಟಿಕೊಡುವುದರ ಜೊತೆಗೆ ಮಹದೇವಪ್ಪನವರ ಶ್ರೇಷ್ಠ ವ್ಯಕ್ತಿತ್ವವನ್ನು ಈ ಪುಸ್ತಕದಲ್ಲಿ ತಿಳಿಸಲಾಗಿದೆ. ಭಾರತ ಮಾತ್ರವಲ್ಲದೆ ಜಗತ್ತಿನ ಪ್ರತಿ ದೇಶವೂ ಕೃಷಿಯನ್ನು ಅವಲಂಬಿಸಿದೆ. ಆಹಾರ ಬೆಳೆಯುವುದು ಆಯಾಯ ಅಲ್ಲಿನ ಜನರ ಬದುಕಿನ ವಿಷಯವಾಗಿದೆ ಎಂದು ಹೇಳಿದರು.

ನಾಡೋಜ ಡಾ. ಗೊ.ರು. ಚನ್ನಬಸಪ್ಪನವರು ಮಹಾಕವಿ ಕುವೆಂಪು ಅವರು ರಸಋಷಿಯಾದರೆ, ಕೃಷಿಕ್ಷೇತ್ರಕ್ಕೆ ತಮ್ಮನ್ನು ತಾವು ಅರ್ಪಿಸಿಕೊಂಡ ಮಹದೇವಪ್ಪನವರು ಕೃಷಿಕವಿ ಎಂದರೆ ತಪ್ಪಾಗಲಾರದು. ಕೃಷಿಋಷಿ ಅಂತಃಸಾಕ್ಷಿಯ ಗ್ರಂಥವಾಗಿದ್ದು, ಮಹದೇವಪ್ಪ ಅವರು ಪ್ರಯಾಣಿಸಿದ ಹಾದಿಯ ಕುರಿತು ದಾಖಲೆ ರೂಪದಲ್ಲಿ ಈ ಪುಸ್ತಕ ಪ್ರಕಟವಾಗಿದೆ. ಕೃತಿಯ ಶೀರ್ಷಿಕೆ ಮಹದೇವಪ್ಪನವರಿಗೆ ತುಂಬಾ ಅನ್ವರ್ಥವಾಗುತ್ತದೆ. ಅಲ್ಲದೆ, ಹೆಚ್ಚು ಇಳುವರಿ ಕೊಡುವ ಭತ್ತದ ಹೊಸತಳಿಗಳನ್ನು ಆವಿಷ್ಕರಿಸುವ ಮೂಲಕ ರೈತರ ಮುಖದಲ್ಲಿ ಸಂತಸ ಮೂಡುವಂತೆ ಮಾಡಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಎರಡು ಅವಧಿಗೆ ಧಾರವಾಡ ಕೃಷಿ ವಿಶ್ವವಿದ್ಯಾಲಯದ ಕುಲಪತಿಗಳಾಗಿ ಅವರು ಕೆಲಸ ನಿರ್ವಹಿಸಿದ್ದಾರೆ ಎಂದರು.

ಇದೇ ಸಂದರ್ಭದಲ್ಲಿ ಡಾ. ಪ್ರತಿಭಾ ಪೆರೇರಾ, ಪ್ರೊ. ಆರ್.ಎನ್. ಶ್ರೀನಿವಾಸಗೌಡ, ಪ್ರೊ. ಎಸ್. ಚಂದ್ರಶೇಖರ್ ಶೆಟ್ಟಿ, ಡಾ. ಆರ್.ಸಿ. ಜಗದೀಶ, ಡಾ. ಕೆ.ಪಿ. ವಿಶ್ವನಾಥ್, ಡಾ. ಆರ್. ಚಂದ್ರಶೇಖರ, ಶ್ರೀ ಬೆಟ್ಟಸ್ವಾಮಿಯರುಗಳನ್ನು ಸನ್ಮಾನಿಸಲಾಯಿತು.

ರಾಷ್ಟ್ರೀಯ ಜೀವವಿಜ್ಞಾನ ಕೇಂದ್ರದ ನಿರ್ದೇಶಕ ಪ್ರೊ. ಎಲ್.ಎಸ್. ಶಶಿಧರ್‌ರವರು ಪ್ರಕೃತಿ ನಿಯಮಗಳು ಮತ್ತು ಸುಸ್ಥಿರ ಕೃಷಿ ವಿಷಯ ಕುರಿತು ಉಪನ್ಯಾಸ ನೀಡಿದರು. ಶ್ರೀ ಕೆ.ಸಿ. ಶಿವಪ್ಪ, ಶ್ರೀ ಎಂ.ಎನ್. ಶೀಲವಂತರ್, ಶ್ರೀ ಪ್ರಕಾಶ್ ಚಿಕ್ಕಪಾಳ್ಯ, ಡಾ. ರೇಚಣ್ಣ, ಶ್ರೀಮತಿ ಮಮತಾ ಶೇಖರ್, ಶ್ರೀ ಚಂದ್ರಶೇಖರ್ ಉಪಸ್ಥಿತರಿದ್ದರು.

**ಸುತ್ತೂರು ಶ್ರೀಕ್ಷೇತ್ರದಲ್ಲಿ ಯುಗಾದಿ, ಅಲ್ಲಮಪ್ರಭು ಜಯಂತಿ ಹಾಗೂ ಪಂಚಾಂಗ ಪಠಣ**

ಸುತ್ತೂರು ಶ್ರೀಕ್ಷೇತ್ರದಲ್ಲಿ ಮಾರ್ಚ್ 19ರಂದು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಯುಗಾದಿ, ಅಲ್ಲಮಪ್ರಭು ಜಯಂತಿ ಹಾಗೂ ಪಂಚಾಂಗ ಪಠಣ ಕಾರ್ಯಕ್ರಮಗಳು ಜರುಗಿದವು. ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃಗದ್ದುಗೆಯಲ್ಲಿ ಮಹಾರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನೆ, ಮಹಾಮಂಗಳಾರತಿ ಹಾಗೂ ಪ್ರಾಕಾರೋತ್ಸವಗಳು ನೆರವೇರಿದವು. ಶ್ರೀ ಮಹದೇಶ್ವರ ಸನ್ನಿಧಿ, ಶ್ರೀ ಸೋಮೇಶ್ವರ, ಶ್ರೀ ವೀರಭದ್ರೇಶ್ವರ, ಶ್ರೀ ನಂಜುಂಡೇಶ್ವರ ಮತ್ತು ಶ್ರೀ ನಾರಾಯಣಸ್ವಾಮಿ ದೇವಸ್ಥಾನಗಳಲ್ಲಿಯೂ ವಿಶೇಷ ಪೂಜೆಗಳು ನೆರವೇರಿದವು.

ಹೊಳಲ್ಕೆರೆ ಕೊಟ್ರೆ ನಂಜಪ್ಪ ಪದವಿಪೂರ್ವ ಕಾಲೇಜಿನ ಉಪನ್ಯಾಸಕರಾದ ಡಾ. ಜಿ.ವಿ. ಮಂಜುನಾಥರವರು 'ಅಲ್ಲಮಪ್ರಭು ಜೀವನ ಮತ್ತು ವಚನ ವೈಭವ' ವಿಷಯ ಕುರಿತು ಉಪನ್ಯಾಸ ನೀಡಿ, ಅಲ್ಲಮಪ್ರಭುಗಳ ವಚನಗಳು ಬಹಳ ಶ್ರೇಷ್ಠವಾಗಿವೆ. ಸುಮಾರು 1650ಕ್ಕೂ ಹೆಚ್ಚು ವಚನಗಳನ್ನು ಅವರು ರಚಿಸಿದ್ದಾರೆ. ಧಾರ್ಮಿಕ, ಆಧ್ಯಾತ್ಮಿಕ ಚಿಂತಕರಾದ ಅಲ್ಲಮಪ್ರಭುಗಳು ಮನುಷ್ಯನ ಜೀವನ ಸಾರ್ಥಕವಾಗಬೇಕಾದರೆ ಪಂಚೇಂದ್ರಿಯಗಳನ್ನು ನಿಗ್ರಹಿಸಿಕೊಂಡು ಸುಜ್ಞಾನವನ್ನು ಬೆಳೆಸಿ, ಕೆಟ್ಟ ಗುಣಗಳಿಂದ ದೂರವಿದ್ದು ಮನಸ್ಸನ್ನು ಜಾಗೃತಗೊಳಿಸಬೇಕು. ಆಗ ಅವನ ಜೀವನ ಸಾರ್ಥಕವಾಗುತ್ತದೆ. ಇವರ ವಚನಗಳು ಬೆಡಗಿನ ವಚನಗಳಾಗಿದ್ದು, ವಿಶೇಷ ಅಧ್ಯಯನದ ಅಗತ್ಯವಿದೆ. ಮನುಷ್ಯನು ಅತಿಯಾಸೆಯನ್ನು ಬಿಡಬೇಕು. ಹಣ, ಆಸ್ತಿ, ಅಂತಸ್ತು, ಅಧಿಕಾರಕ್ಕಾಗಿ ಹಾತೊರೆಯಬಾರದು. ಅವುಗಳು ತಾವಾಗಿಯೇ ಒಲಿಯುವಂತೆ ಮಾಡಬೇಕು. 12ನೇ ಶತಮಾನದಲ್ಲಿ ಬಸವಣ್ಣನವರು ಮತ್ತು ಅಲ್ಲಮಪ್ರಭುಗಳು ಮೇರುವ್ಯಕ್ತಿತ್ವದ ದಿಗ್ಗಜರಾಗಿದ್ದರು. ಅಲ್ಲಮಪ್ರಭುಗಳಿಗೆ ಅಲ್ಲಮಪ್ರಭುಗಳೇ ಸರಿಸಾಟಿಯೆಂದು ಹೇಳಬಹುದು. ಇಡೀ ವಚನ ಸಾಹಿತ್ಯದಲ್ಲಿ ಆಧ್ಯಾತ್ಮಿಕ ದೃಷ್ಟಿಕೋನದಿಂದ ಅಲ್ಲಮಪ್ರಭುಗಳ ವಚನಗಳು ಉತ್ಕೃಷ್ಟವಾಗಿರುತ್ತವೆ ಎಂದು ತಿಳಿಸಿದರು.

ಮೈಸೂರಿನ ಭಾರತೀಯ ಜ್ಯೋತಿರ್ವಿಜ್ಞಾನ ಸಂಶೋಧನಾ ಕೇಂದ್ರದ ಅಧ್ಯಕ್ಷರು ಹಾಗೂ ಪಂಚಾಂಗಕರ್ತರಾದ ಸಿದ್ಧಾಂತಿ ಡಾ. ಕೆ. ಜಿ. ಪುಟ್ಟಹೊನ್ನಯ್ಯನವರು ಪಂಚಾಂಗ ಪಠಣ ಮಾಡಿ, ಪಂಚಾಂಗವೆಂದರೆ ಐದು ಅಂಗಗಳಿಂದ ರಚಿತವಾಗಿರುತ್ತದೆ. ಪಂಚಾಂಗವನ್ನು ಖಗೋಳ ಶಾಸ್ತ್ರ ಹಾಗೂ ಗಣಿತ ಶಾಸ್ತ್ರಗಳ ಆಧಾರದಲ್ಲಿ ರಚಿಸಲಾಗಿರುತ್ತದೆ. ಒಟ್ಟು 60 ಸಂವತ್ಸರಗಳಿದ್ದು, ಈ ವರ್ಷ ಪರಾಭವ ನಾಮ ಸಂವತ್ಸರವಾಗಿದ್ದು, ದುಷ್ಟ ಶಕ್ತಿಗಳಿಗೆ ಪರಾಭವವನ್ನು ಮಾಡುವ ಸಂವತ್ಸರವಾಗಿದೆ. ಶ್ರಾವಣ, ಕಾರ್ತಿಕ, ಆಶ್ವಯುಜ ಮಾಸಗಳು ಶ್ರೇಷ್ಠವಾಗಿವೆ. ಈ ವರ್ಷ ಜ್ಯೇಷ್ಠದಲ್ಲಿ ಅಧಿಕ ಮಾಸವಿದೆ. ಈ ವರ್ಷವೂ

ದಸರಾ ಹಬ್ಬವನ್ನು 11 ದಿನಗಳು ಆಚರಿಸಲಾಗುತ್ತದೆ. ಚೈತ್ರ ಮಾಸದಲ್ಲಿ ವಿವಾಹ ಮಾಡುವುದು ಶುಭವಾಗಿರುತ್ತದೆ. ಸುಭಿಕ್ಷೆಯಿಂದ ಮಳೆಯಾಗಿ ಕೆರೆ ಕಟ್ಟೆಗಳು ತುಂಬುತ್ತವೆ. ಉತ್ತಮ ಬೆಳೆಗಳ ಫಲವಿದೆ. ಸೂರ್ಯ ಗ್ರಹಣಗಳು ನಡೆಯುತ್ತವೆ, ಪಿತೃಪಕ್ಷಗಳಲ್ಲೂ ಕೂಡ ಶುಭ ಕಾರ್ಯಗಳನ್ನು ಮಾಡಬಹುದು ಎಂದು ತಿಳಿಸಿದರು.

ಪ್ರಶ್ನೋತ್ತರ ಸಂದರ್ಭದಲ್ಲಿ ಬೆಂಗಳೂರು ಶೇಷಾದ್ರಿಪುರಂ ಸಂಸ್ಥೆಗಳ ಕಾರ್ಯದರ್ಶಿಗಳು ಹಾಗೂ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷರೂ ಆದ ಡಾ. ಶ್ರೀ ವೂಡೆ ಪಿ. ಕೃಷ್ಣರವರು ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಯುದ್ದವು ಯಾವಾಗ ಕೊನೆಗೊಳ್ಳಬಹುದು ಎಂದು ಕೇಳಿದ ಪ್ರಶ್ನೆಗೆ, ಪ್ರಸ್ತುತ ದಿನಗಳಲ್ಲಿ ಪ್ರಪಂಚದಲ್ಲಿ ನಡೆಯುತ್ತಿರುವ ಯುದ್ಧವು ಅಂತ್ಯಗೊಳ್ಳಲಿದೆ. ಯಾರು ಅಹಂಕಾರದಿಂದ ಮೆರೆಯುತ್ತಿದ್ದಾರೋ ಅವರಿಗೆ ತಕ್ಕ ಶಾಸ್ತಿಯೂ ಆಗುತ್ತದೆ ಎಂದು ತಿಳಿಸಿದರು.

ಶ್ರೀಮಠ ಹಾಗೂ ಗ್ರಾಮದ ಹೊನ್ನೇರುಗಳನ್ನು ಶ್ರೀಮಠದಿಂದ ಮಂಗಳವಾದ್ಯ ಹಾಗೂ ವಿವಿಧ ಜನಪದ ಕಲಾ ತಂಡಗಳೊಂದಿಗೆ ಮೆರವಣಿಗೆಯಲ್ಲಿ ಜಮೀನುಗಳಿಗೆ ತೆಗೆದುಕೊಂಡು ಹೋಗಿ ಭೂಮಿತಾಯಿಗೆ ಪೂಜೆ ಸಲ್ಲಿಸಿ ಹೊಸ ವರ್ಷದ ಕೃಷಿ ಕಾಯಕಕ್ಕೆ ಚಾಲನೆ ನೀಡಲಾಯಿತು.

ಮಡಿವಾಳಸ್ವಾಮಿ ಮಠ, ಕುರುಬೂರು, ಕುದೇರು, ಬರಗೂರು, ದಂಡಿಕೆರೆ, ಕುಂದೂರು ಬೆಟ್ಟ, ನಂಜನಗೂಡು, ರಾಮಾಪುರ, ಚುಂಚನಹಳ್ಳಿ, ಆಲಮಟ್ಟಿ ಮೊದಲಾದ ಮಠಗಳ ಶ್ರೀಗಳು, ಶ್ರೀ ಶಂಕರ್ ದೇವನೂರು, ಗಣ್ಯರು ಹಾಗೂ ಸುತ್ತಮುತ್ತಲ ಗ್ರಾಮಗಳ ಸಹಸ್ರಾರು ಭಕ್ತಾದಿಗಳು ಭಾಗವಹಿಸಿದ್ದರು. ಶಾಲಾ ಮಕ್ಕಳು ಪ್ರಾರ್ಥಿಸಿದರು. ಶ್ರೀ ಜಿ. ಶಿವಸ್ವಾಮಿ ಸ್ವಾಗತಿಸಿದರು. ಶ್ರೀ ಅಂದಯ್ಯ ಶಿರೂರಮಠ ನಿರೂಪಿಸಿ ವಂದಿಸಿದರು.

**ಶಿಕ್ಷಣ ಬೆಳಕಿನಂತೆ ಎಲ್ಲೆಡೆ ಹರಡಬೇಕಿದೆ**

ಶಿಕ್ಷಣವು ಬೆಳಕಿನಂತೆ ಎಲ್ಲೆಡೆ ಹರಡಬೇಕಿದೆ ಎಂದು ಪರಮಪೂಜ್ಯ ಜಗದ್ಗುರುಗಳವರು ಮಾರ್ಚ್ 23ರಂದು ಶೇಷಾದ್ರಿಪುರಂ ಎಜುಕೇಷನಲ್ ಟ್ರಸ್ಟ್ ವತಿಯಿಂದ ಮೈಸೂರು ಕಡಕೊಳ ಕೈಗಾರಿಕಾ ಪ್ರದೇಶದಲ್ಲಿ ಸ್ಥಾಪಿಸಿರುವ ಶೇಷಾದ್ರಿಪುರಂ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ನೂತನ ಕಟ್ಟಡಗಳನ್ನು ಉದ್ಘಾಟಿಸಿ ಮಾತನಾಡುತ್ತಾ ತಿಳಿಸಿದರು. ಪ್ರಸ್ತುತ ಸಂದರ್ಭದಲ್ಲಿ ಕಂಪ್ಯೂಟರ್ ಸಂಬಂಧಿತ ಶಾಖೆಗಳತ್ತ ಹೆಚ್ಚುತ್ತಿರುವ ಒಲವು ಸಾಮಾಜಿಕ ಅಸಮತೋಲನಕ್ಕೆ ಕಾರಣವಾಗಬಹುದು. ವಿದ್ಯಾರ್ಥಿಗಳು ಸ್ವತಂತ್ರವಾಗಿ ಹಾಗೂ ಸಮರ್ಪಕವಾಗಿ ವಿಷಯ ಆಯ್ಕೆ ಮಾಡಿಕೊಳ್ಳಲು ಪೋಷಕರು ಪ್ರೋತ್ಸಾಹ ನೀಡಬೇಕು. ಶೇಷಾದ್ರಿಪುರಂ ಶಿಕ್ಷಣ ದತ್ತಿ ಸಂಸ್ಥಾಪಕರಾದ ಸೀತಮ್ಮ ಹಾಗೂ ಆನಂದಮ್ಮನವರ ದೂರದೃಷ್ಟಿಯನ್ನು ಶ್ಲಾಘನೀಯವಾದುದು ಎಂದರು.

ಕುಲಪತಿಗಳಾದ ಡಾ. ವಿದ್ಯಾಶಂಕರ್‌ರವರು ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಡಿಸೈನ್ ಥಿಂಕಿಂಗ್ ಹಾಗೂ ಕ್ರಿಟಿಕಲ್ ಥಿಂಕಿಂಗ್ ಅತ್ಯಗತ್ಯವಾಗಿದೆ. ಎಐ ಅನ್ನು ಎಲ್ಲಾ ಶಾಖೆಗಳಲ್ಲೂ ಅನ್ವಯಿಸಬಹುದು. ವಿದ್ಯಾರ್ಥಿಗಳು ವಿಷಯ ಆಯ್ಕೆಯಲ್ಲಿ ಒತ್ತಡಕ್ಕೆ

ಒಳಗಾಗದಂತೆ ನಿಗಾವಹಿಸಬೇಕು ಎಂದು ತಿಳಿಸಿದರು.

ಶ್ರೀ ರಾಮಕೃಷ್ಣ ಆಶ್ರಮದ ಶ್ರೀ ಸ್ವಾಮಿ ಮುಕ್ತಿದಾನಂದಜಿ ಮಹಾರಾಜ್‌ರವರು ಮಾತನಾಡಿದರು. ಶ್ರೀ ವೂಡೆ ಪಿ. ಕೃಷ್ಣ ಸ್ವಾಗತಿಸಿದರು. ಶ್ರೀ ಎಂ.ಎಸ್. ನಟರಾಜ್ ವಂದಿಸಿದರು. ಶ್ರೀ ಎನ್.ಆರ್. ಪಂಡಿತಾರಾಧ್ಯ, ಶ್ರೀ ಟಿ.ಎಸ್. ಹೆಂಜಾರಪ್ಪ ಉಪಸ್ಥಿತರಿದ್ದರು. ಡಾ. ಸಿ.ಪಿ. ಲಾವಣ್ಯ ಕಾರ್ಯಕ್ರಮ ನಿರೂಪಿಸಿದರು.

**ಸಂವಿಧಾನದ ಮೌಲ್ಯಗಳು ಶರಣರ ವಚನಗಳಲ್ಲಿ ಅಡಗಿವೆ**

ಸಂವಿಧಾನದ ಮೌಲ್ಯಗಳು ಶರಣರ ವಚನಗಳಲ್ಲಿ ಅಡಗಿವೆ ಎಂದು ಪರಮಪೂಜ್ಯ ಜಗದ್ಗುರುಗಳವರು ಮಾರ್ಚ್ 24ರಂದು ಶಿವಮೊಗ್ಗದ ಕುವೆಂಪು ರಂಗಮಂದಿರದಲ್ಲಿ ನಡೆದ ಏಳನೆಯ ಜಿಲ್ಲಾ ಶರಣ ಸಾಹಿತ್ಯ ಸಮ್ಮೇಳನ ಉದ್ಘಾಟನೆಯ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ನಾನು, ನನ್ನದು ಎನ್ನುವ ಹಮ್ಮು, ದ್ವೇಷ, ಪ್ರತಿಷ್ಠೆ ಇವುಗಳನ್ನು ತೊಡೆದು ಹಾಕಿದಾಗ ಯುದ್ಧ ಎನ್ನುವಂತಹ ಸಂದರ್ಭವೇ ಬರುವುದಿಲ್ಲ. ಪ್ರಸ್ತುತ ಯುದ್ಧದ ಕಾರ್ಮೋಡ ಎಲ್ಲೆಡೆ ಕಂಡು ಬರುತ್ತಿದೆ. 12ನೇ ಶತಮಾನದಲ್ಲಿ ಬಸವಾದಿ ಶರಣರು ರಚಿಸಿದಂತಹ ವಚನಗಳನ್ನು ನಾವು ಜಗತ್ತಿಗೆ ಸಾರಿದ್ದರೆ ಅಂಬೇಡ್ಕರ್‌ರವರು ಸಂವಿಧಾನ ರಚನೆ ಸಂದರ್ಭದಲ್ಲಿ ಮೊದಲಿಗೆ ಶರಣರ ವಚನಗಳನ್ನೇ ಉಲ್ಲೇಖಿಸುತ್ತಿದ್ದರು. ಇದನ್ನು ಸ್ವತಃ ಡಾ. ಬಿ.ಆರ್. ಅಂಬೇಡ್ಕರ್‌ರವರು ಕಾರ್ಯಕ್ರಮವೊಂದರಲ್ಲಿ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಎಸ್. ನಿಜಲಿಂಗಪ್ಪನವರಿಗೆ ಹೇಳಿದ್ದರು ಎಂದು ತಿಳಿಸಿದರು.

ಸಂಸದರಾದ ಶ್ರೀ ಬಿ.ವೈ. ರಾಘವೇಂದ್ರರವರು ವಚನ ಸಾಹಿತ್ಯ ಮನುಕುಲಕ್ಕೆ ಶಕ್ತಿ ತುಂಬಿದೆ. ಅಲ್ಲಮನ ಭಕ್ತಿ, ಅಕ್ಕನ ಭಕ್ತಿ ಎರಡೂ ಕೂಡ ಈ ಜಿಲ್ಲೆಯ ಮಣ್ಣಿನಲ್ಲಿ ಇವೆ. ಇಂತಹ ನಾಡಿನಲ್ಲಿ ಶರಣರು ಜನ್ಮ ತಾಳಿದ್ದಾರೆ. ಈ ಜಿಲ್ಲೆಯಲ್ಲಿ ಶರಣ ಸಾಹಿತ್ಯ ಸಮ್ಮೇಳನ ನಡೆಯುತ್ತಿರುವುದು ಅತ್ಯಂತ ಸಂತೋಷದ ಸಂಗತಿ ಎಂದರು.

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ. ಸಿ. ಸೋಮಶೇಖರ್ ರವರು ಮಾನವನ ಸಮಸ್ಯೆಗಳಿಗೆ ವಚನಗಳಲ್ಲಿ ಪರಿಹಾರವಿದೆ. 12ನೇ ಶತಮಾನದಲ್ಲಿ ಬಸವಾದಿ ಶರಣರು ರಚಿಸಿದ ವಚನಗಳಲ್ಲಿ ನಮ್ಮೆಲ್ಲ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಹುದಾಗಿದೆ. ಪ್ರಸ್ತುತ ದಿನಮಾನಗಳಲ್ಲಿ ಮಕ್ಕಳಿಗೆ ವಚನ ಮತ್ತು ಅದರ ಸಾರವನ್ನು ತಿಳಿಸಿಕೊಡುವ ಅಗತ್ಯವಿದೆ. ಆ ಮೂಲಕ ಮಕ್ಕಳಲ್ಲಿ ಶರಣರ ಸಾಹಿತ್ಯದ ಬಗ್ಗೆ ಆಸಕ್ತಿ ಮೂಡಿಸುವ ಕೆಲಸವನ್ನು ನಾವೆಲ್ಲರೂ ಮಾಡಬೇಕಿದೆ ಎಂದರು.

ಸಮ್ಮೇಳನದ ಸರ್ವಾಧ್ಯಕ್ಷರಾದ ಜಗದ್ಗುರು ಡಾ. ಶ್ರೀ. ಮಲ್ಲಿಕಾರ್ಜುನ ಮುರುಘರಾಜೇಂದ್ರ ಮಹಾಸ್ವಾಮಿಗಳು, ಬಸವಕೇಂದ್ರದ ಡಾ. ಶ್ರೀ ಬಸವಮರುಳಸಿದ್ಧ ಸ್ವಾಮಿಗಳು, ನಿಕಟಪೂರ್ವ ಸಮ್ಮೇಳನಾಧ್ಯಕ್ಷರಾದ ಶ್ರೀ ಅಂಬ್ರಯ್ಯ ಮಠ, ಶಾಸಕರಾದ ಡಾ. ಧನಂಜಯ ಸರ್ಜಿ, ಮಾಜಿ ಶಾಸಕರಾದ ಶ್ರೀ ಎಸ್. ರುದ್ರೇಗೌಡ, ಶರಣ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷರಾದ ಶ್ರೀ ಎಚ್.ಎನ್. ಮಹಾರುದ್ರ, ಶ್ರೀ ಎಸ್.ಎಸ್. ಜ್ಯೋತಿಪ್ರಕಾಶ್, ಶ್ರೀ ಜಿ. ಬೆನಕಪ್ಪ ಮೊದಲಾದವರು ಉಪಸ್ಥಿತರಿದ್ದರು.

**ತಂತ್ರಜ್ಞಾನದಿಂದ ಪ್ರಕೃತಿಗೆ ಧಕ್ಕೆಯಾಗದಿರಲಿ**

ತಂತ್ರಜ್ಞಾನದಿಂದ ಪ್ರಕೃತಿಗೆ ಧಕ್ಕೆಯಾಗದಿರಲಿ ಎಂದು ಪರಮಪೂಜ್ಯ ಜಗದ್ಗುರುಗಳವರು ಮಾರ್ಚ್ 25ರಂದು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಘಟಿಕೋತ್ಸವ ಭವನದಲ್ಲಿ ಪ್ರಜ್ಞಾ ಪ್ರವಾಹ ಕರ್ನಾಟಕ ಆಯೋಜಿಸಿದ್ದ 'ಏಕಾತ್ಮ ಮಾನವ ದರ್ಶನ: ಭಾರತದ ವಿಶ್ವದೃಷ್ಟಿ' ಅಂತಾರಾಷ್ಟ್ರೀಯ ಶೈಕ್ಷಣಿಕ ಸಮ್ಮೇಳನದ ಉದ್ಘಾಟನೆಯ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಇಂದಿನ ತಂತ್ರಜ್ಞಾನ ಯುಗದಲ್ಲಿ ಪ್ರಕೃತಿಯೊಂದಿಗೆ ಸಂಬಂಧ ಬೆಳೆಸಿ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವುದು ಅಗತ್ಯ. ಉತ್ಪಾದನೆ ಮತ್ತು ಸ್ವಾವಲಂಬನೆಯನ್ನು ಉತ್ತೇಜಿಸುವುದು, ವೈವಿಧ್ಯದಲ್ಲಿನ ಭಿನ್ನತೆಗಳನ್ನು ಹೋಗಲಾಡಿಸಿ ಏಕತೆಯನ್ನು ಬೆಳೆಸುವುದು ಹಾಗೂ ರಾಜಕೀಯದಲ್ಲಿ ಮೌಲ್ಯಗಳನ್ನು ಸ್ಥಾಪಿಸುವುದು ಏಕಾತ್ಮ ಮಾನವ ದರ್ಶನದ ಮುಖ್ಯ ಉದ್ದೇಶವಾಗಿದೆ ಎಂದು ಹೇಳಿದರು.

ವರ್ಚುವಲ್ ಮೂಲಕ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಸನ್ಮಾನ್ಯ ಉಪರಾಷ್ಟ್ರಪತಿಗಳಾದ ಶ್ರೀ ಸಿ.ಪಿ. ರಾಧಾಕೃಷ್ಣನ್‌ರವರು ಒತ್ತಡ ಮತ್ತು ನಂಬಿಕೆ ಕುಸಿತವನ್ನು ಎದುರಿಸುತ್ತಿರುವ ಸಂದರ್ಭದಲ್ಲಿ ಧರ್ಮ ಹಾಗೂ ಮೌಲ್ಯಾಧಾರಿತ ಜೀವನದ ಮಹತ್ವವನ್ನು ಈ ಕಾರ್ಯಕ್ರಮ ಒತ್ತಿ ಹೇಳುತ್ತದೆ. 2047ರ ವಿಕಸಿತ ಭಾರತದ ಕನಸು ದೀನದಯಾಳ ಉಪಾಧ್ಯಾಯರ ಏಕಾತ್ಮ ಮಾನವ ದರ್ಶನದ ತತ್ವಗಳನ್ನು ಒಳಗೊಂಡಿದೆ. ಅದು ಕೇವಲ ಆರ್ಥಿಕ ಅಥವಾ ತಂತ್ರಜ್ಞಾನ ಅಭಿವೃದ್ಧಿಗಷ್ಟೇ ಸೀಮಿತವಾಗದೆ ಸರ್ವಾಂಗೀಣ ಮಾನವ ವಿಕಾಸವನ್ನು ಗುರಿಯಾಗಿಟ್ಟುಕೊಂಡಿದೆ ಎಂದು ತಿಳಿಸಿದರು.

ರಾಜ್ಯಪಾಲರಾದ ಶ್ರೀ ಥಾವರ್ ಚಂದ್ ಗೆಹ್ಲೋತ್‌ರವರು ಪ್ರಪಂಚದ ಜಾಗತಿಕ ತಲ್ಲಣದಂತಹ ಸನ್ನಿವೇಶದಲ್ಲಿ ಸಮತೋಲಿತ ಹಾಗೂ ಸುಸ್ಥಿರ ಸಮಾಜ ನಿರ್ಮಾಣದಲ್ಲಿ ಮೌಲ್ಯಾಧಾರಿತ ಶಿಕ್ಷಣ ಪ್ರಮುಖ ಪಾತ್ರ ವಹಿಸುತ್ತದೆ. ಇಂದಿನ ಶಿಕ್ಷಣವು ಉದ್ಯೋಗ ಪಡೆಯುವಿಕೆಗೆ ಮಾತ್ರ ಸೀಮಿತವಾಗದೆ ವ್ಯಕ್ತಿತ್ವ ನಿರ್ಮಾಣ ಮತ್ತು ಮೌಲ್ಯಾಧಾರಿತ ಕಲಿಕೆಗೆ ಒತ್ತು ನೀಡಬೇಕಿದೆ. ನಿಜವಾದ ಶಿಕ್ಷಣವು ವೈಯಕ್ತಿಕ ಬೆಳವಣಿಗೆಯನ್ನು ಸಾಮಾಜಿಕ ಕಲ್ಯಾಣದೊಂದಿಗೆ ಜೋಡಿಸಿ ಸಾಮರಸ್ಯ ಮತ್ತು ಒಳಗೊಳ್ಳುವಿಕೆಯನ್ನು ಉತ್ತೇಜಿಸುತ್ತದೆ. ಅಸಮಾನತೆ, ಪರಿಸರ ಸವಾಲುಗಳು ಮತ್ತು ಸಾಮಾಜಿಕ ಅಶಾಂತಿಯಿಂದ ಬಳಲುತ್ತಿರುವ ಜಾಗತಿಕ ಸನ್ನಿವೇಶದಲ್ಲಿ ಮೌಲ್ಯಾಧಾರಿತ ಶಿಕ್ಷಣವೇ ಮದ್ದು ಎಂದರು.

ಕರ್ನಾಟಕ ದಕ್ಷಿಣ ಪ್ರಜ್ಞಾ ಪ್ರವಾಹದ ಸಂಯೋಜಕ ಡಾ. ಪ್ರದೀಪ ಭಾರದ್ವಾಜ್ ಮಾತನಾಡಿದರು. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ ಸ್ವಾಗತಿಸಿದರು. ಶ್ರೀ ರಘೋತ್ತಮ್ ಅರ್ಜುನಗಿ ವಂದಿಸಿದರು.

**ಉತ್ತಮ ಸಮಾಜ ಕಟ್ಟುವ ಕಾಯಕದಲ್ಲಿ ಸುತ್ತೂರು ಶ್ರೀಮಠಕ್ಕೆ ಅಗ್ರಸ್ಥಾನ**

ಸಾವಿರಾರು ವರ್ಷಗಳಿಂದ ಮಠ–ಮಾನ್ಯಗಳು ಆಧ್ಯಾತ್ಮದ ತಳಹದಿಯ ಮೇಲೆ ಸಮಾಜ ಕಟ್ಟುವ ಕೆಲಸವನ್ನು ಮಠ ಮಾನ್ಯಗಳು ಮಾಡುತ್ತಿದ್ದು, ಸುತ್ತೂರು ಶ್ರೀಮಠ ಅಗ್ರಮಾನ್ಯ ಸ್ಥಾನವನ್ನು ಹೊಂದಿದೆ ಎಂದು ವೈದ್ಯಕೀಯ ಶಿಕ್ಷಣ ಇಲಾಖೆ ಸಚಿವರಾದ

ಡಾ. ಶರಣಪ್ರಕಾಶ ಆರ್. ಪಾಟೀಲರವರು ಮಾರ್ಚ್ 29ರಂದು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಜೆಎಸ್ಎಸ್ ಆಸ್ಪತ್ರೆಯಲ್ಲಿ ಕ್ಯಾತ್‌ಲ್ಯಾಬ್, ಅತ್ಯಾಧುನಿಕ ಎಐ ಆಧಾರಿತ ಸಿಟಿ ಸ್ಕ್ಯಾನರ್, ಉನ್ನತೀಕರಿಸಿದ ಎಂಆರ್‌ಐ, ನರಶಸ್ತ್ರಚಿಕಿತ್ಸಾ ಸೂಕ್ಷ್ಮದರ್ಶಕಯಂತ್ರ ಹಾಗೂ ತಾಯಿ ಎದೆಹಾಲಿನ ಬ್ಯಾಂಕ್‌ಗಳ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡುತ್ತಾ ತಿಳಿಸಿದರು. ರಾಜ್ಯದಲ್ಲಿ ಸರ್ಕಾರಿ ಸೇವೆಯೂ ತಲುಪದ ಜಾಗಗಳಲ್ಲಿ ಖಾಸಗಿ ಸಂಸ್ಥೆಯವರು ವೈದ್ಯಕೀಯ ಕಾಲೇಜು ಆಸ್ಪತ್ರೆಗಳನ್ನು ತೆರೆದು ಗುಣಮಟ್ಟದ ವೈದ್ಯಕೀಯ ಸೇವೆಯನ್ನು ನೀಡುತ್ತಾ ಬಂದಿದ್ದಾರೆ. ಉತ್ತರ ಕರ್ನಾಟಕ, ಕರಾವಳಿ, ದಕ್ಷಿಣ ಭಾಗದಲ್ಲಿ ಹತ್ತು ಹಲವು ಸಂಸ್ಥೆಗಳು ಮಂಚೂಣಿಯಲ್ಲಿವೆ. ಜೆಎಸ್ಎಸ್ ಸಂಸ್ಥೆ ಸಾಮಾನ್ಯ ಜನರಿಗೆ ಕೈಗೆಟುಕುವ ದರದಲ್ಲಿ ಉತ್ತಮ ರೀತಿಯ ಸೇವೆಯನ್ನು ನೀಡುತ್ತಿದೆ. 1960ರ ದಶಕದಲ್ಲಿ ಸರ್ಕಾರ ಮೆಡಿಕಲ್ ಎಂಜಿನಿಯರಿಂಗ್‌ನಂತಹ ವೃತ್ತಿಪರ ಕೋರ್ಸ್‌ಗಳ ಆರಂಭಕ್ಕೆ ಖಾಸಗಿ ಸಂಸ್ಥೆಗಳಿಗೂ ಅವಕಾಶ ನೀಡಿದ್ದು ಇದರಿಂದ ರಾಜ್ಯದಲ್ಲಿ ವೈದ್ಯಕೀಯ ಕ್ರಾಂತಿ ಸಾಧ್ಯವಾಗಿದ್ದು ಕರ್ನಾಟಕ ರಾಜ್ಯ ವೈದ್ಯಕೀಯ ಹಬ್ ಆಗಿದೆ ಎಂದರು.

ಪರಮಪೂಜ್ಯ ಜಗದ್ಗುರುಗಳವರು ಆಶೀರ್ವಚನ ನೀಡುತ್ತಾ ಪೂಜ್ಯ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಆಶಯದಂತೆ ಬಹಳ ವರ್ಷಗಳ ಹಿಂದೆ ವಸತಿ ನಿಲಯದ ಮಕ್ಕಳ ದಾಖಲಾತಿಗೆ ಆರೋಗ್ಯ ತಪಾಸಣೆ ಮಾಡಲು ಪ್ರಾರಂಭವಾದ ಪ್ರಾಥಮಿಕ ಆರೋಗ್ಯ ಕೇಂದ್ರ ನಂತರದ ದಿನಗಳಲ್ಲಿ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆಯಾಗಿ ಪರಿವರ್ತನೆಯಾಗಿ ಸಾರ್ವಜನಿಕರಿಗೆ ಆರೋಗ್ಯ ಸೇವೆಯನ್ನು ನೀಡುತ್ತಾ ಬಂದಿದೆ. ಕಾಲ ಘಟಕ್ಕೆ ತಕ್ಕಂತೆ ಅತ್ಯಾಧುನಿಕ ಯಂತ್ರಗಳ ಸೇರ್ಪಡೆ ಜೊತೆಗೆ ರೋಗಿಗಳಿಗೆ ಗುಣಮಟ್ಟದ ಆರೋಗ್ಯ ಸೇವೆಗೆ ಜೆಎಸ್ಎಸ್ ಆಸ್ಪತ್ರೆ ಬದ್ಧವಾಗಿದೆ ಎಂದರು.

ತಾಯಿ ಎದೆಹಾಲು ಬ್ಯಾಂಕ್ ಉದ್ಘಾಟಿಸಿದ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರಾದ ಶ್ರೀಮತಿ ನಾಗಲಕ್ಷ್ಮೀ ಚೌಧರಿಯವರು ತಾಯಿಯ ಎದೆಹಾಲು ಪೌಷ್ಟಿಕಾಂಶಗಳ ಆಗರ ಅಮೃತಕ್ಕೆ ಸಮಾನ ಇದರ ಮಹತ್ವದ ಬಗ್ಗೆ ಅರಿವು ಮೂಡಿಸಬೇಕು ಶೇ.30ರಷ್ಟು ಶಿಶುಗಳು ಅವಧಿಪೂರ್ವದಲ್ಲಿ ಜನಿಸುತ್ತಿವೆ. ಅಂತಹ ತಾಯಂದಿರಿಗೆ ಹಾಲಿನ ಸಮಸ್ಯೆ ಇರುತ್ತದೆ ಬಾಣಂತಿಯರು ಸ್ವಯಂಪ್ರೇರಿತರಾಗಿ ಹಾಲು ನೀಡಿದರೆ ಅನುಕೂಲ ಆಗುತ್ತದೆ ಹಾಗೂ ಜೆಎಸ್ಎಸ್ ಆಸ್ಪತ್ರೆಯಲ್ಲಿ ತಾಯಿ ಎದೆಹಾಲು ಬ್ಯಾಂಕ್ ತೆರೆದಿರುವುದು ಹೆಮ್ಮೆಯ ಸಂಗತಿ ಎಂದರು.

ಕ್ಯಾತ್‌ಲ್ಯಾಬ್ ಉದ್ಘಾಟಿಸಿದ ಶಾಸಕರು ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷರಾದ ಶ್ರೀ ಪಿ.ಎಂ. ನರೇಂದ್ರಸ್ವಾಮಿಯವರು ಸುತ್ತೂರು ಶ್ರೀಮಠ ಶಿಕ್ಷಣ, ದಾಸೋಹದ ಜೊತೆಗೆ ಆರೋಗ್ಯ ಸೇವೆಯನ್ನು ನೀಡುತ್ತಾ ಬಂದಿದೆ ಜನಸಾಮಾನ್ಯರಿಗೆ ನಿಲುಕುವ ದರದಲ್ಲಿ ಆರೋಗ್ಯ ಸೇವೆ ಒದಗಿಸುತ್ತಿದೆ ಎಂದರು.

ನರಶಸ್ತ್ರಚಿಕಿತ್ಸಾ ಸೂಕ್ಷ್ಮದರ್ಶಕಯಂತ್ರವನ್ನು ಉದ್ಘಾಟಿಸಿದ ಶಾಸಕರಾದ ಶ್ರೀ ಟಿ.ಎಸ್. ಶ್ರೀವತ್ಸರವರು ಮಾತನಾಡುತ್ತಾ ಒಂದು ಸರ್ಕಾರ ಮಾಡುವ ಕೆಲಸವನ್ನು ಸುತ್ತೂರು ಶ್ರೀಮಠ ಹಾಗೂ ಜೆಎಸ್‌ಎಸ್ ಆಸ್ಪತ್ರೆ ಮಾಡುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ಪ್ರೊ. ಎಸ್.ಪಿ. ಮಂಜುನಾಥ್, ಡಾ. ಬಿ. ಸುರೇಶ್ ಉಪಸ್ಥಿತರಿದ್ದರು. ಡಾ. ಹೆಚ್. ಬಸವನಗೌಡಪ್ಪ ಪ್ರಾಸ್ತಾವಿಕವಾಗಿ ಮಾತನಾಡಿದರು. ಡಾ. ಸಿ.ಪಿ. ಮಧು ಸ್ವಾಗತಿಸಿದರು. ಶ್ರೀ ಸುಮಂತ್ ವಸಿಷ್ಠ ಪ್ರಾರ್ಥಿಸಿದರು. ಶ್ರೀ ಆರ್. ಮಹೇಶ್ ವಂದಿಸಿದರು. ಡಾ. ಹೆಚ್.ವಿ. ಸೌಮ್ಯ ಕಾರ್ಯಕ್ರಮ ನಿರೂಪಿಸಿದರು.

**ಮಹಾತ್ಮರನ್ನು ನಿತ್ಯ ನೆನೆಯುವುದರಿಂದ ಮುಕ್ತಿ ಸಾಧ್ಯ**

ಶ್ರೀ ಮಹದೇಶ್ವರರು, ಬಸವಣ್ಣನವರಂತಹ ಮಹಾತ್ಮರನ್ನು ನಿತ್ಯ ನೆನೆಯುವುದರಿಂದ ಮನುಷ್ಯ ಮುಕ್ತಿ ಪಡೆಯಬಹುದೆಂದು ಪರಮಪೂಜ್ಯ ಜಗದ್ಗುರುಗಳವರು ಮಾರ್ಚ್ 30ರಂದು ಸಾಲಿಗ್ರಾಮ ತಾಲ್ಲೂಕು ಮಾಯಗೌಡನಹಳ್ಳಿಯಲ್ಲಿ ಶ್ರೀ ಮಹದೇಶ್ವರ ದೇವಾಲಯ ಉದ್ಘಾಟನೆ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಬದುಕಿರುವಾಗಲೇ ಆಧ್ಯಾತ್ಮಿಕವಾಗಿ ಸಂತೋಷ, ತೃಪ್ತಿ ಹೊಂದಿ ಇದರ ಮೂಲಕ ಭಗವಂತನನ್ನು ಕಾಣುವುದೇ ನಿಜವಾದ ಮೋಕ್ಷ. ಐದು ಶತಮಾನದ ಹಿಂದೆ ಜನರಲ್ಲಿ ಸುಜ್ಞಾನ, ಸಂಸ್ಕಾರ ಮೂಡಿಸುವಂತಹ ಸತ್ಕಾರ್ಯ ಮಾಡಿದ ಕೀರ್ತಿ ಶ್ರೀ ಮಹದೇಶ್ವರರಿಗೆ ಸಲ್ಲಬೇಕು. ಶ್ರೀ ಮಹದೇಶ್ವರ ಎಂದರೆ ಬೆಟ್ಟದ ಮಾದಪ್ಪ ಎಂದೇ ಜನಜನಿತ. ಸರಳವಾಗಿ ಬದುಕು ರೂಪಿಸಿಕೊಂಡಿದ್ದ ಶ್ರೀ ಮಹದೇಶ್ವರ ಅಪರೂಪದ ಇತಿಹಾಸ ಹಾಗೂ ಪವಾಡಪುರುಷ. ದೇವಾಲಯಗಳ ಭೇಟಿಯಿಂದ ಮನಸ್ಸು ಪ್ರಫುಲ್ಲಗೊಳ್ಳಲಿದೆ. ಮೂರುನೂರು ವರ್ಷಗಳ ಹಿಂದೆ ಮಾಯಿಗೌಡನಹಳ್ಳಿ ಗ್ರಾಮದಲ್ಲಿ ಚಿಕ್ಕದಾಗಿ ನಿರ್ಮಾಣವಾಗಿದ್ದ ಈ ದೇವಸ್ಥಾನವನ್ನು ಐಎಎಸ್ ಅಧಿಕಾರಿ ಹಾಡ್ಯ ಗ್ರಾಮದ ಸೊಸೆ ಶ್ರೀಮತಿ ಡಿ. ಭಾರತಿಯವರು ಎಲ್ಲರ ಸಹಕಾರದಿಂದ ಸುಸಜ್ಜಿತವಾಗಿ ನಿರ್ಮಾಣ ಮಾಡಿದ್ದಾರೆ ಎಂದರು.

ಸಿದ್ಧಗಂಗಾ ಶ್ರೀಗಳು, ಬೆಟ್ಟದಪುರ, ಮಾದಹಳ್ಳಿ, ಗಾವಡಗೆರೆ, ಹಾಡ್ಯ, ಅಂಕನಹಳ್ಳಿ, ರಾವಂದೂರು ಮೊದಲಾದ ಮಠಗಳ ಶ್ರೀಗಳು, ಶಾಸಕರುಗಳಾದ ಶ್ರೀ ಹೆಚ್.ಎಂ. ಗಣೇಶ್‌ಪ್ರಸಾದ್, ಶ್ರೀ ಡಿ. ರವಿಶಂಕರ್, ಶ್ರೀಮತಿ ಡಿ. ಭಾರತಿ, ಶ್ರೀ ದೊಡ್ಡಸ್ವಾಮೇಗೌಡ, ಶ್ರೀ ತೋಂಟದಾರ್ಯ ಮೊದಲಾದವರು ಉಪಸ್ಥಿತರಿದ್ದರು. ಪ್ರೊ. ಮೊರಬದ ಮಲ್ಲಿಕಾರ್ಜುನ ಉಪನ್ಯಾಸ ನೀಡಿದರು. ಶ್ರೀ ಹಾಡ್ಯ ಮಹದೇವಸ್ವಾಮಿ ಪ್ರಾಸ್ತಾವಿಕವಾಗಿ ಮಾತನಾಡಿದರು.

□

## ಲೇಖಕರ ವಿಳಾಸ

**ಶ್ರೀ ವೆಂಕಟೇಶ ಕೆ. ಜನಾದ್ರಿ**
ಸಹಾಯಕ ಲೆಕ್ಕಾಧಿಕಾರಿ
ಕಲಬುರ್ಗಿ – ಭಾಗ 2
ಕಲಬುರ್ಗಿ 585 102
ಮೊ : 99453 30492

**ಶ್ರೀ ಎಚ್.ಎಸ್. ಸಿದ್ಧಗಂಗಪ್ಪ**
ನಂ.1617, ಮಾತೃಶ್ರೀ, 8ನೇ ಬ್ಲಾಕ್
ಸ್ಫೂರ್ತಿಧಾಮದ ಎದುರು
ಸರ್ ಎಂ.ವಿ. ಮುಂದುವರೆದ ಬಡಾವಣೆ
ಮುದ್ದಿನಪಾಳ್ಯ ಮುಖ್ಯರಸ್ತೆ
ಬೆಂಗಳೂರು 560 091
ಮೊ : 98455 65871

**ಶ್ರೀ ಕೆ.ಎಸ್. ಮಹದೇವಪ್ರಸಾದ್**
ಕೇತಹಳ್ಳಿ ಗ್ರಾಮ
ಹರವೆ ಹೋಬಳಿ
ಚಾಮರಾಜನಗರ ತಾ. & ಜಿ. 571 128
ಮೊ : 97436 31361

**ಶ್ರೀ ಸ.ರಾ. ಸುಳಕೂಡೆ**
ನಂ.1319, 'ಶ್ರೀ ಶಿವಪ್ರಸಾದ'
ರಾಮತೀರ್ಥನಗರ
ಬೆಳಗಾವಿ 590 015
ಮೊ : 98444 53343

ಶಿಶುವೆನ್ನಬಹುದೆ, ನಂಬಿಯಣ್ಣನ
ಸೂಕ್ಷ್ಮನೆನಬಹುದೆ ರವಿಯನು, ಜಗವ ಬೆಳಗುವ
ದೃಷ್ಟಿ ಕಿರಿದೆನ್ನಬಹುದೆ, ಸೃಷ್ಟಿಯನು ಕಾಣ್ಬ
ಭಾವ ಕಿರಿದೆನ್ನಬಹುದೆ, ಬಳ್ಳ ಲಿಂಗವಾದುದನು
ಕೂಡಲಸಂಗಮದೇವಯ್ಯಾ,
ಯುಗಜುಗವೆಲ್ಲವನೂ ಮೀರಿದ ಶರಣನ
ಕಿರಿದೆನಬಹುದೆ, ಚೆನ್ನಬಸವಣ್ಣನ

**ಬಸವಣ್ಣ**

ಹಿಂಬದಿ ಪುಟದ ಚಿತ್ರ

ಮೈಸೂರು ಶ್ರೀ ಸುತ್ತೂರು ಮಠಕ್ಕೆ ಕೇಂದ್ರ ಸಚಿವರಾದ ಶ್ರೀ ಧರ್ಮೇಂದ್ರ ಪ್ರಧಾನ್‌ರವರು ಭೇಟಿ ನೀಡಿದ ಸಂದರ್ಭದಲ್ಲಿ ಪರಮಪೂಜ್ಯ ಜಗದ್ಗುರುಗಳವರು ಸನ್ಮಾನಿಸಿ ಆಶೀರ್ವದಿಸಿದರು. ಡಾ. ಬಿ. ಸುರೇಶ್ ಹಾಗೂ ಡಾ. ಸಿ.ಜಿ. ಬೆಟಸೂರಮಠರವರು ಗಳಿದ್ದಾರೆ (26 ಮಾರ್ಚ್ 2026)

**ಫಾರಂ (ರೂಲ್ 8 ರಂತೆ)**

**'ಪ್ರಸಾದ' ದ್ವೈಮಾಸಿಕದ ಮಾಲಿಕತ್ವ ಮತ್ತು ಇತರ ವಿವರಗಳು**


| | | |
|---|---|---|
| 1. ಪತ್ರಿಕೆಯ ಹೆಸರು ಮತ್ತು ವಿಳಾಸ | : | ಪ್ರಸಾದ<br>ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು |
| 2. ದ್ವೈಮಾಸಿಕವೆ ? ಮಾಸಿಕವೆ ?<br>ವಾರಪತ್ರಿಕೆಯೆ ? | : | ಮಾಸಿಕ |
| 3. ಪ್ರಕಾಶಕರ ಹೆಸರು ಮತ್ತು ವಿಳಾಸ | : | ಡಾ. ಸಿ.ಜಿ. ಬೆಟಸೂರಮಠ<br>ಕಾರ್ಯನಿರ್ವಾಹಕ ಕಾರ್ಯದರ್ಶಿ<br>ಜೆಎಸ್‌ಎಸ್ ಮಹಾವಿದ್ಯಾಪೀಠ<br>ಮೈಸೂರು 570 004 |
| 4. ಸಂಪಾದಕರ ಹೆಸರು | : | ಡಾ. ಎಂ.ಎನ್. ನಂದೀಶ್ ಹಂಚೆ |
| ಭಾರತೀಯರೆ, ಹೊರದೇಶದವರೆ ? | : | ಭಾರತೀಯರು |
| ಮತ್ತು ವಿಳಾಸ | : | ಪ್ರಕಟಣ ವಿಭಾಗ<br>ಜೆಎಸ್‌ಎಸ್ ಮಹಾವಿದ್ಯಾಪೀಠ<br>ಮೈಸೂರು 570 004 |
| 5. ಮುದ್ರಕರ ಹೆಸರು ಮತ್ತು ವಿಳಾಸ | : | ಜೆಎಸ್‌ಎಸ್ ಮುದ್ರಣಾಲಯ<br>ಮೈಸೂರು 570 004 |
| 6. ಭಾರತೀಯರೆ, ಹೊರದೇಶದವರೆ ? | : | ಭಾರತೀಯರು |
| 7. ಪತ್ರಿಕೆಯ ಮಾಲೀಕತ್ವ ಮತ್ತು ವಿಳಾಸ<br>ಒಬ್ಬರಿಗಿಂತ ಹೆಚ್ಚು ಜನ ಅದರ ಒಡೆತನದಲ್ಲಿದ್ದರೆ ಅವರ ಹೆಸರು, ವಿಳಾಸ ಮತ್ತು ವಿವರಗಳು | : | ಜೆಎಸ್‌ಎಸ್ ಮಹಾವಿದ್ಯಾಪೀಠ<br>ಮೈಸೂರು 570 004 |

ಮೇಲಿನ ವಿವರಗಳು ಸತ್ಯ ಮತ್ತು ನೈಜ ವಿವರಗಳೆಂದು ಹೇಳುತ್ತೇನೆ.

ಸಿ.ಜಿ. ಬೆಟಸೂರಮಠ
ಪ್ರಕಾಶಕ, 'ಪ್ರಸಾದ' ಮಾಸಿಕ
ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು



ಮೈಸೂರು ಸರಸ್ವತಿಪುರಂನ ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಶ್ರೀ ಗಾನಯೋಗಿ ಕಲಾ ಟ್ರಸ್ಟ್ ವತಿಯಿಂದ ಏರ್ಪಡಿಸಿದ್ದ ಗಾನಯೋಗಿ ಪಂಡಿತ ಪಂಚಾಕ್ಷರಿ ಗವಾಯಿಗಳ ಹಾಗೂ 135ನೇ ಪದ್ಮಭೂಷಣ ಡಾ. ಪುಟ್ಟರಾಜ ಗವಾಯಿಗಳ 112ನೇ ಜಯಂತ್ಯುತ್ಸವ, ಪ್ರಶಸ್ತಿ ಪ್ರದಾನ ಹಾಗೂ ಸಂಗೀತೋತ್ಸವವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಶ್ರೀ ಹೆಚ್.ಎನ್. ಲೋಕೇಶಪ್ಪ, ಪಂ. ಎಂ. ವೆಂಕಟೇಶಕುಮಾರ್, ಕುಂದೂರು ಮಠದ ಶ್ರೀಗಳು, ಶ್ರೀ ಕಲ್ಲಯ್ಯಜ್ಜನವರು ಹಾಗೂ ಶ್ರೀ ತೋಂಟದಾರ್ಯರವರುಗಳಿದ್ದಾರೆ (15 ಮಾರ್ಚ್ 2026)




ಮೈಸೂರು ಸರಸ್ವತಿಪುರಂ ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಕೆಂದಾವರೆ ಮಹದೇವಪ್ಪ ಸೇವಾ ಟ್ರಸ್ಟ್ ವತಿಯಿಂದ ಏರ್ಪಡಿಸಿದ್ದ ಪದ್ಮಭೂಷಣ ಡಾ. ಎಂ. ಮಹದೇವಪ್ಪನವರ ಜೀವನಾಧಾರಿತ 'ಕೃಷಿ ಋಷಿ ನಡೆದು ಬಂದ ದಾರಿ' ಕೃತಿಯನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಲೋಕಾರ್ಪಣೆಗೊಳಿಸಲಾಯಿತು. ಶ್ರೀ ಚಂದ್ರಶೇಖರ್, ಶ್ರೀ ಪ್ರಕಾಶ್ ಚಿಕ್ಕಪಾಳ್ಯ, ಶ್ರೀ ರಾಜೇಂದ್ರ ಮಹದೇವಪ್ಪ, ಶ್ರೀಮತಿ ಮಮತ ಶೇಖರ್, ಡಾ. ಎಂ.ಎನ್. ಶೀಲವಂತರ್, ಡಾ. ಗೊ.ರು. ಚನ್ನಬಸಪ್ಪ, ಗೌ.ನ್ಯಾ. ಶ್ರೀ ವಿ. ರಾಮಸುಬ್ರಮಣಿಯನ್, ಪ್ರೊ. ಎಲ್. ಎಸ್. ಶಶಿಧರ ಹಾಗೂ ಶ್ರೀ ಕೆ.ಸಿ. ಶಿವಪ್ಪನವರುಗಳಿದ್ದಾರೆ (14 ಮಾರ್ಚ್ 2026)



ಶಿವಮೊಗ್ಗದಲ್ಲಿ ಏಳನೆಯ ಜಿಲ್ಲಾ ಜಿಲ್ಲಾ ಶರಣ ಸಾಹಿತ್ಯ ಸಮ್ಮೇಳನವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಶ್ರೀ ಎಸ್. ರುದ್ರೇಗೌಡ, ಡಾ. ಸಿ. ಸೋಮಶೇಖರ್, ಶ್ರೀ ಬಿ.ವೈ. ರಾಘವೇಂದ್ರ ಹಾಗೂ ಸಮ್ಮೇಳನಾಧ್ಯಕ್ಷರಾದ ಆನಂದಪುರಂ ಜಗದ್ಗುರುಗಳವರಿದ್ದಾರೆ (24 ಮಾರ್ಚ್ 2026)



ಟಿ. ನರಸೀಪುರ ತಾಲ್ಲೂಕು ಮಾದ್ರಹಳ್ಳಿ ಶ್ರೀ ಪಟ್ಟದ ಮಠದ ಶ್ರೀ ಚನ್ನಮಲ್ಲಿಕಾರ್ಜುನ ಸ್ವಾಮಿಗಳವರ ಸುವರ್ಣ ಪುಣ್ಯಸ್ಮರಣೋತ್ಸವವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಶ್ರೀ ಪುಟ್ಟಬುದ್ಧಿ, ಶ್ರೀ ಹಿನಕಲ್ ಬಸವರಾಜು, ಕನಕಪುರ, ಪಡುಗೂರು, ಸಿದ್ಧಗಂಗೆ, ಮಾದ್ರಹಳ್ಳಿ, ಬೆಟ್ಟದಪುರ ಮಠಗಳ ಶ್ರೀಗಳು, ಶ್ರೀ ಕೆ.ಪಿ. ಮಹದೇವಸ್ವಾಮಿ, ಕುಂದೂರು ಮಠದ ಶ್ರೀಗಳು, ಶ್ರೀ ಹೆಳವರಹುಂಡಿ ಸಿದ್ಧಪ್ಪ ಹಾಗೂ ಹರವೆ ಶ್ರೀಗಳಿದ್ದಾರೆ (26 ಮಾರ್ಚ್ 2026)




ಮೈಸೂರಿನಲ್ಲಿ ಶ್ರೇಷಾದ್ರಿಪುರಂ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ನೂತನ ಕಟ್ಟಡವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಶ್ರೀ ಬಿ.ಎ. ಅನಂತರಾಮ್, ಶ್ರೀ ಎಸ್. ಶೇಷನಾರಾಯಣ, ಡಾ. ವೂಡೇ ಪಿ. ಕೃಷ್ಣ, ಡಾ. ಎಸ್. ವಿದ್ಯಾಶಂಕರ್, ಶ್ರೀ ಸ್ವಾಮಿ ಮುಕ್ತಿದಾನಂದಜೀ ಮಹಾರಾಜ್, ಶ್ರೀ ಎನ್.ಆರ್. ಪಂಡಿತಾರಾಧ್ಯ, ಶ್ರೀ ಟಿ.ಎಸ್. ಹೆಂಜಾರಪ್ಪ, ಶ್ರೀ ಜಿ. ಪರಮಶಿವಯ್ಯ, ಶ್ರೀ ಎಂ.ಎಸ್. ನಟರಾಜ್ ಮೊದಲಾದವರುಗಳಿದ್ದಾರೆ (23 ಮಾರ್ಚ್ 2026)



ಹುಣಸೂರು ತಾಲ್ಲೂಕು ಮಾದಹಳ್ಳಿ ಶ್ರೀ ಉಕ್ಕಿನಕಂತೆ ಮಠದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಶ್ರೀ ಗುರು ಬೂದಿಸ್ವಾಮಿಗಳ 397ನೇ ಆರಾಧನೆ, ಶ್ರೀಮಠದ ನೂತನ ಕಟ್ಟಡ, ಹದಿನಾರು ನವೀಕೃತ ಗದ್ದುಗೆಗಳು ಹಾಗೂ ಶತಾಯುಷಿ ಶ್ರೀ ಸಿದ್ದಲಿಂಗ ಸ್ವಾಮಿಗಳ ಸಭಾಂಗಣಗಳ ಉದ್ಘಾಟನೆಯ ಅಂಗವಾಗಿ ನಡೆದ ಧಾರ್ಮಿಕ ಸಭೆಯನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ಉದ್ಘಾಟಿಸಿದರು. ಶ್ರೀ ಯು.ಎಸ್, ಶೇಖರ್, ಶ್ರೀ ಹೆಚ್.ಎಸ್. ಸೋಮಶೇಖರ್, ಶ್ರೀ ಹೆಚ್.ಪಿ. ಮಂಜುನಾಥ್, ಡಾ. ವಿ. ವೃಷಭೇಂದ್ರಸ್ವಾಮಿ, ಶ್ರೀ ಸಿ.ಪಿ. ರಮೇಶ್‌ಕುಮಾರ್, ಶ್ರೀ ಎಂ. ರುದ್ರೇಶ್, ಮಾದಹಳ್ಳಿ ಶ್ರೀಗಳು, ಕನಕಪುರ ಮತ್ತು ಗಾವಡಗೆರೆ ಶ್ರೀಗಳು ಮೊದಲಾದವರುಗಳಿದ್ದಾರೆ (6 ಮಾರ್ಚ್ 2026)



ಹುಣಸೂರು ತಾಲ್ಲೂಕು ಮಾದಹಳ್ಳಿ ಶ್ರೀ ಉಕ್ಕಿನಕಂತೆ ಮಠದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಶ್ರೀ ಗುರು ಬೂದಿಸ್ವಾಮಿಗಳ 397ನೇ ಆರಾಧನೆ, ಶ್ರೀಮಠದ ನೂತನ ಕಟ್ಟಡ, ಹದಿನಾರು ನವೀಕೃತ ಗದ್ದುಗೆಗಳು ಹಾಗೂ ಶತಾಯುಷಿ ಶ್ರೀ ಸಿದ್ದಲಿಂಗ ಸ್ವಾಮಿಗಳ ಸಭಾಂಗಣ ಉದ್ಘಾಟನೆಯ ಅಂಗವಾಗಿ ಏರ್ಪಡಿಸಿದ್ದ ಶರಣ ಸಮಾವೇಶವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಸಚಿವರಾದ ಡಾ. ಹೆಚ್.ಸಿ. ಮಹದೇವಪ್ಪನವರು ಉದ್ಘಾಟಿಸಿದರು. ಶ್ರೀ ಪ್ರದೀಪ್‌ಕುಮಾರ್, ಮಾದಹಳ್ಳಿ, ಸಿದ್ಧಗಂಗಾ, ವಾಟಾಳು, ಕನಕಪುರ ಶ್ರೀಗಳು, ಶ್ರೀ ಯು.ಎಸ್. ಶೇಖರ್, ಅರಮೇರಿ, ಕೊಡ್ಲಿಪೇಟೆ ಮತ್ತು ಬೆಟ್ಟದಪುರ ಶ್ರೀಗಳಿದ್ದಾರೆ (7 ಮಾರ್ಚ್ 2026)



ಹುಣಸೂರು ತಾಲ್ಲೂಕು ಮಾದಹಳ್ಳಿ ಶ್ರೀ ಉಕ್ಕಿನಕಂತೆ ಮಠದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಶ್ರೀ ಗುರು ಬೂದಿಸ್ವಾಮಿಗಳ 397ನೇ ಆರಾಧನೆ, ಶ್ರೀಮಠದ ನೂತನ ಕಟ್ಟಡ, ಹದಿನಾರು ನವೀಕೃತ ಗದ್ದುಗೆಗಳು ಹಾಗೂ ಶತಾಯುಷಿ ಶ್ರೀ ಸಿದ್ದಲಿಂಗ ಸ್ವಾಮಿಗಳ ಸಭಾಂಗಣ ಉದ್ಘಾಟನೆಯ ಅಂಗವಾಗಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಏರ್ಪಡಿಸಿದ್ದ ಶರಣ ಸಮಾವೇಶದಲ್ಲಿ ಕೇಂದ್ರ ಸಚಿವರಾದ ಶ್ರೀ ಹೆಚ್.ಡಿ. ಕುಮಾರಸ್ವಾಮಿಯವರು ಮಾತನಾಡುತ್ತಿರುವುದು. ಶ್ರೀಮತಿ ಲಕ್ಷ್ಮೀ ಆರ್. ಹೆಬ್ಬಾಳ್ಕರ್, ಮಾದಹಳ್ಳಿ ಶ್ರೀಗಳು, ಶ್ರೀ ಜಿ.ಡಿ. ಹರೀಶ್‌ಗೌಡ, ಸಿದ್ಧಗಂಗೆ, ಕನಕಪುರ, ಶ್ರೀಗಳು, ಅರಮೇರಿ, ಕೊಡ್ಲಿಪೇಟೆ. ಕೆ.ಆರ್. ನಗರ ಕಾಗಿನೆಲೆ ಶಾಖಾಮಠದ ಶ್ರೀಗಳು ಹಾಗೂ ಶ್ರೀ ಸಾ.ರಾ. ಮಹೇಶ್‌ರವರುಗಳಿದ್ದಾರೆ (7 ಮಾರ್ಚ್ 2026)




ಸುತ್ತೂರು ಶ್ರೀಕ್ಷೇತ್ರದಲ್ಲಿ ಯುಗಾದಿ, ಅಲ್ಲಮಪ್ರಭು ಜಯಂತಿ ಹಾಗೂ ಪಂಚಾಂಗ ಪಠಣ ಕಾರ್ಯಕ್ರಮಗಳು ಪರಮಪೂಜ್ಯ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ಜರುಗಿದವು. ಪಂಚಾಂಗಕರ್ತರಾದ ಸಿದ್ಧಾಂತಿ ಡಾ. ಕೆ.ಜಿ. ಪುಟ್ಟಹೊನ್ನಯ್ಯನವರು ಪಂಚಾಂಗ ಪಠಣ ಮಾಡಿದರು. ಡಾ. ಜಿ.ವಿ. ಮಂಜುನಾಥರವರು, ಡಾ. ವೂಡೆ ಪಿ. ಕೃಷ್ಣರವರು ಹಾಗೂ ಮಠಾಧೀಶರುಗಳಿದ್ದಾರೆ (19 ಮಾರ್ಚ್ 2026)




ಮೈಸೂರು ಶ್ರೀ ಸುತ್ತೂರು ಮಠದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ 289ನೇ ಬೆಳದಿಂಗಳ ಸಂಗೀತ ಕಾರ್ಯಕ್ರಮದಲ್ಲಿ ವಿದ್ವಾನ್ ಕಾರ್ತಿಕ್ ಮತ್ತೂರ್‌ರವರು ಗಾಯನ ಪ್ರಸ್ತುತಿಪಡಿಸಿದರು. ಪಕ್ಕವಾದ್ಯದಲ್ಲಿ ವಿದ್ವಾನ್ ಫಣೀಂದ್ರ ಭಾಸ್ಕರ ಹಾಗೂ ವಿದ್ವಾನ್ ಶರತ್ ಕೌಶಿಕ್ ಹಾಗೂ ವಿದ್ವಾನ್ ಕೇಶವ ಮೋಹನ್‌ಕುಮಾರ್‌ರವರುಗಳಿದ್ದಾರೆ (3 ಮಾರ್ಚ್ 2026)



ಸಿವಿಲ್ ನ್ಯಾಯಾಧೀಶರುಗಳಾಗಿ ಇತ್ತಿಚೇಗೆ ಆಯ್ಕೆಯಾಗಿರುವ ಜೆಎಸ್ಎಸ್ ಕಾನೂನು ಕಾಲೇಜಿನ ಹಿರಿಯ ವಿದ್ಯಾರ್ಥಿಗಳಾದ ರಾಹುಲ್ ನ್ಯಾಮಗೌಡ, ಕೆ.ಬಿ. ರೋಶಿನಿ, ನಿತ್ಯಾ ಗುಜ್ಜರ್, ರಶ್ಮಿ ಮೂಡಲಗಿ, ಕೆ.ಸಿ. ಸುಹಾಸ್ ಹಾಗೂ ಸುಪ್ರಿಯಾ ನವಲಿಯವರುಗಳನ್ನು ಮೈಸೂರು ಶ್ರೀ ಸುತ್ತೂರು ಮಠದಲ್ಲಿ ಪರಮಪೂಜ್ಯ ಜಗದ್ಗುರುಗಳವರು ಸನ್ಮಾನಿಸಿ ಆಶೀರ್ವದಿಸಿದರು. ಅವರ ಪೋಷಕರುಗಳು ಚಿತ್ರದಲ್ಲಿದ್ದಾರೆ (6 ಮಾರ್ಚ್ 2026)

Registered with the Registrar of Newspapers in India Under No. 50622 / 1986
'Prasada' Monthly, Vol. 41 Issue No. 3, March 2026



ISSN 2583-7648
9 772583 764006

ಬಿಡಿ ಪ್ರತಿ : ರೂ.10/–

e-mail: prasada@jssonline.org * www.jssonline.org